ಪ್ರಾತಃ ಸಂಧ್ಯಾವಂದನೆ

ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀ ನರಹರಿರಾಮಕೃಷ್ಣವೇದವ್ಯಾಸಾಯ ನಮಃ। ಶ್ರೀಭಾರತೀರಮಣಮುಖ್ಯವಾಯು ಹನುಮದ್ಭೀಮಮಧ್ವಗುರುಭ್ಯೋನಮಃ।

ಶ್ರೀ ವಾದಿರಾಜ ಗುರುಭ್ಯೋ ನಮಃ। ಶ್ರೀಭೂಮಂಡಲಸ್ಥ ಸದ್ವೈಷ್ಣವೇಭ್ಯೋನಮಃ।

ಶ್ರೀ ಸಂಧ್ಯಾವಂದನೆ ಮುಂದುವರೆದುದು.

**ಶ್ರೀತಿಮ್ಮಣ್ಣಾರ್ಯರು:-** ತತ ಅಸ್ತ್ರೋಪಸಂಹಾರಃ ॥ ಪ್ರಾಣಾಯಾಮಂ ಕೃತ್ವಾ 'ಆಯಾತುದೇವೀ'ತ್ಯಾರಭ್ಯ ಗಾಯತ್ರೀಮಾವಾಹಯಾಮೀತ್ಯಂತಂ ಶ್ರೌತಮಂತ್ರಂ ಪರಿತ್ವಾ ಆಗಚ್ಛವರದಾದೇವೀತ್ಯಾದಿ ಸ್ಮಾರ್ತ ಮಂತ್ರಾನ್ ಪಠೇಸನಂ ವಿನಾ ಯತ್ ಭೂತಶುದ್ಧಿಂ॥ ತಥಾ ॥ ವಿನಾ ಚ ಮಾತೃಕಾನ್ಯಾಸಂ ಜಪೋ ನಿಷ್ಫಲತಾಮಿಯಾತ್ । ಭೂಶುದ್ಧಿಂ ಭೂತಶುದ್ಧಿಂ ಚ ಕೃತ್ವಾ ಮೂಲೇನ ಮಂತ್ರಯೇತ್ । ಶೋಷಣಂ ದಾಹನಂ ಪ್ಲಾವಂ ಕುರ್ಯಾತ್ಪ್ರಣವಾಕ್ಷರೈಃ ವಾಯ್ವಗ್ನಿವರುಣಾನಾಂ ಚ ಬೀಜಾನಿ ಯರವಾಃ ಕ್ರಮಾತ್ । ಪ್ರತ್ಯೇಕಂ ಮೇಲಯಿತ್ವಾ ಚ ಪ್ರಣವೇನ ಸಹೋಚ್ಚರೇತ್ । ಮಣಿಬಂಧೇ ಪ್ರಕೋಷ್ಟೇ ಚ ಕರ್ಪೂರೇ ಹಸ್ತಸಂಧಿಷು । ತತ್ಪೃಷ್ಟಪಾರ್ಶ್ವಯೋಶ್ಚೈವ ಕರಶುದ್ಧಿರುದಾಹೃತಾ । ಋಷೀನ್ ಮೂರ್ಧ್ನಿನ್ಯಸೇತ್ ಪೂರ್ವಂ ಮುಖೇ ಛಂದ ಉದಾಹೃತಂ। ದೇವತಾಂ ಹೃದಿವಿನ್ಯಸ್ಯ ನಾಭೌ ಬೀಜಮಿತಿ ಸ್ಮೃತಂ। ಆಧಾರೇ ವಿನ್ಯಸೇತ್ ಶಕ್ತಿಂ ಕೀಲಕಂ ಪಾದ ಏವ ಚ। ಏವಂ ನ್ಯಾಸವಿಧಿಂ ಕುರ್ಯಾತ್ ಋಷ್ಯಾದಿನ್ಯಾಸ ಪೂರ್ವಕಂ । ಜಪಸ್ಯ ದೇಶವಿಶೇಷಾಃ । ನದೀತೀರೇ ತಥಾ ಗೋಷ್ಠೇ ಪರ್ವತಾಗ್ರೇ ವಿಶೇಷತಃ। ಶಿವವಿಷ್ಣುಸ್ಸಮೀಪಸ್ಥೋ ಗಾಯತ್ರೀಜಪಮಾಚರೇತ್ । ಸೂರ್ಯಸ್ಯಾಗ್ನೇ- ರ್ಗುರೋರಿಂದೋರ್ದೇವಸ್ಯ ಚ ಜಲಸ್ಯ ಚ । ವಿಪ್ರಾಣಾಂ ಚ ಗವಾಂ ಚೈವ ಸನ್ನಿಧೌ ಶಸ್ಯತೇ ಜಪಃ ॥ ಸ್ಥಳವಿಶೇಷೇಣ ಫಲಾನಿ ॥ ಗೃಹೇತ್ವೇಕಗುಣಂ ಜಪ್ಯಂ ಗೋಷ್ಠೇ ಶತಗುಣಂ ಭವೇತ್ । ಸಹಸ್ರಂ ಪುಣ್ಯತೀರ್ಥೇಷು ಅರಣ್ಯೇಪ್ಯಯುತಂ ಭವೇತ್ । ಆಸನ ವಿಶೇಷಫಲಾನಿ ಚ ॥ ಕೌಶೇಯಂ ಕಂಬಳಂ ವಾಪಿ ಹ್ಯಜಿನಂ ಪಟಮೇವಚ । ವಾರಿಜಂ ತಾಲಪರ್ಣಂ ಚದ್ಯಾಸನಂ ಪರಿಕಲ್ಪಯೇತ್ । ಕೃಷ್ಣಾಜಿನಂ ಕಂಬಳಂ ವಾರಾನ್ಯದಾಸನಮುಚ್ಯತೇ। ವಂಶಾಸ್ಮದಾರುಧರಣೀತೃಣಾಪಲ್ಲವ ನಿರ್ಮಿತಂ। ವರ್ಜಯೇದಾಸನಂ ಮಂತ್ರೀ ದಾರಿದ್ರ್ಯವ್ಯಾಧಿ ದುಃಖದಂ। ಕೃಷ್ಣಾಜಿನೇ ಜ್ಞಾನಸಿದ್ಧಿಃ ಮೋಕ್ಷಃ ಶ್ರೀವ್ಯಾಘ್ರಚರ್ಮಣಿ । ಪಟ್ವಾಸನೇ ವ್ಯಾಧಿನಾಶಃ ಕಂಬಳಂ ದುಃಖನಾಶನಂ । ಅಭಿಚಾರಾದಿಕೇ ನೀಲಂ ರಕ್ತಂ ವಶ್ಯಾದಿಕರ್ಮಣಿ । ಧವಲಂ ಶಾಂತಿಕೇ ಭೋಕ್ಷೇ ಸರ್ವಾರ್ಥೇ ಚಿತ್ರಕಂಬಲಂ । ವಂಶಾಸನೇ ದರಿದ್ರಃ ಸ್ಯಾತ್ಪಾಷಾಣೇ ವ್ಯಾಧಿಸಂಭವಃ । ಧರಿಣ್ಯಾಂ ದುಃಖಸಂಭೂತಿ ದೌರ್ಭಾಗ್ಯಂ ದಾರುಕಾಸನೇ । ತೃಣಾಸನೇ ಯಶೋಹಾನಿಃ ಪಲ್ಲವೇ ಚಿತ್ತವಿಭ್ರಮಃ। ಆಸನಂ ಬಾಹ್ಯಂ ಆಂಗಿಕಂ ಚ॥ಬಾಹ್ಯಂ ಚಿತ್ರಕಂಬಳಾನಿ। ಆಂಗಿಕಂ ವೀರಸ್ವಸ್ತಿಕಾದಿ॥ ಉಭಯೋರಾವಶ್ಯಕತ್ವಂ। 'ಆಸೀನಃ ಸಂಭವಾತ್ ಅಚಲತ್ವಂ ಚಾಪೇಕ್ಷ್ಯೇತ್ಯ'ಧಿಕರಣಭಾಷ್ಯಯೋರ್ವರ್ಣಿತಂ। ನಿಯಮಾ ವೀರಪದ್ಮೇ ಸ್ವಸ್ತಿಕಾದ್ಯಾನಿ ಚಾಸನಂ ॥ ತಲ್ಲಕ್ಷಣಂ ॥ ಊರ್ವೋರಧಃ ಪದೋರೂರ್ಧ್ವಂ ವಿಭಾಗೇನೇತಿ ತತ್ತ್ರಿಧಾ । ಆಸನತ್ರಯಮುದ್ದಿಷ್ಟಂ ಮಂತ್ರಸ್ಮರಣಪೂರ್ವಕಂ ಇತಿ ತಂತ್ರಸಾರೇ ಸಮ್ಯಗುಕ್ತಂ।

**ಭೂತೋಚ್ಚಾಟನೆ**

ಅಪಸರ್ಪಂತ್ವಿತಸ್ಯ ಮಂತ್ರಸ್ಯ ವಾಮದೇವೋ ಭೂತಾನ್ಯನುಷ್ಟುಪ್ ಭೂತೋಚ್ಚಾಟನೇ ವಿನಿಯೋಗಃ

**ಅಪಸರ್ಪಂತು ಯೇ ಭೂತಾಃ । ಯೇ ಭೂತಾ ಭುವಿಸಂಸ್ಥಿತಾಃ । ಯೇ ಭೂತಾ ವಿಘ್ನಕರ್ತಾರಃ ತೇ ನಶ್ಯಂತು ಶಿವಾಜ್ಞಯಾ । ಅಪಕ್ರಾಮಂತು ಭೂತಾದ್ಯಾಕ್ರೂರಾಶ್ಚೈವತು ರಾಕ್ಷಸಾಃ । ತೇಷಾಮಪ್ಯವಿರೋಧೇನ ಬ್ರಹ್ಮಕರ್ಮಸಮಾರಭೇ ।**

( ಎಂದು ಛೋಟಿಕಾಮುದ್ರಾ ಪ್ರದರ್ಶ್ಯ= ಎಡಭಾಗದಲ್ಲಿ ಚಿಟಿಕೆ ಹೊಡೆಯುವುದು)

ಅಪಸರ್ಪಂತು ಎಂಬುವ ಈ ಮಂತ್ರಕ್ಕೆ ವಾಮದೇವನಾಮಕ ಪರಮಾತ್ಮನು ಋಷಿ. ಇದರಿಂದ ಭೂತೋಚ್ಚಾಟನೆ ಮಾಡುತ್ತೇನೆ.

ಭುವಿ= ಭೂಮಿಯಲ್ಲಿ ; ಸಂಸ್ಥಿತಾಃ= ವಾಸಮಾಡಿಕೊಂಡಿರುವ, ಯೇ ಭೂತಾಃ= ಯಾವಭೂತಗಳಿವೆಯೋ ಅವೆಲ್ಲಾ ; ವಿಘ್ನಕರ್ತಾರಃ= ಸತ್ಕಾರ್ಯಕ್ಕೆ ಅಡ್ಡಿಯನ್ನು ಮಾಡುವ ; ಯೇ ಭೂತಾಃ= ಯಾವಭೂತಗಳಿವೆಯೋ ಅವೆಲ್ಲಾ; ಯಾತುಧಾನಾಃ= ರಾಕ್ಷಸರುಗಳು; ಪಿಶಾಚಾಶ್ಚ=

ಪಿಶಾಚಗಳು; ಕ್ಷೂರಾಶ್ಚೈವತು =ಕ್ರೂರ ರಾದಂಥಹಾ(ಮತ್ತು) ಇತರರಾಕ್ಷಸರುಗಳು ; (ಇವೆಲ್ಲಾ ರಾಕ್ಷಸರ ಪ್ರಭೇದಗಳು) ಶಿವಾಜ್ಞಯಾ=ಭೂತ ಗಣಗಳಿಗೆ ಅಧಿಪತಿಯಾದ ರುದ್ರದೇವರ ಆಜ್ಞಾದಿಂದ; ತೇ=ಅವರೆಲ್ಲರೂ; ನಶ್ಯಂತು = ನಾಶಹೊಂದಲಿ. ಭುವಿ=ಭೂಮಿಯಲ್ಲಿ; ಸಂಸ್ಥಿತಾಃ= ಇರತಕ್ಕಂತಹಾ; ಅತ್ರ=(ನಾನು ಕೂತುಕೊಂಡಿರುವ) ಈ ಸ್ಥಳದಲ್ಲಿ ; ನಿವಸಂತಿ= ವಾಸಮಾಡಿಕೊಂಡಿರುವ; ಯೇ=ಯಾವ; ದೇವತಾಃ= ದೇವತೆಗಳು; ಅಪಸರ್ಪಂತು= ಪ್ರಾಪ್ತರಾಗಲಿ(ಬರಲಿ); ತೇಷಾಮಪಿ=ಆ ದೇವತೆಗಳಿಗೆ ; ಅವಿರೋಧೇನ= ವಿರೋಧರಾಹಿತ್ಯದಿಂದ; ಬ್ರಹ್ಮಕರ್ಮ= ದೇವತಾಕರ್ಮ ಅಥವಾ ವೇದೋಕ್ತಕರ್ಮವು; ಸಮಾರಭೇ=ಪ್ರಾರಂಭಮಾಡುತ್ತೇನೆ;

## ಆಸನ ಶುದ್ಧಿ

ಪೃಥ್ವೀತಿ ಮಂತ್ರಸ್ಯ ಮೇರುಪೃಷ್ಠ ಋಷಿಃ। ಕೂರ್ಮೋದೇವತಾ। ಸುತಲಂ ಛಂದಃ। ಆಸನೇ ವಿನಿಯೋಗಃ।

**ಓಂ ಪೃಥ್ವೀ ತ್ವಯಾ ಧೃತಾ ಲೋಕಾ ದೇವಿ ತ್ವಂ ವಿಷ್ಣುನಾ ಧೃತಾ ।**

**ತ್ವಂಚ ಧಾರಯ ಮಾಂ ದೇವಿ ಪವಿತ್ರಂ ಕುರುಚಾಸನಂ॥**

**ಮಾಂ ಚ ಪೂತಂ ಕುರುಧರೇ ನತೋऽಸ್ಮಿ ತ್ವಾಂ ಸುರೇಶ್ವರೀ ।**

**ಆಸನೇ ಸೋಮಮಂಡಲೇ ಕೂರ್ಮಸ್ಕಂಧೇ ಉಪವಿಷ್ಟೋऽಸ್ಮಿ॥**

ಓಂ ಭೂರ್ಭುವಃ ಸ್ವಃ ಓಂ॥ ಅನಂತಾಸನಾಯ ನಮಃ। (ಎಂದು ಕುಳಿತು)

***ಮಂತ್ರಾರ್ಥ:-*** ಈ ಪೃಥಿವಿಯೆಂಬುವ ಮಂತ್ರಕ್ಕೆ ಮೇರುಪೃಷ್ಠವೆಂಬ ಹೆಸರುಳ್ಳ ಋಷಿ। ದೇವತಾ- ಕೂರ್ಮ। ಸುತಲವೆಂಬುವ ಛಂದಸ್ಸು। ಈ ಮಂತ್ರವನ್ನು ಉಚ್ಚಾರ ಮಾಡುತ್ತಾ ಆಹ್ನೀಕಾರ್ಥವಾಗಿ ಆಸನದಲ್ಲಿ ಕೂಡಬೇಕು.

ಹೇ ಪೃಥಿವೀ= ಎಲೈ ಪೃಥಿವಿಯೇ; ಲೋಕಾಃ=ಊರ್ಧ್ವ ಅಧೋಲೋಕಗಳು; ತ್ವಯಾ= ನಿನ್ನಿಂದ; ಧೃತಾ=ಧಾರಣಮಾಡಲ್ಪಟ್ಟಿದೆ; (ಹೇ) ದೇವೀ= ಎಲೈ ದೇವಿಯೇ; ವಿಷ್ಣುನಾ= ವ್ಯಾಪ್ತನಾದ ವಿಷ್ಣುಶಬ್ದವಾಚ್ಯನಾದ ಪರಮಾತ್ಮನಿಂದ; ಧೃತಾ=ಧಾರಣಮಾಡಲ್ಪಟ್ಟಿದ್ದಿ. (ಎನ್ನಲಾಗಿ ಸಮಸ್ತಲೋಕಗಳಿಗೆ ದೇವರೇ ಆಧಾರನೆಂದರ್ಥ) ಹೇ ದೇವಿ= ಎಲೈ ಕ್ರೀಡಾದಿ ಗುಣವಿಶಿಷ್ಟಳಾದ ಭೂದೇವಿಯೇ ! ತ್ವಂ ಚ=ನೀನಾದರೋ ; ಮಾಂ=ನನ್ನನ್ನು ; ಧಾರಯ= ಧಾರಣಮಾಡು । ಆಸನಂ=ನಾನು ಕುಳಿತಿರುವ ಆಸನವನ್ನು; ಪವಿತ್ರಂ=ಪವಿತ್ರವನ್ನಾಗಿ ; ಕುರು= ಮಾಡು; (ಹೇ)ಧರೇ=ಎಲೈಭೂಮಿಯೇ, ಮಾಂ ಚ=ನನ್ನನ್ನು ಕೂಡಾ; ಪೂತಂ=ಪವಿತ್ರವನ್ನಾಗಿ ಕುರು= ಮಾಡು ; ಸುರೇಶ್ವರೀಂ=ದೇವತಾಶ್ರೇಷ್ಠಳಾದ ; ತ್ವಾಂ=ನಿನ್ನನ್ನು ಕುರಿತು ; ನತೋಸ್ಮಿ= ನಮಸ್ಕಾರವನ್ನು ಮಾಡುತ್ತೇನೆ; ಅನಂತಾಸನಾಯ=ಶೇಷಶಾಯಿಯಾದ ಪರಮಾತ್ಮನೇ ನಿನ- ಗೋಸ್ಕರ ನಮಃ=ನಮಸ್ಕಾರವು; ಓಂ=ನೀನು ಪರಬ್ರಹ್ಮನು; ಭೂಃ=ನೀನು ಗುಣಪೂರ್ಣನು; ಭುವಃ=ನಿರವಧಿಕ ಐಶ್ವರ್ಯಶ್ರೇಷ್ಠನು; ಸುವಃ=ಸಂಪೂರ್ಣಸುಖಸ್ವರೂಪನು ; ಓಂ= ಓಂಕಾರ ನಾಮಕನು.

## ಗುರುನಮಸ್ಕಾರ

**ಸೂಚನೆ:** (ಈ ನಮಸ್ಕಾರಗಳನ್ನು ಮಾಡುವ ಪದ್ಧತಿಯು ಸಾಮಾನ್ಯ ಎಲ್ಲಾ ಪುಸ್ತಕಗಳಲ್ಲಿ ಕಂಡುಬರುವುದರಿಂದ, ಇವುಗಳನ್ನು ಸೇರಿಸಿದೆ.) ಓಂ ಶ್ರೀಗುರುಭ್ಯೋನಮಃ, ಶ್ರೀ ಪರಮಗುರುಭ್ಯೋನಮಃ, ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯೇಭ್ಯೋ ನಮಃ, ಶ್ರೀ ಮಧ್ವಾಂತರ್ಯಾಮಿನ್ ಶ್ರೀ ಹಯಗ್ರೀವರೂಪಿ ವೇದವ್ಯಾಸಾಯ ನಮಃ, ಶ್ರೀ ಭಾರತ್ಯೈನಮಃ, ಶ್ರೀ ಸರಸ್ವತ್ಯೈನಮಃ, ಶ್ರೀ ವಾಯವೇ ನಮಃ, ಶ್ರೀಬ್ರಹ್ಮಣೇ ನಮಃ, ಶ್ರೀ ಮಹಾಲಕ್ಷ್ಮ್ಯೈ ನಮಃ, ಶ್ರೀ ಮಧ್ವಾಂತರ್ಯಾಮಿನ್ ಶ್ರೀ ಲಕ್ಷ್ಮೀನಾರಾಯಣಾಯ ನಮಃ॥ (ಎಂದು ದಶಗುರುಗಳನ್ನು ನಮಸ್ಕರಿಸಿನಂತರ ಗುರೂಪದೇಶವನ್ನು ಪಡೆದು ಪಾಪಪುರುಷವಿಸರ್ಜನ, ತತ್ವನ್ಯಾಸ ಮತ್ತು ಮಾತೃಕಾನ್ಯಾಸವನ್ನು ಮಾಡುವುದು)

ಈ ಪ್ರಕಾರ ಸರ್ವಭೂತೋಚ್ಚಾಟನ ಭೂಪ್ರಾರ್ಥನಾ ಮಾಡಿ ತಾನು ಕುಳಿತಿರುವ ಆಸನವನ್ನು ಸ್ಪರ್ಶಮಾಡತಕ್ಕದ್ದು.

ಕೆಲವರು ಮೇಳೆ ಹೇಳಿದ ಭೂತೋಚ್ಚಾಟನ ,ಭೂಶುದ್ಧಿ , ಆಸನಶುದ್ಧಿ ಮಂತ್ರಗಳು ಗುರುಮಂತ್ರಸ್ಥವಾಗಿರುವುದರಿಂದ ಗುರುಮಂತ್ರವನ್ನು ಸಂಪೂರ್ಣವಾಗಿ ನ್ಯಾಸಪೂರ್ವಕವಾಗಿ ದಿಗ್ಬಂಧನ ಸಹಿತವಾಗಿ ಜಪಿಸಿ ತರುವಾಯದಲ್ಲಿ 'ಓಂ ಇತ್ಯೇಕಾಕ್ಷರಂ ಬ್ರಹ್ಮ' ಮೊದಲು ಮಾಡಿ ಸಮಸ್ತ ಮಂತ್ರಗಳನ್ನು ಹೇಳುತ್ತಾರೆ. 'ಯದ್ಯದಾಚರತಿ ಶ್ರೇಷ್ಠಸ್ತತ್ತ ದೇವೇತರೇಜನಾಃ। ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ'

ಎಂಬುವ ಗೀತೋಕ್ತ್ಯಾಅವರವರ ಸಂಪ್ರದಾಯಾನುಸಾರ ಮಾಡತಕ್ಕದ್ದು.

ಮತ್ತು ಕೆಲವರು ವಯಸ್ಸನ್ನು , ಯೋಗ್ಯತಾವನ್ನು ಅನುಸರಿಸಿ ಈ ಕೆಳಗೆ ಹೇಳುವ ಕ್ರಮದಿಂದ ಸಂಧ್ಯಾವಂದನೆಯನ್ನು ಮಾಡುವಂತೆ ತಿಳಿಯುತ್ತದೆ.

ಪ್ರಥಮದಲ್ಲಿ ಪ್ರಾಣಾಯಾಮಮಾರ್ಜನವನ್ನು ಮಾಡಿ ಪಾಪಪುರುಷವಿಸರ್ಜನಮಾಡಿಕೊಂಡು ಪುನರ್ಮಾರ್ಜನವನ್ನು ಮಾಡಿ ಅರ್ಘ್ಯಪ್ರದಾನವನ್ನು ಮಾಡಿ, ನಂತರ ಕೇಶವಾದಿ ರೂಪಗಳಿಗ್ಯೂ ವಾರಾಧಿಪತಿಗಳಿಗ್ಯೂ, ನವಗ್ರಹ ದೇವತೆಗಳಿಗೂ ತರ್ಪಣಕೊಟ್ಟು, ಅದೇ ಪ್ರಕಾರ ಬ್ರಹ್ಮಯಜ್ಞ, ದೇವತಾ, ಋಷಿ, ಪಿತೃ ತರ್ಪಣಾದಿಗಳು ಮಾಡಿಕೊಂಡು, ನಂತರ ಭೂತೋಚ್ಚಾಟನೆ, ಭೂಶುದ್ಧಿ, ಆಸನಶುದ್ಧಿಗಳನ್ನು ಮಾಡಿಕೊಂಡು, ಗುರುಮಂತ್ರ ಜಪಿಸಿ, ಪಾಪಪುರುಷನನ್ನು ಭಸ್ಮಮಾಡಿ , ವರುಣಬೀಜ ಜಪದಿಂದ ದೇಹಶುದ್ಧಮಾಡಿಕೊಂಡು, ನಂತರ ಮೂಲಮಂತ್ರ , ತತ್ವನ್ಯಾಸ, ಮಾತೃಕಾನ್ಯಾಸ ಮಾಡೋಣ, ನಂತರ ಗಾಯತ್ರೀ ಆಹ್ವಾನ ಜಪಾದಿಗಳು ಮಾಡೋಣ, ತದನಂತರ ಜಪಷಾಡ್ಗುಣ್ಯಾರ್ಥವಾಗಿ ಪುನಃ ಮಾತೃಕಾನ್ಯಾಸ, ತತ್ವನ್ಯಾಸ ಮೂಲಮಂತ್ರಾದಿಗಳನ್ನು ಜಪಮಾಡೋಣ, ನಂತರ ಶಕ್ತ್ಯಾನುಸಾರ ಇತರ ಅಷ್ಟ ಮಹಾಮಂತ್ರಗಳನ್ನು ಜಪಿಸಿ, ಸಾಲಿಗ್ರಾಮದಲ್ಲಿ ಆ ಮಂತ್ರಗಳಿಂದ ತರ್ಪಣಬಿಟ್ಟು , ಶಕ್ತಿ ಇದ್ದರೆ ಹಂಸ, ಕೃಷ್ಣ ಮೊದಲಾದ ತಂತ್ರಸಾರದ ಚತುರ್ಥಾಧ್ಯಾಯೋಕ್ತ ಮಂತ್ರಗಳನ್ನು ಜಪಮಾಡಿ, ನಂತರ ಗಾಯತ್ರೀ ಉಪಸ್ಥಾನಮಾಡೋಣ . ಈ ಪ್ರಕಾರ ಮಾಡೋಹಾಂಗೆ ತಿಳಿಯುತ್ತದೆ.

ಮತ್ತು ಕೆಲವರು ಬ್ರಹ್ಮಯಜ್ಞ ತರ್ಪಣವನ್ನು ಭೂತೋಚ್ಚಾಟನ ಪೂರ್ವದಲ್ಲಿ ಮಾಡದೇ ಜಪಾನಂತರ ಉಪಸ್ಥಾನಾತ್ಪೂರ್ವದಲ್ಲಿ ಮಾಡುತ್ತಾರೆ.

ಆ ಸಂಪ್ರದಾಯಭೇದಗಳನ್ನೂ, ಆಯಾ ಮಂತ್ರಗಳನ್ನೂ ಪ್ರಚುರಪಡಿಸುವ ಗ್ರಂಥ ಇದಲ್ಲ. ಮುಖ್ಯವಾಗಿ ಬಾಲಕರಿಗೆ ಸಂಧ್ಯಾವಂದನೆ ಉಪನಯನಕಾಲದಲ್ಲಿ ಯಾವರೀತಿಯಿಂದ ಉಪದೇಶಮಾಡಲ್ಪಡುತ್ತದೋ ಅಷ್ಟುಮಟ್ಟಿಗೆ ಮಾತ್ರ ಇದರಲ್ಲಿ ಕ್ರಮದಿಂದ ವಿವರಣೆ ಮಾಡ-ಲ್ಪಡುತ್ತದೆ.

ಬ್ರಹ್ಮಯಜ್ಞ, ತರ್ಪಣ ಗಾಯತ್ರೀ ಜಪಾತ್ಪೂರ್ವದಲ್ಲಿ ಮಾಡುವವರು ಈ ಕೆಳಗೆ ಹೇಳುವ ವಿಷ್ಣುತೀರ್ಥೀಯವಾಕ್ಯವನ್ನು ಉದಾಹರಣ ಮಾಡುತ್ತಾರೆ.

''ದೇವಾದಿ ತರ್ಪಣಾತ್ಪೂರ್ವಂ। ಸಂಧ್ಯಾಂಗತ್ವೇನ ಯೋ ಜಪೇತ್। ಗಾಯತ್ರೀಚಾನ್ಯ- ಮಂತ್ರಾಂಶ್ಚತಜ್ಜಪೋನಿಷ್ಫಲೋಭವೇತ್।'' ಇದರಿಂದ ಸಂಧ್ಯಾಂಗ ಜಪಾತ್ಪೂರ್ವದಲ್ಲೇ ದೇವಾದಿ ತರ್ಪಣಾಗಳು ಮಾಡುವ ಸಂಪ್ರದಾಯವೇರ್ಪಟ್ಟಿದೆ.

ಮತ್ತು ಕೆಲವರು ಜಪಾನಂತರ ದೇವತಾರ್ಚನ ಪ್ರಾರಂಭಮಾಡಿ ನಿರ್ಮಾಲ್ಯವಿಸರ್ಜನ ಅನಂತರ ನಿರ್ಮಾಲ್ಯತೀರ್ಥದಿಂದ ಬ್ರಹ್ಮಯಜ್ಞ , ತರ್ಪಣ ಮಾಡಿ, ನಂತರ ಗಾಯತ್ರೀ ಉಪಸ್ಥಾನ ಪ್ರಾರಂಭಮಾಡುತ್ತಾರೆ. ಋಷಿಮತಗಳು ಅನೇಕವಿದೆ. ಆ ಸಂಪ್ರದಾಯಗಳು ನಮಗೆ ಅವಿದಿತವಾದದ್ದು. ಈಗ ಸಂಧ್ಯಾವಂದನೆ ಮಾತ್ರವೇ ಬರೆಯುತ್ತಾದ್ದರಿಂದ ಆ ವಿವಾದ- ಗಳು ನಮಗೆ ಬೇಕಿಲ್ಲ.

**ಪ್ರ. ಸಂಧ್ಯಾವಂದನದಲ್ಲಿ ಅಷ್ಟಮಹಾಮಂತ್ರಗಳೆಂತಲೂ, ಇತರಮಂತ್ರಗ- ಳೆಂತಲೂ ಮೇಲೆ ಹೇಳಿದರೆ ಆ ಮಂತ್ರಗಳು ಯಾವುವು?**

**ಉ:** ಮಂತ್ರಗಳು ಅಷ್ಟಮಹಾಮಂತ್ರಗಳೆಂತಲೂ, ಇತರಮಂತ್ರಗಳೆಂತಲೂ ಎರಡುವಿಧ. ಓಂಕಾರನಾಮಕವಾದ ಪ್ರಣವ, ನಾರಾಯಣಾಷ್ಟಾಕ್ಷರ, ವ್ಯಾಹೃತಿ , ವಾಸುದೇವ ದ್ವಾದಶಾಕ್ಷರ, ಗಾಯತ್ರೀ, ಮಾತೃಕಾ, ಪುರುಷ, ವಿಷ್ಣುಮಂತ್ರಗಳಿಗೆ ಅಷ್ಟಮಹಾಮಂತ್ರಗಳೆಂದು ಹೆಸರು. ಹಂಸ, ವ್ಯಾಸ, ನರಸಿಂಹ, ಕೃಷ್ಣಮೊದಲಾದ ಸಮಸ್ತಮಂತ್ರಗಳು ಇತರಮಂತ್ರಗಳು. ಅವು ಆಚರಣೆ ಮಾಡತಕ್ಕ ಕ್ರಮಗಳೇ ಮೊದಲಾದವುಗಳನ್ನು ತಂತ್ರಸಾರ ಪ್ರಥಮ, ಚತುರ್ಥಾಧ್ಯಾಯಗಳಲ್ಲಿ ಶ್ರೀಮದಾಚಾರ್ಯರು ಹೇಳಿದ್ದಾರೆ. ಅಲ್ಲಿನೋಡಬೇಕು.

**ಗಾಯತ್ರೀ ಆಹ್ವಾನ:**

ಋಗ್ವೇದ ಸಂಧ್ಯಾವಂದನೆಯಲ್ಲಿ ಗಾಯತ್ರೀಪ್ರಾರ್ಥನ ಮಾಡುವುದರಲ್ಲಿ ''ಓಮಿತ್ಯೇಕಾಕ್ಷರಂ ಬ್ರಹ್ಮ' ಮೊದಲುಗೊಂಡು 'ಬಲಮಾವಾಹಯಾಮಿ'ಯೆಂಬುವವರೆಗೆ ಪಠನ ಮಾಡುವ ಸಂಪ್ರದಾಯ ದಾಕ್ಷಿಣಾತ್ಯರು ಕೆಲವರಲ್ಲಿಲ್ಲ. ಉತ್ತರದೇಶದಲ್ಲಿಯೂ ಮಧ್ಯದೇಶ-

ದಲ್ಲಿಯೂ ವಿಶೇಷಾಕಾರವಾಗಿ ಆ ಮಂತ್ರಗಳು ಪಠನಮಾಡುವ ಸಂಪ್ರದಾಯವಿದೆ. ಆದರೆ 'ತೈತ್ತರೀಯೋಕ್ತಸ್ಯ ಓಮಿತ್ಯೇಕಾಕ್ಷರಂ ಬ್ರಹ್ಮೇತ್ಯಾದೇಃ ಸರ್ವಶಾಖಿಭಿಃರಪ್ಯವಶ್ಯಂ ಕರ್ತವ್ಯಂ' ಎಂದು ಸಂಧ್ಯಾಭಾಷ್ಯದಲ್ಲಿ ಉದಾಹರಿಸಿ ಋಕ್ಶಾಖಾದಲ್ಲಿ ಕೂಡಾ ಆ ಮಂತ್ರಗಳನ್ನು ಉದಾಹರಿಸಿದ್ದಾರೆ. ಆದಕಡೆಯಿಂದ ಇಲ್ಲಿ ಆ ಮಂತ್ರಗಳನ್ನು ಬರೆಯೋಣವಾಗಿದೆ. ಸಂಪ್ರದಾಯಾನುಸಾರ ಮಾಡಬಹುದು. ವಿವಾದಯುಕ್ತವಾದ ಈ ಋಕ್ಕುಗಳೇ ಅಲ್ಲದೇ ಈ ಋಕ್ ಶಾಖಾ ಸಂಧ್ಯಾವಂದನದಲ್ಲಿ ತೈತ್ತರೀಯ ಆರಣ್ಯಕದಿಂದ ಬಹುಋಕ್ಕುಗಳನ್ನು ತೆಗೆದು ಮೇಳನಮಾಡಿದಂತೆ ಕಾಣುತ್ತದೆ. ಆ ಋಕ್ಕುಗಳು ಋಗ್ವೇದದಲ್ಲಿ ಕಾಣಬರುವುದಿಲ್ಲ.

ಶ್ರೀ ಮಧ್ವಾಂತರ್ಯಾಮಿನ್॥ **ಓಂ ಇತ್ಯೇಕಾಕ್ಷರಂ ಬ್ರಹ್ಮ । ಅಗ್ನಿರ್ದೇವತಾ । ಬ್ರಹ್ಮ ಇತ್ಯಾರ್ಷಂ । ಪರಮಾತ್ಮಂ ಸ್ವರೂಪಂ ಸಾಯುಜ್ಯಂ ವಿನಿಯೋಗಃ ॥**

ಓಂ ಆಯಾತು ಇತ್ಯಸ್ಯ ಮಂತ್ರಸ್ಯ ವಾಸುದೇವ ಋಷಿಃ ಗಾಯತ್ರೀ ಪ್ರತಿಪಾದ್ಯ ಶ್ರೀಮಧ್ವಾಂತರ್ಯಾಮಿನ್ ಶ್ರೀ ಸವಿತೃನಾಮಕ ನಾರಾಯಣೋ ದೇವತಾ। ಗಾಯತ್ರೀ ಆಹ್ವಾನೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್ ಹರಿಃಓಂ ॥ **ಆಯಾತು ವರದಾದೇವಿ ಅಕ್ಷರಂ ಬ್ರಹ್ಮ ಸಮ್ಮಿತಂ । ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮ ಜುಷಸ್ವಮೇ । ಯದಹ್ನಾತ್ಕುರುತೇ ಪಾಪಂ ತದಹ್ನಾತ್ ಪ್ರತಿಮುಚ್ಯತೇ । ಯದ್ರಾತ್ರ್ಯಾಕುರುತೇ ಪಾಪಂ ತದ್ರಾತ್ರಿಯಾತ್ಪ್ರತಿಮುಚ್ಯತೇ । ಸರ್ವವರ್ಣೇ ಮಹಾದೇವಿ ಸಂಧ್ಯಾವಿದ್ಯೇ ಸರಸ್ವತಿ ॥**

***ಮಂತ್ರಾರ್ಥ:-*** ಓಮಿತಿ= ಓಂ ಎಂಬುವುದು ; ಏಕಾಕ್ಷರಂ= ಒಂದು ಅಕ್ಷರವಾದ ; ಬ್ರಹ್ಮ (ವೇದವು) ಅಥವಾ ಓಂನಾಮಕಪರಮಾತ್ಮನು ; ಏಕ= ಮುಖ್ಯನಾದ ; ಅಕ್ಷರಂ= ನಾಶರಹಿತನಾದ ; ಬ್ರಹ್ಮ= ಪರಬ್ರಹ್ಮಸ್ವರೂಪನು( ಗುಣಪೂರ್ಣನು); ( ಆ ಓಂಕಾರಕ್ಕೆ) ಅಗ್ನಿಃ= ಪಾವಕನು; ದೇವತಾ= ದೇವತೆ ; ಬ್ರಹ್ಮ ಇತಿ= ಗುಣಪೂರ್ಣನಾದ ಪರಬ್ರಹ್ಮನು ; ಆರ್ಷಂ= ಋಷಿ ; ಗಾಯತ್ರಿ= ಗಾಯತ್ರಿಯು ; ಛಂದಂ= ಛಂದಸ್ಸು ; ಪರಮಾತ್ಮಂ= ಪರಬ್ರಹ್ಮನು ; ಸ್ವರೂಪಂ= ( ಓಂಕಾರಕ್ಕೆ) ಸ್ವರೂಪನು; ಸಾಯುಜ್ಯಂ= ಮೋಕ್ಷದಲ್ಲಿ; ವಿನಿಯೋಗಃ= ವಿನಿಯೋಗಃ .

ಇದು ಗಾಯತ್ರೀ ಆಹ್ವಾನ ಮಂತ್ರ. ಇದಕ್ಕೆ ವಾಮದೇವನಾಮಕ ಪರಮಾತ್ಮನು ಋಷಿ ಗಾಯತ್ರೀ ಪ್ರತಿಪಾದ್ಯನಾದ ಸೂರ್ಯಾಂತರ್ಗತ ನಾರಾಯಣನು ದೇವತಾ. ಅನುಷ್ಟುಪ್ ಛಂದಸ್ಸು. ಈ ಮಂತ್ರದಿಂದ ಗಾಯತ್ರಿಯನ್ನು ಆಹ್ವಾನ ಮಾಡಬೇಕು.

ಮಂತ್ರಾರ್ಥ:- ವರದಾ= ಅಭೀಷ್ಟಗಳನ್ನು ಕೊಡತಕ್ಕ ; ದೇವೀ= ದೇವತಾ ; ಅಕ್ಷರಂ= ನಾಶರಹಿತನಾಗಿ ; ಸಮ್ಮಿತಂ= ನಿಶ್ಚಯಿಸಲ್ಪಟ್ಟ ; ಬ್ರಹ್ಮ = ಪರಬ್ರಹ್ಮನನ್ನು ಕುರಿತು; (ಅಂಥಾ ಪರಬ್ರಹ್ಮನ ಬೋಧಿಸುವುದಕ್ಕೋಸ್ಕರ) ಆಯಾತು= ಬರಲಿ; ಛಂದಸಾಂ= ವೇದಗಳಿಗೆ ; ಮಾತಾ= ತಾಯಿಯಾದ ಗಾಯತ್ರೀದೇವಿಯೇ ! ಇದಂ= ಈ ಬ್ರಹ್ಮ= ಪರಬ್ರಹ್ಮನನ್ನು ; ಮೇ= ನನಗೆ ; ಜುಷಸ್ವ= ಉಪದೇಶಮಾಡು; ಅಹ್ನಾತ್= ಅಹಸ್ಸಿನಿಂದ; ಯತ್= ಯಾವ; ಪಾಪಂ= ಪಾಪವನ್ನು ; ಕುರುತೇ= ಮಾಡುತ್ತಾನೋ ; ತತ್= ಆ ಪಾಪವು; ಅಹ್ನಾತ್= ಅಹಸ್ಸಿನಿಂದೇ (ಅಹಸ್ಸು ನಾಮಕ ಪರಮಾತ್ಮನಿಂದೇ) ಪ್ರತಿಮುಚ್ಯತೇ= ಹೋಗಲಾಡಿಸಲ್ಪಡುತ್ತದೆ ; ರಾತ್ರ್ಯಾತ್= ರಾತ್ರಿಯಿಂದ ; ಯತ್= ಯಾವ; ಪಾಪಂ= ಪಾಪವು; ಕುರುತೇ= ಮಾಡುತ್ತಾನೋ ತತ್= ಆ ಪಾಪವು; ರಾತ್ರ್ಯಾತ್= ರಾತ್ರಿಯಿಂದಲೇ, ಎಂದರೆ ರಾತ್ರಿನಾಮಕ ಪರಮಾತ್ಮನಿಂದಲೇ; ಪ್ರತಿಮುಚ್ಯತೇ= ಹೋಗಲಾಡಿಸಲ್ಪಡುತ್ತದೆ. ಸರ್ವವರ್ಣೇ= ಸಮಸ್ತವರ್ಣಗಳುಳ್ಳ ; (ಗಾಯತ್ರೀ ರಕ್ತವರ್ಣಾ, ಸಾವಿತ್ರೀ ಶ್ವೇತವರ್ಣಾ, ಸರಸ್ವತೀ ಕೃಷ್ಣವರ್ಣಾ) ಸಂಧ್ಯಾವಿದ್ಯೇ= ಸಂಧ್ಯಾನಾಮಕ ದೇವತೆಯಾದ ಅಥವಾ( ತೀರ್ಥಗಳಲ್ಲಿ ಸರ್ವದಾ ವಾಸಮಾಡಿಕೊಂಡಿರುವ ಮಹತ್ವವುಳ್ಳಂಥಾ ; ಮಹಾದೇವಿ= ಗಾಯತ್ರೀನಾಮಕಪರಮಾತ್ಮನೇ;

**ಓಂ ಓಜೋಸಿ, ಓಂಸಹೋಸಿ, ಓಂ ಬಲಮಸಿ, ಓಂಭ್ರಾಜೋಸಿ, ಓಂದೇವಾನಾಂ ಧಾಮನಾಮಾಸಿ, ಓಂ ವಿಶ್ವಮಸಿ ವಿಶ್ವಾಯುಃ; ಓಂ ಸರ್ವಮಸಿ ಸರ್ವಾಯುಃ, ಓಂಅಭಿಭೂಃ ಓಂ ॥ ಓಂಗಾಯತ್ರೀಂ ಆವಾಹಯಾಮಿ ಓಂಸಾವಿತ್ರೀಂ ಆವಾಹಯಾಮಿ, ಓಂ ಛಂದರ್ಷೀನಾಂ ಆವಾಹಯಾಮಿ, ಓಂಶ್ರಿಯಂ ಆವಾಹಯಾಮಿ, ಓಂ ಬಲಂ ಆವಾಹಯಾಮಿ ॥**
(ಎಂದು ಆವಾಹನೆ ಮುದ್ರೆಯಿಂದ ಆವಾಹನೆ ಮಾಡುವುದು)

***ಮಂತ್ರಾರ್ಥ:-*** ( ತ್ವಂ= ನೀನು) ಓಜಃ= ಭೂಧರಾದಿಧಾರಣಾ ಶಕ್ತಿಯುಳ್ಳವನಾಗಿ( ಬಲಹೇತುವಾಗಿ) (ಗುಣಗುಣಿಗೆ ಅಭೇದ) ಅಸಿ= ಇದ್ದಿ.; ಸಹಃ= ಶತ್ರುಗಳನ್ನು ತಿರಸ್ಕರಿಸತಕ್ಕ (ಅಥವಾ ಸಹನಶಕ್ತಿಯುಳ್ಳವನಾಗಿ) ಅಸಿ= ಇದ್ದಿ ; ಬಲಂ= ಪ್ರಾಣಬಲಸಾಮರ್ಥ್ಯವಾಗಿ ಅಸಿ= ಇದ್ದಿ ; ಭ್ರಾಜಃ=

ಶರೀರಕಾಂತಿಯುಳ್ಳವನಾಗಿ ; ಅಸಿ=ಇದ್ದಿ; ದೇವಾನಾಂ=ಇಂದ್ರಾದಿದೇವತೆಗಳಿಗೆ; ಧಾಮಃ=ಶರಣಸುಖಸ್ಥಾನವಾಗಿ; ನಾಮ=ನಾಮರೂಪಗಳುಳ್ಳವನಾಗಿ; ಅಸಿ=ಇದ್ದಿ; ವಿಶ್ವಂ=ಸಮಸ್ತಪ್ರಪಂಚದಲ್ಲಿ ವ್ಯಾಪ್ತನಾಗಿ; ಅಥವಾ ವಿಶ್ವನಾಮಕನಾಗಿ ; ಅಸಿ=ಇದ್ದಿ; ವಿಶ್ವಾಯುಃ=ಜಗತ್ತಿಗೆ ಸಂಪೂರ್ಣ ಆಯುಸ್ಸು ರೂಪನಾಗಿ(ಗತಿಕೊಡತಕ್ಕವನಾಗಿ) ಅಥವಾ ಸಮಸ್ತ ಪ್ರಪಂಚಕ್ಕೆ ಆಶ್ರಯನಾದ ನಾರಾಯಣರೂಪಿಯಾಗಿ; ಅಸಿ=ಇದ್ದಿ ; ಸರ್ವಂ= 'ಯದಧೀನಾ ಯಸ್ಯಸತ್ತಾ ತತ್ತದೇವ ಭಣ್ಯತೇ' ಎಂಬುವ ನ್ಯಾಯದಿಂದ ಸಮಸ್ತಪ್ರಪಂಚವನ್ನು ನಿಯಮನಮಾಡುತ್ತಾ ಅಥವಾ ಸರ್ವಕಾರ್ಯಗಳಲ್ಲಿ ಪ್ರವಿಷ್ಟನಾಗಿ ; ಅಸಿ=ಇದ್ದಿ; ಸರ್ವಾಯುಃ=ಸರ್ವಜೀವನಹೇತುವಾಗಿಯೂ (ಅಥವಾ ಸರ್ವಯೋಗ್ಯಮೋಕ್ಷಪ್ರದನಾಗಿಯೂ) ಅಸಿ=ಇದ್ದಿ ಅಭಿಭೂಃ=ಪಾಪಿಗಳಿಗೆ ಅಥವಾ ಜಪವಿಘ್ನಕರ್ತೃಗಳಿಗೆ ತಿರಸ್ಕಾರಹೇತುವಾದವನಾಗಿಯೂ ; ಓಂ= ಓಂಕಾರರೂಪವಾದ ಗುಣಪೂರ್ಣನಾಗಿ (ಎನ್ನಲಾಗಿ ಸಮಸ್ತದಲ್ಲಿಯೂ ವ್ಯಾಪ್ತನಾಗಿ ಸ್ವತಂತ್ರನಾಗಿ) ಅಸಿ=ಇದ್ದಿ ; ಗಾಯತ್ರೀಂ= ಇಂಥಾ ಗಾಯತ್ರೀ ನಾಮಕ ಪರಮಾತ್ಮನನ್ನು ; ಆವಾಹಯಾಮಿ= ಆವಾಹನೆ ಮಾಡುತ್ತೇನೆ ; ಸಾವಿತ್ರೀಂ= ಸಾವಿತ್ರಿಯನ್ನು (ಸಾವಿತ್ರೀನಾಮಕ ಪರಮಾತ್ಮನನ್ನು); ಆವಾಹಯಾಮಿ= ಆವಾಹನೆ ಮಾಡುತ್ತೇನೆ ; ಸರಸ್ವತೀಂ=ಸರಸ್ವತೀಯನ್ನು (ಸರಸ್ವತೀನಿಯಾಮಕ ಅಥವಾ ನಾಮಕ ಪರಮಾತ್ಮನನ್ನು )ಆವಾಹಯಾಮಿ= ಆವಾಹನೆ ಮಾಡುತ್ತೇನೆ ; ಛಂದರ್ಷೀನಾಂ= ಛಂದಸ್ಸುಗಳನ್ನು ಋಷಿಗಳನ್ನು ನಿಯಮನ ಮಾಡತಕ್ಕ ಗಾಯತ್ರೀರೂಪವನ್ನು ; ಆವಾಹಯಾಮಿ= ಆವಾಹನೆ ಮಾಡುತ್ತೇನೆ ; ಶ್ರಿಯಂ=ಲಕ್ಷ್ಮೀದೇವಿಯನ್ನು;ಆವಾಹಯಾಮಿ= ಆವಾಹನೆ ಮಾಡುತ್ತೇನೆ ; ಬಲಂ=ಬಲಾಭಿಮಾನಿಯಾದ ವಾಯುದೇವರನ್ನು; ಆವಾಹಯಾಮಿ= ಆವಾಹನೆ ಮಾಡುತ್ತೇನೆ ;

**ಓಂಗಾಯತ್ರ್ಯಾಗಾಯತ್ರೀಛಂದೋ ವಿಶ್ವಾಮಿತ್ರಋಷಿಃ । ಸವಿತಾದೇವತಾ । ಅಗ್ನಿರ್ಮುಖಂ । ಬ್ರಹ್ಮಾಶಿರಃ । ವಿಷ್ಣುರ್ಹೃದಯಂ । ರುದ್ರಶ್ಶಿಖಾ । ಪೃಥಿವೀ ಯೋನಿಃ । ಪ್ರಾಣೋಪಾನವ್ಯಾನೋದಾನ ಸಮಾನ ಸಪ್ರಾಣ ಶ್ವೇತವರ್ಣಾ । ಸಾಂಖ್ಯಾಯನಸಗೋತ್ರಾ । ಗಾಯತ್ರೀ ಚತುರ್ವಿಂಶತಿ ಅಕ್ಷರಾ ತ್ರಿಪದಾ ಷಟ್ಕುಕ್ಷಿಃ । ಪಂಚ ಶೀರ್ಷ ಉಪನಯನೇ ವಿನಿಯೋಗಃ ॥**

***ಮಂತ್ರಾರ್ಥ:-*** ಗಾಯತ್ರ್ಯಾಃ= ಗಾಯತ್ರೀಗೆ (ಗಾಯತ್ರೀಶಬ್ದಾರ್ಥಕ್ಕೆ ಗಾಯತ್ರ್ಯಧಿಕರಣವಾದ ಬ್ರಹ್ಮಸೂತ್ರಭಾಷ್ಯದ ಪ್ರಥಮಾಧ್ಯಾಯದ ಪ್ರಥಮ ಪಾದ 11ನೇ ಅಧಿಕರಣವನ್ನು ನೋಡಬೇಕು) ಗಾಯತ್ರೀ=ಗಾಯತ್ರೀ ಎಂಬುವುದು; ಛಂದಃ=ಛಂದಸ್ಸು; ವಿಶ್ವಾಮಿತ್ರಃ=ವಿಶ್ವಾಮಿತ್ರರು ; ಋಷಿಃ= ಋಷಿಗಳು; ಸವಿತಾ=ಸವಿತೃ ನಾಮಕ ಸೂರ್ಯನಿಯಾಮಕನಾದ ಸೃಷ್ಟಿಕರ್ತಪರಮಾತ್ಮನು ; ದೇವತಾ=ದೇವತೆಯು ; ಅಗ್ನಿಃ= ಪಾವಕನು (ತದಂತರ್ಯಾಮಿನ್ ಶ್ರೀಪರಶುರಾಮದೇವರು); ಮುಖಂ=ಮುಖಸ್ಥಾನವು; 'ಗಾಯತ್ರೀಮುಕೇ ಅಗ್ನೇರಂತರ್ಯಾಮಿನ್ ಪರಶುರಾಮೋ ವರ್ತತೇ' ಎಂದು ಪ್ರಮಾಣವಿದೆ ಪ್ರಯುಕ್ತ; ಬ್ರಹ್ಮಾ= ಚತುರ್ಮುಖಬ್ರಹ್ಮಾಂತರ್ಗತವಿಷ್ಣುವು ; ಶಿರಃ=ಶಿರಸ್ಸು; ವಿಷ್ಣುಃ= ಸಮಸ್ತ ಪ್ರಪಂಚದಲ್ಲಿ ವ್ಯಾಪ್ತನಾದ ಕ್ಷರಾಕ್ಷರಪುರುಷನಿಯಾಮಕನಾದ ಪುರುಷೋತ್ತಮನು ಹೃದಯಂ=ಹೃದಯಸ್ಥಾನವು; ರುದ್ರಃ=ರುದ್ರಾಂತರ್ಗತ ಸಂಕರ್ಷಣನು; ಅಥವಾ ರುದ್ರನಾಮಕ ಪರಮಾತ್ಮನು ಶಿಖಾಸ್ಥಾನವು; ಪೃಥಿವೀ=ಭೂಮಿ; ಯೋನಿ=ಯೋನಿಸ್ಥಾನಾಂತರ್ಗತ ವರಾಹರೂಪಪರಮಾತ್ಮನು; ಗಾಯತ್ರೀ= ಇಂಥಾ ಗಾಯತ್ರೀ ; ಪ್ರಾಣಾಪಾನವ್ಯಾನೋದಾನಸಮಾನಾ= ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳೆಂಬ ಪಂಚಪ್ರಾಣಗಳುಳ್ಳವ; ಸಪ್ರಾಣಾ= ದೇವದತ್ತ, ಕೂರ್ಮ, ಕೃಕಳ, ಧನಂಜಯ, ನಾಗ ಎಂಬುವ ಪಂಚ ಉಪಪ್ರಾಣಗಳುಳ್ಳವ; ಶ್ವೇತವರ್ಣಾ=ಸ್ವಚ್ಛವಾದ ಬಿಳಿವರ್ಣವುಳ್ಳಂಥಾ; ಅಥವಾ ಶುಕ್ಲಾಂಬರಧಾರಿಯಾದವ; ಸಾಂಖ್ಯಾನಸಗೋತ್ರಾ=ಸಾಂಖ್ಯಾಯನ ಸಗೋತ್ರದಲ್ಲಿ ಅಭಿವ್ಯಕ್ತನಾದವ; ಚತುರ್ವಿಂಶತಿ ಅಕ್ಷರಾ= ಕೇಶವಾದಿ , ಕೃಷ್ಣಾಂತ ಇಪ್ಪತ್ತನಾಲ್ಕು ಭಗವದ್ರೂಪಗಳುಳ್ಳವ; ''ಗಾಯತ್ರೀವರ್ಣದೇವತಾಃ ಚತುರ್ವಿಂಶನ್ಮೂರ್ತಯೋಸ್ಯಾಃ ಕಥಿತಾ ವರ್ಣದೇವತಾ । ಇತ್ಯತ್ರೋಕ್ತಾ ಕೇಶವಾದ್ಯಾಂ ಜ್ಞೇಯಾಃ । ಗಾಯತ್ರೀ ಮಂತ್ರಾಕ್ಷರಾಣಾಂ ಚತುರ್ವಿಂಶತಿ ಮೂರ್ತಯಃ । ಮೂಲರೂಪಸವರ್ಣಕಾಃ । ಉದ್ಯದಾದಿತ್ಯ ವರ್ಣಾಭಃ ಇತ್ಯಾದಿ ಬಹುಪ್ರಮಾಣಗಳುಂಟು . ತಂತ್ರಸಾರ ಟೀಕಾದಲ್ಲಿ ಆ ವಿವರಗಳೆಲ್ಲಾ ಆ ಭಗವದ್ರೂಪಗಳ ಆಕಾರಗಳು ಸಹಿತವಾಗಿ ವಿವರವಾಗಿ ಬರೆದಿರುತ್ತದೆ. ಆ ಭಾಗದಲ್ಲಿ ನೋಡಬಹುದು. ತ್ರಿಪದಾ=(ಓಂ ತತ್ಸವಿತುರಿತ್ಯಾದಿನಾ ಚತುರ್ವಿಂಶತ್ಯಕ್ಷರೋಪೇತಾ । ಅಷ್ಟಾಕ್ಷರಾತ್ಮಕ ತ್ರಿಪದಾ) (ಪಾದೋಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ) ಎಂಬುವ ಪ್ರಮಾಣಾನುಸಾರವಾಗಿಯು 'ಸ್ವರೂಪಪಾದ ವಿಷ್ಣೋಸ್ತು ತ್ರಯೋಹಿ ದಿವಿಸಂಸ್ಥಿತಾಃ । ನಾರಾಯಣೋ ವಾಸುದೇವೋ ವೈಕುಂಠ ಇತಿ ಚ ತ್ರಯಃ । ' ಎಂಬುವ ಪ್ರಮಾಣಾನುಸಾರವಾಗಿ ಮೂರುಪಾದಗಳುಳ್ಳವ । ಷಟ್ಕುಕ್ಷಿಃ (ಗಾಯತ್ರೀನಾಮಕೋವಿಷ್ಣುರೇವಂ

ಷಡ್ವಿಧಮುಚ್ಯತೇ) ಎಂಬುವ ಪ್ರಮಾಣಾನುಸಾರವಾಗಿ ಆರುರೂಪಗಳುಳ್ಳಂಥಾ( ಅಥವಾ ಪ್ರಾಚ್ಯಾದಿ ದಿಕ್ಚತುಷ್ಟಯ ಊರ್ಧ್ವಾಧೋ ದಿಗ್ದ್ವಯ ಎಂಬುವ ಆರುದಿಕ್ಕುಗಳಲ್ಲಿ ವ್ಯಾಪ್ತನಾಗಿರುವಂಥಾ) ಪಂಚಶೀರ್ಷಾ=ವ್ಯಾಕರಣ,ಶಿಕ್ಷಾ, ಕಲ್ಪ, ನಿರುಕ್ತ, ಜ್ಯೋತಿಷಿಗಳೆಂಬ ಐದು ಶಿರಸ್ಸುಗಳುಳ್ಳವ ; (ಇಂಥಾ ಗಾಯತ್ರೀನಾಮಕ ಪರಮಾತ್ಮನ) ಉಪನಯನೇ=ಅನುಸರಣವನ್ನು( ಧ್ಯಾನವನ್ನು) ವಿನಿಯೋಗಃ=ಮಾಡುತ್ತೇನೆ.

**ಶ್ರೀತಿಮ್ಮಣ್ಣಾರ್ಯರು:-ಶೌನಕಾದಿ ಸ್ಮೃತಿ ಪಠಿತಾನಿ** । ಓಮಿತ್ಯೇಕಾಕ್ಷರ ಮಂತ್ರಂ ಪಠಿತ್ವಾ ಗಾಯತ್ರೀಪ್ರಾಣಾಯಾಮಾದಿ ಕುರ್ಯಾತ್ । ಕೇಚಿತ್ ಋಗ್ವೇದಿನೋ ಪಠಂತಿ । ಅಯಂ ಮಂತ್ರಃ ಅಂಭಸ್ಯೇತಿ ನಾರಾಯಣಮಂತ್ರಪ್ರಕರಣೇಭಿಹಿತಃ । ಗಾಯತ್ರೀ ಋಷ್ಯಾದಿ ವಾಚಕಃ। ಸಾಯುಜ್ಯಾಖ್ಯ ವಿನಿಯೋಗಂ ವಿನಿಯೋಗೋಪೇತಂ। ಓಮಿತ್ಯೇಕಾಕ್ಷರಂ ಪ್ರತಿ ಜಪಕಾಲೇ ಸನ್ನಿಧಾನಾರ್ಥಂ । ಆಗಚ್ಛತ್ವಿತಿ ವಾ । ಏವಂ ಪ್ರಣವಋಷ್ಯಾದಿಕಮುಕ್ತ್ವಾ ಗಾಯತ್ರೀಮಂತ್ರಜಪಾರ್ಥಂ ಸಂಧ್ಯಾದೇವ್ಯಾಃ ಸನ್ನಿಧಾನಂ ಪ್ರಾರ್ಥಯೇತ್ । ಆಯಾವಿತ್ಯಾದಿನಾ । ವೇಂಕಟಾದ್ರ್ಯಾದಿ ಪುಣ್ಯಗಿರಿವಾಯುಪ್ರತೀಕಗ ಶ್ರೀವಿಷ್ಣುರೂಪಹ್ವಾನಂ ಜ್ಞೇಯಂ । ಉಪಸಂಹಾರೇ ಉತ್ತಮೇತಿ ಶಿಖರ ಇತಿ ಕ್ಷಮಾಪಣವಾಕ್ಯೇ ಏತದರ್ಥ ಪ್ರತೀತೇಃ । ವರದಾ ಸರ್ವೇಷಾ-ಮಭೀಷ್ಟವರದಾ ದೇವೀ ದೇದೀಪ್ಯಮಾನಾ ಕ್ರೀಡಾದಿಗುಣವಿಶಿಷ್ಟಾಸಂಧ್ಯಾದೇವೀ ಅಕ್ಷರಂ ನಾಶರಹಿತಂ ಬ್ರಹ್ಮಸಂಮಿತಂ ಸಮ್ಯಕ್ ಮಿತಂ ಬ್ರಹ್ಮಣಾವೇದೇನ ಚತುರ್ಮುಖೇನ ವಾ । ತಾದೃಶಂ ಬ್ರಹ್ಮ ತದುದ್ದಿಶ್ಯ ಸದಾ ಪ್ರವರ್ತಮಾನಾಂ ಗಾಯತ್ರೀಂ ಗಾಯತ್ರೀನೃಚಛಂದಸಾಮವೇದಾನಾಂ ವಾ ಮಾತರಂ ಇತಿ ವಚನವ್ಯತ್ಯಯಃ। ಏತಾದೃಶಾಂ ಗಾಯತ್ರೀಂ ಆಯಾತು ಗಾಯತ್ರೀ ಮಂತ್ರಸನ್ನಿಹಿತಾ ಭವತ್ವಿತಿ ಯಾವತ್ । ಅಥವಾ ಮಾತಾವೇತಿ ಲುಪ್ತೋಪಮಾ । ಮಾತೇವ ಇದಂ ಬ್ರಹ್ಮಮಂತ್ರಂ ಪ್ರತಿ ಜುಷಸ್ವ ಪ್ರೀತೋಭವ । ಜೋಷತಿಃ ಪ್ರೀಣನಾರ್ಥಃ । ಅಥವಾ ಜುಷಸ್ವೇತಿ ಅಂತರ್ಣೀತೋಣಿಚ್ । ಮೇ ಇದಂ ಬ್ರಹ್ಮ ವಿಷ್ಣ್ವಾಖ್ಯಂ ತತ್ಸೇವಾಂ ಕಾರಯೇತಿ ವಾ ಮತ್ಕರ್ತೃಕಸೇವಾಪಿ ತ್ವದಧೀನೇತಿ ಜ್ಞಾಪನಾರ್ಥಂ ಜುಷಸ್ವೇತಿ ಉಕ್ತಿಃ । ಅಥವಾ ಇದಂ ಬ್ರಹ್ಮ ಜೀವರಾಶಿಂ ತ್ವಜ್ಜಾಪಕಂ ಜುಷಸ್ವ ಸುಖೇನ ಸ್ಥಾಪಯೇತಿ ವಾ। ಮಂತ್ರಸ್ವಾಧ್ಯಾಯ ಯಜ್ಞಾಗ್ನಿಮುನಿಮೋಕ್ಷಪಿತಾಮಹಾಃ। ತಪೋ ವಿಷ್ಣ್ವರ್ಕರುದ್ರಾಶ್ಚ ಚಂದ್ರಶ್ಚಬ್ರಹ್ಮಸಂಮಿತಾ ಇತ್ಯಭಿಧಾನಂ । ಬ್ರಹ್ಮಶಬ್ದಸ್ಯ ಉಕ್ತಾರ್ಥೇಷು ಜ್ಞೇಯಂ । ಮೇ ಮದಾದಿ ಭಕ್ತ ಜನಾಯ। ಜುಷಸ್ವ ಪ್ರೀಣಯಸ್ವ। ತವ ಪ್ರತಿ ಬಂಧಕಪಾಪಸದ್ಭಾವಾತ್ಕಥಂ ಮತ್ಪ್ರೀತಿಃ ಸ್ಯಾದಿತ್ಯತ ಆಹ। ಯದನ್ಹಾದಿತಿ। ಅಹ್ನಾತ್ ಅಹರವಚ್ಛಿನ್ನಕಾಲಾತ್ ಯತ್ಪಾಪಂ ಭಕ್ತಃ ಅಹಮಾದಿಃ ಕುರುತೇ ಅಹ್ನಾತಿ ಅಹರಭಿಮಾನಿಮುಖ್ಯಪ್ರಾಣತದಂತರ್ಯಾಮಿನ್ ಬ್ರಹ್ಮಪ್ರಸಾದಾತ್। ತತ್ತಸ್ಮಾನ್ಮುಚ್ಯತೇ। ತಸ್ಮಾತ್ಪ್ರತಿ ಮುಚ್ಯತೇತಿ ಚತುರ್ಥೀ। ಮುಕ್ತಾಯ ಮಮದ್ಯಮಿತ ವಾ ಕುರುತೇ ಕುರ್ವತಿ ಇತಿ ವಾ। ಏವಂ ಸನ್ನಿಧಿಂ ಪ್ರಾರ್ಥ್ಯ ಸರ್ವವರ್ಣೇತಿ ಸ್ತುತಿಃ ಕ್ರಿಯತೇ। ಸರ್ವವರ್ಣೈಃ ಶುಕ್ಲಾದಿ ವರ್ಣೈಃ। ಸರ್ವಜನೈರ್ವರಣೀಯೇತಿ ವಾ । ವರ್ಣೋವರಣೀಯ ಇತಿ ತೈತ್ತರೀಯಭಾಷ್ಯೋಕ್ತೇಃ । ಮಹತ್ ಕ್ರೀಡಾದಿ ಗುಣವತ್ । ಸಂಧ್ಯಾವಿದ್ಯಾದಿ ಶಬ್ದಾನಾಂ ವಾಚ್ಯತ್ವಾತ್। ಸಂಧ್ಯಾವಿದ್ಯೇ ಸಂಧ್ಯಾ ವಿಧಿವ್ಯಾಪ್ಯೇತಿ। ವಾ ಸಂಧ್ಯಾಸ್ವರೂಪಮಿದಂ ಪ್ರತಿ ಯಾತೀತಿ ವಾ। ಸರಸ್ವತೀ ಸರ್ವವಿದ್ಯಾ ಸ್ವಾಮಿನಿ ಗುಣಸರ್ವಸ್ವಂ ಸರಸ್ತದ್ವತೀತಿ ವಾ। ಪಾವಕಾನಃ ಸರಸ್ವತೀತಿ ಋಗ್ಭಾಷ್ಯೋಕ್ತ ಸರ್ವನಿರ್ವಚನಾಂತರಮಪಿ ದ್ರಷ್ಟವ್ಯಂ। ತ್ವಂ ಓಜೋಸಿ ಪರಾಭಿಭವಶಕ್ತಿರಸಿ । ಪರಾಭಿಭವಶಕ್ತಿಸ್ತ್ವದಧೀನೇತಿ ಯಾವತ್ । ಏವಮುತ್ತರತ್ರಾಪಿ ದ್ರಷ್ಟವ್ಯಂ । ಸಹೋಸಿ ಸಹನಶಕ್ತಿರಸಿ। ಬಲಂ ಶಾರೀರ ಬಲಂ ತದಸ್ಮಿ। ಭ್ರಾಜೋಸಿ ದೀಪ್ತಿರಸಿ। ಓಜಃ ಪ್ರಭುಃ ಅಹ್ನಾದಿತ್ಯಕಾರಾಂತತ್ವಂ ಛಾಂದಸಂ। ಏವರಾತ್ರಿರಪೀತಿ। ರಾತ್ರ್ಯಾತ್ ರಾತ್ರ್ಯವಚ್ಛಿನ್ನಕಾಲಾತ್। ಯತ್ಕುರುತೇ ರಾತ್ರ್ಯಾತ್ ರಾತ್ರ್ಯಭಿ- ಮಾನಿ ಭಾರತೀಪ್ರಸಾದಾತ್। ತೀನಾಂ ತತ್ತದ್ದೇವತಾಧೀನತ್ವಾತ್ಕಥಂ ಸಂಧ್ಯಾನಾಮಕ ಹರ್ಯಧೀನತ್ವಮಿತ್ಯತ ಆಹ । ದೇವಾನಾಮಿತಿ । ದೇವಾನಾಂ ಬ್ರಹ್ಮಾದೀನಾಂ ಧಾಮ ಆಶ್ರಯಃ । ನಾಮಾಸಿ ದೇವಾನಾಂ ಧಾಮಾದ್ಯಪಿ ತ್ವದಧೀನಮಿತಿ ಭಾವಃ । ಯೋ ದೇವಾನಾಂ ನಾಮಧೇತ್ಯುಕ್ತೇಃ। ಸರ್ವಾಣಿ ರೂಪಾಣಿ ವಿಚಿಂತ್ಯ ಧೀರೋ ನಾಮಾನಿ ಕೃತ್ವಾಭಿವದನ್ಯದಾಸ್ತೇ ಇತ್ಯುಕ್ತೇಃ ॥ ದೇವಾನಾಮಪಿ ತದಧೀನತ್ವಾತ್। ದೇವಾಧೀನಂ ಹರ್ಯಧೀನಮಿತಿ ಕಿಮುತೇತಿ ಭಾವಃ। ವಿಶ್ವಮಸಿ ವಿಶ್ವಂ ತ್ವದಧೀನಂ। ರಾಜಾರಾಷ್ಟ್ರಮಿತಿವತ್ । ವಿಶ್ವಸ್ಯಾಯುರಸಿ। ವಿಶ್ವಾಯುರಪಿ ತ್ವದಧೀನಮಿತಿ ಭಾವಃ। ಸ ಏಷ ಜಗತಾಮಾಯುರಿತಿ ತೈತ್ತರೀಯಭಾಷ್ಯೋಕ್ತೇಃ। ವಿಶ್ವಸ್ಯ

ವಾಯೋಃ ಆಯುರಪಿ ಜ್ಞಾನಪ್ರದೋಸೀತಿವಾ । ಅಯಪಯಗತಾವಿತಿ ಧಾತೋಃ । ಸರ್ವಮಸಿ ಪೂರ್ಣಮಸಿ । ಸರ್ವಾಯುಃ ನಿರವಧಿಕಾಯುರಸಿ । ಅಭಿಭೂಃ ಶತ್ರುಪರಾಭವಕರೋಸಿ । ಅಥವಾ ಸರ್ವಾಯುರಭಿಭೂಃ ಸರ್ವಾಯುರ್ಬ್ರಹ್ಮಣಪರಾರ್ಧಾಯುರಭಿಭೂಃ ತಿರಸ್ಕಾರಕರ ಪರನಾಮ್ನೋ ನಿಮೇಷತ್ವಾತ್ । ಪರನಾಮನಿಮೇಷಕಾಂತ ಇತ್ಯುಕ್ತೇಃ । ಏವಂ ಸ್ತುತ್ವಾ ಸಂಧ್ಯಾದೇವತಾಋಷಿಛಂದೋದೇವತಾ ಸನ್ನಿಧಾನಂ ಸ್ವಸ್ಮಿನ್ಮಂತ್ರಾದೌ ಕರೋತಿ । ಓಂ ಗಾಯತ್ರೀಮಾವಾಹಯಾಮೀತ್ಯಾದಿನಾ ಕಾಲಭೇದೇನ ಗಾಯತ್ರ್ಯಾದಿನಾ ತ್ರಿರೂಪಾಂ ಸಂಧ್ಯಾಂ ಗಾಯತ್ರೀ ಪ್ರತಿಪಾದ್ಯಾಮಾವಾಹಯಾಮಿ । ಛಂದಋಷೀನ್ ಹಯಗ್ರೀವ ಬ್ರಹ್ಮವಿಶ್ವಾಮಿತ್ರಾದೀನ್ ಛಂದೋದ್ರಷ್ಟ್ರೂನ್ ಮುನೀನ್ ಆವಾಹಯಾಮಿ । ಶ್ರಿಯಂ ಗಾಯತ್ರ್ಯಾದಿ ಛಂದೋಭಿಮಾನಿನೀಂ ರಮಾಂ । ಉಪಲಕ್ಷಣಮೇತತ್ । ವಾಯ್ವಾದಿದೇವತಾ ಆವಾಹಯಾಮಿ । ಕಿಂ ಛಂದ ಆದಿಕಮಿತ್ಯತ ಆಹ । ಗಾಯತ್ರ್ಯ ಇತ್ಯಾದಿನಾ । ಗಾಯತ್ರೀ ನಾಮಕ ಛಂದಃ । ಚತುರ್ವಿಂಶತಿತ್ಯಕ್ಷರಾ ಗಾಯತ್ರೀತಿ ಶ್ರುತೇಃ । ವಿಶ್ವಾಮಿತ್ರ ಋಷಿಃ । ಹಯಗ್ರೀವಾದಯೋನುಸ್ಮರ್ತವ್ಯಾಃ । ವಿಶ್ವಾಮಿತ್ರೇಣ ಬಹುಶಃ ಗಾಯತ್ರೀ ಜಪೇನೈವ ವಿಪ್ರತ್ವಸಂಪಾದನಾತ್ತಥೋಕ್ತಿಃ । ಸವಿತಾ ಜಗತ್ಪ್ರಸವಿತೃತ್ವೇನ ತನ್ನಾಮಕಃ ಸಂಧ್ಯಾಪರನಾಮಕೋ ಶ್ರೀನಾರಾಯಣೋ ದೇವತಾ ॥ ಸಂಧ್ಯಾದೇವ್ಯಾಃ ಧ್ಯಾನಾರ್ಥಮಂಗಂ ತದ್ದೇವತಾಶ್ಚಾಹ । ಅಗ್ನಿರ್ಮುಖಮಿತ್ಯಾದಿನಾ ॥ ಅಗ್ನಿಃ ಅಗ್ರ್ಯತ್ವಾದಗ್ನಿ ನಾಮಾಸಾವಿತ್ಯುಕ್ತೇಸ್ತನ್ನಾಮಕ ಭಗವದ್ರೂಪವಿಶೇಷಃ ಮುಖಂ ಮುಖ್ಯಾವಯವಃ । ಪ್ರಸಿದ್ಧಾಗ್ನಿರಪಿ ಮುಖಂ ಮುಖಜನ್ಯಃ । ತದಾಶ್ರಿತಶ್ಚಾ । ಮುಖಾದಿಂದ್ರಶ್ಚಾಗ್ನಿಶ್ಚೇತಿ ಶ್ರುತೇಃ ॥ ಮುಖಮಗ್ನಿರಿದ್ಧ ಇತಿ ಭಾಗವತದ್ವಿತೀಯೋಕ್ತೇಶ್ಚ । ಬ್ರಹ್ಮಾಶಿರಃ । ಗುಣಪರಿಪೂರ್ಣಂ ವಸ್ತು ಭಗವತ್ಸಂಧ್ಯಾನಾಮಕ ವಿಷ್ಣುಶಿರಃ । ಬ್ರಹ್ಮಾ ಚತುರ್ಮುಖಶಿರಃ । ಶಿರಸೋಜಾತಃ ತದಾಶ್ರಯಃ । ಸರ್ವಾಂಗಸಾಯುಜ್ಯತ್ವೇನ ತದುಪಪತ್ತೇಃ । ವಿಶಿಷ್ಯೋಕ್ತಿಃ ಸರ್ವಸ್ಯಗಾತ್ರಸ್ಯ ಶಿರಃ ಪ್ರಧಾನಮಿತ್ಯುಕ್ತೇರುಪಪದ್ಯತೇ । ವಿಷ್ಣುರ್ಹೃದಯಂ ತದಾಖ್ಯಾವಯವಃ ರುದ್ರಃ ರುಜಂ ದ್ರಾವಯತೇ ಯಸ್ಮಾದ್ರುದ್ರಸ್ತಸ್ಮಾಜ್ಜನಾರ್ದನ ಇತ್ಯುಕ್ತೇಃ ತನ್ನಾಮಕ ಭಗವದ್ರೂಪ ವಿಶೇಷಃ । ಶಿಖಾಪ್ರಸಿದ್ಧರುದ್ರಃ ತದಾಶ್ರಿತಃ । ವ್ಯೋಮವದ್ವ್ಯಾಪ್ತವಿಷ್ಣುಕೇಶವತ್ವಾದ್ವ್ಯೋಮಕೇಶ ಇತಿ ನಾಮಾಪ್ಯತ ಏವ ಸಂಗಚ್ಛತೇ । ಹರಿ ಕೇಶಾಯ ವೈ ನಮ ಇತಿ ಶ್ರುತೇಶ್ಚ । ವ್ಯೋಮನಿಕೇಶತ್ವಾದ್ವ್ಯೋಮಕೇಶಃ । ಹರಿದ್ವರ್ಣ-ಕೇಶತ್ವಾದ್ಧರಿಕೇಶ ಇತ್ಯರ್ಥಃ ।ಕಿಂ ನಸ್ಯಾದಿತಿ ಚೇನ್ನ । ತಸ್ಯಸ್ಫುಟಿತಹಾಟಕಶ್ರೀಜಟತ್ವಾತ್ । ಈಶಸ್ಯ ಕೇಶಾನ್ವಿಯದಂಬುವಾಹಾನಿತ್ಯುಕ್ತೇಃ । ಅಂಬೂನಾಮಷ್ಟಮೂರ್ತಿತ್ವೇನ ತದುಪಪತ್ತಿಃ । ಪೃಥಿವೀಯೋನಿಃ ಪ್ರತಿಷ್ಠಾಪರನಾಮಕ ಚರಮತನುಃ । ಪೃಥಿವೀಪುಚ್ಛಂ ಪ್ರತಿಷ್ಠಾ ಇತ್ಯುಕ್ತೇಃ । ಗಾಯತ್ರ್ಯ ಓಜೋಸೀತ್ಯಾದಿನಾ ಸರ್ವಶಕ್ತಿಪ್ರದತ್ವಮುಕ್ತಂ । ಅನ್ಯತ್ರ ಪ್ರಾಣಾಪಾನಾದೀನಾಂ ಸರ್ವಚೇಷ್ಟಕತ್ವಮುಕ್ತಂ । ತತ್ಕಥಮಿತ್ಯತಸ್ತೇಷಾಂ ಚೇಷ್ಟಾದೇರ್ಭಗವದಧೀನತ್ವಮಾಹ ॥ ಪ್ರಾಣಾಪಾನೇತಿ । ಪ್ರಾಣಾಪಾನವ್ಯಾನೋದಾನಸಮಾನತನ್ನಾಮ್ನೀ ತದ್ರೂಪಾತದಂತರ್ಗತಾ ಚ ಪ್ರಾಣಾದೀನಾಂ ಯಾಃ ಪ್ರಾಣಾಶ್ಚೇಷ್ಟಾಃ ತಾಭಿಃ ಸಹವರ್ತಮಾನಾ ನ ಪ್ರಾಣಂ । ಪ್ರಾಣಾದಿನಾ ನಾಮ್ನಿ ಪ್ರಾಣಾದ್ಯಂತರ್ಗತಂ ಪ್ರಕೃಷ್ಟಚೇಷ್ಟಕತ್ವಾತ್ಪ್ರಾಣಃ । ಅಪನಯತಿ ಅಧೋನಿಸ್ಸರತಿ ನಿಸ್ಸಾರಯತೀತ್ಯಪಾನಃ । ವಿವಿಧಂ ನಯತೀತಿ ವ್ಯಾನಃ । ಊರ್ಧ್ವಂ ನಯತೀತ್ಯುದಾನಃ । ಸಮ ನಯತೀತಿ ಸಮಾನಃ । ಏತೇಷಾಂ ಆಸಮ್ಯಕ್ ಪ್ರಾಣಾನಾಮಚೇಷ್ಟಾಸಹಿತಾ ಆಸಃ ಪ್ರಾಣಾ ಸಾ ಚ ಶ್ವೇತವರ್ಣಾ ಚ । ಉಪಲಕ್ಷಣಮೇತತ್ । ರಕ್ತಾ ಕೃಷ್ಣಾ ಚ ಗಾಯತ್ರ್ಯಾದಿ ರೂಪಭೇದೇನ ವರ್ಣಭೇದೇ ಮಾನಮುಕ್ತಂ । ಏಷಾಭಿಹಿತಾ ಸಾಂಖ್ಯ ಇತಿ ಗೀತಾಭಾಷ್ಯೇ ಸಾಂಖ್ಯಶಬ್ದಾರ್ಥ ಉಕ್ತಃ । ಸಾಂಖ್ಯಂ ಜೈವಂ ಜ್ಞಾನಂ । ತಸ್ಯ ಗುರುತ್ವೇನ ಉತ್ಪಾದಕತ್ವೇನಾಶ್ರಯಃ । ಸಾಂಖ್ಯಾಯನೋಬ್ರಹ್ಮಾಸಗೋತ್ರಃ ಸವಿತಾ ಯಸ್ಯ ಸಾಂಖ್ಯಾಯನಗೋತ್ರಾ । ಯಸ್ಯಾವಿಜ್ಞಾನಸಪಿತುಃ ಪಿತಾ ಸ ಇತ್ಯುಕ್ತೇಃ । ಸಾಂಖ್ಯಾಯನ ಬ್ರಹ್ಮಾ ಸ ಗೋತ್ರಃ ಪುತ್ರೋ ಯಸ್ಯೇತಿ ವಾ । ಸಾಂಖ್ಯಂ ಸಂಖ್ಯೈವ ಸಾಂಖ್ಯಂ ಮುಖ್ಯಂ ಜ್ಞಾನಂ ಸಂಖ್ಯಾನಾಂ ಜ್ಞಾನಾನಾಂ ಸಮೂಹಃ ಸಾಂಖ್ಯಮಿತಿ ವಾ ಸಂಖ್ಯಾಶಬ್ದಸ್ಯ ಜ್ಞಾನಾರ್ಥಕತ್ವಂ ವಿದ್ವಾನ್ ವೀರಶ್ಚಸಂಖ್ಯಾವಾನಿತ್ಯತ್ರ ಸಂಖ್ಯಾವಾನ್ ಜ್ಞಾನೀತಿ ವ್ಯಾಖ್ಯಾತತ್ವಾತ್ । ಸರ್ವವೇದಾಂತ ಪ್ರತ್ಯಯ ವಿಷಯತ್ವೇನ ಸಾಂಖ್ಯಾಯನಃ । ಶ್ರೀನಾರಾಯಣಃ ಗೋತ್ರಯಾ

ಪೃಥಿವ್ಯಾಸಹಿತಾ ಸ ಗೋತ್ರಾ ವರಾಹರೂಪೇಣ ಸಗೋತ್ರಾ ಸಾದ್ರಿಃ ಕೂರ್ಮರೂಪೇಣ ಸರ್ವಾಧಾರತ್ವ ಅಮೃತಪದತ್ವೋಪಕಾರಾನುಸ್ಮರಣಾಯೈ ತದುಕ್ತಿಃ । ಸಾಂಖ್ಯಾಯನೋ ನಾಮ ಕಶ್ಚಿದ್ ಋಷಿಃ ಸಃ ದ್ರಷ್ಟತ್ವೇನ ಗೋತ್ರಃ ಪಿತಾಯಸ್ಯೇತಿ ವಾ । ಸಾಂಖ್ಯಾಯನಗೋತ್ರೇತಿ ಪ್ರಾಮಾಣಿಕಪಾಠಃ । ಗಾಯತ್ರೀ ಗಾಯತಿ ತ್ರಾಯತಿ ಚೇತಿ ಅಗ್ನಿಗಾಯತ್ರ್ಯಾದಿ ಶಬ್ದಾರ್ಥರೂಪೋಸಾವಿತಿ ನಿಗದ್ಯತ ಇತಿ ಭಾಷ್ಯೋಕ್ತದಿಶಾಗಾಯತ್ರೀ ಶಬ್ದಾರ್ಥೋ ದ್ರಷ್ಟವ್ಯಃ । ಚತುರ್ವಿಂಶತಿಸಂಖ್ಯಾಕಂ ಅಕ್ಷರಂ ನಾಶರಹಿತಂ ಕೇಶವಾದಿ ರೂಪವತ್ ತ್ರಿಪದಾತ್ರ್ಯಾಕಾ । ತ್ರಿಪಾದಸ್ಯಾಮೃತಂ ದಿವಿತ್ಯುಕ್ತ ವೈಕುಂಠಾದಿ ಧಾಮವತ್ । ಷಟ್ಕುಕ್ಷಿಃ ಷಟ್ಸಂಖ್ಯಾಕೋದರವತ್ । ಪಂಚಶೀರ್ಷವತೀ ಚ । 'ಅನೇಕ ಬಾಹೂದರವಕ್ತ್ರನೇತ್ರಮಿತ್ಯುಕ್ತೇಃ । ರೂಪವಿಶೇಷೇ ಏತನ್ನಾನುಪಪನ್ನಂ । ಕುಕ್ಷಿಶಬ್ದೋ ಅಂಶಪರಃ । ಷಡಂಶವತೀ ತತ್ಸವಿತತೀತ್ಯಾದಿ ಕುಕ್ಷಿಶಬ್ದಃ ಲಕ್ಷಣಯಾ ಅಂಶಪರಃ । ಅಂಗುಷ್ಠಾದಿಷಡಂಗ ನ್ಯಾಸವತೀ ವಾ । ಶಿಕ್ಷಾದಿ ಷಡಂಗವತೀ ವಾ । ಷಟ್ ಷಡ್ಗುಣತ್ರಯಮುಕ್ತಿಯೋಗ್ಯತಮೋಯೋಗ್ಯನಿತ್ಯ ಸಂಸಾರಿತ್ರಯಂ ಕುಕ್ಷೌ ಯಸ್ಯೇತಿ ವಾ ಷಟ್ಕುಕ್ಷಿಃ ಷಣ್ಣಾಂ ಕಾಮಾದಿದೋಷಾಣಾಂಜನ ಕುಕ್ಷಿರ್ವಾ । ನಿರ್ದೋಷಂ ದೋಷಪುಂಜಪ್ರಸವಿಗುಣಜುಷಾಂ ನಿರ್ಗುಣಂ ಸದ್ಗುಣಾನಾಢ್ಯಮಿತಿ ಪಂಡಿತಾಚಾರ್ಯವಚನಮುಕ್ತಾರ್ಥೇ ಪ್ರಮಾಣಂ । ಷಟ್ ಋತಾವಿತಿ ವಾ । ಷಟ್ ರೂಪವಿಶೇಷಾಃ ಕುಕ್ಷೌ ಪ್ರತಿಪಾದ್ಯತತಯಾ ಯಸ್ಯಾ ಇತಿ ವಾ । ತದುಕ್ತಂ । ಛಾಂದೋಗ್ಯಭಾಷ್ಯೇ । ಗಾಯತ್ರ್ಯ ಸಂಸ್ಥಿತೋ ವಿಷ್ಣುಸ್ತ್ರೀರೂಪಃ ಸೂರ್ಯಸಪ್ರಭಃ । ದ್ವಿತೀಯಶ್ಚೈವಮತ್ಸ್ಯಾದಿಃ ಭೂತನಾಮಾವತಾರಗಃ । ತೃತೀಯೋ ವಾಚಿಸಂಸ್ಥಶ್ಚ ಸ್ತ್ರೀರೂಪೋ ಹಯಶೀರ್ಷಕಃ । ಚತುರ್ಥಃ ಪೃಥಿವೀಸಂಸ್ಥಃ ಸ್ತ್ರೀರೂಪಃ ಪಿತೃವರ್ಣಕಃ । ಜೀವಸ್ಯಾಂತರ್ಗತೋವ್ಯಾಪ್ಯ ಶರೀರಮಿತಿ ನಾಮಕಃ । ಪಂಚಮಸ್ತು ಹೃದಿಸ್ಥಸ್ತು ಷಷ್ಠೋಹೃದಯಮುಚ್ಯತೇ । ಗಾಯತ್ರೀ ನಾಮಕೋ ವಿಷ್ಣುರೇವಂ ಷಡ್ವಿಧಮುಚ್ಯತೇ । ತ್ರಿಭಿಃ ಸ್ವರೂಪಪಾದೈಶ್ಚ ಭಿನ್ನೈರ್ನೈಕೇನ ಚೈವ ಹೀತಿ ॥ ಪಂಚಶೀರ್ಷವತೀ ರೂಪವಿಶೇಷೇ ಪಂಚಶೀರ್ಷತ್ವಂ ನಾನುಪಪನ್ನಂ । ವಿಸ್ತೃತಶೀರ್ಷಾ ವಾ । ಪಂಚಾಸ್ಯ ಇತ್ಯಾದೌ ಪ್ರಪಂಚ ಇತ್ಯರ್ಥತಯಾ ವ್ಯಾಖ್ಯಾನಾತ್ । ಉಪನಯೇತಿ ಅಧಿಕಪ್ರಾಪಣೇ ವಿಶೇಷನಿಯೋಗವತೀ ಉಪಾಧಿಕ ಬ್ರಹ್ಮಾದೀನಾಂ ನಯನೇ ವಿನಿಯೋಗವತೀತಿ ಯಾವತ್ । ಗಾಯತ್ರೀ ಋಕ್ಪಕ್ಷೇತು ಪ್ರಾಣಾಪಾನಾದಿ ವ್ಯಾಪಾರವತ್ ಉಚ್ಚಾರಣ ವಿಷಯೇಶ್ಚೇತರರ್ಣ ತಕಾರಾದಿಶುದ್ಧಾಕ್ಷರವತ್ ಸಾಂಖ್ಯಾಯನ ಸಗೋತ್ರ ಋಷಿದೃಷ್ಟತ್ವೇನ ತದ್ಗೋತ್ರ ಚತುರ್ವಿಂಶತ್ಯಕ್ಷರಾ । ತ್ರಿಪದಾ ಪ್ರಸಿದ್ಧಾ । ಷಟ್ ಕುಕ್ಷಿಃ ತತ್ಸವಿತುರಿತ್ಯಾದಿ ಷಡಂಶವತ್ । ಪಂಚಶೀರ್ಷಂ ಚೌಲಕರ್ಮಪೂರ್ವಕೋಪನಯನೇ- ವಿನಿಯೋಗವದಿತ್ಯರ್ಥಃ । ಋಕ್ಪಕ್ಷೇ ಸಾಂಖ್ಯಾನಾಂ ಜ್ಞಾನಿನಾಂ ಅಯನಾಶ್ರಯಾಃ ಸಾಂಖ್ಯಾಜ್ಞಾನಿನಃ ಅಯಂ ಶುಭಾವಹವಿಧಿಂ ನಯತಿ ಪ್ರಾಪಯತೀತಿ ವಾ ಸಗೋತ್ರಾ ಪರ್ವತಾದಿ ಸಹಿತ । ತತ್ರ ಜಪ್ಯಾ ಉಪಸಂಹಾರೇ ಪರ್ವತಮೂರ್ಧನೀತ್ಯುಕ್ತೇಃ ॥

**ಗಾಯತ್ರೀಜಪಾಂಗ ಕರನ್ಯಾಸ ಮತ್ತು ಅಂಗನ್ಯಾಸ:-**

**ಪ್ರಶ್ನೆ:- ಗಾಯತ್ರೀಗೆ ಮುಖ್ಯಅಭಿಮಾನಿ ಯಾರು?**

**ಉತ್ತರ:-** ಸರ್ವಮಂತ್ರಗಳಿಗ್ಯೂ ಪರಮಾತ್ಮನೇ ಮುಖ್ಯ ಅಭಿಮಾನಿ. 'ಸರ್ವಮಂತ್ರಾಣಾಂ ಅಹಮೇಕಃ' ಎಂದು ಪ್ರಮಾಣವಿದೆ. ಈ ಪ್ರಮಾಣಾನುಸಾರವಾಗಿ ಗಾಯತ್ರಿಗೆ ಪರಮಾತ್ಮನೇ ಮುಖ್ಯಾಭಿಮಾನಿ. ಆದರೆ ಆತನ ಆಜ್ಞಾದಿಂದ ಗಾಯತ್ರೀಗೆ ಆತನನಂತರ ರಮಾದೇವಿಯು ಮುಖ್ಯಾಭಿಮಾನಿಯು. ಬ್ರಹ್ಮದೇವರಪತ್ನಿಯರಾದ ಗಾಯತ್ರೀ,ಸರಸ್ವತೀ,ಸಾವಿತ್ರಿಯರು ಅಲ್ಲ. 'ಅಭಿಮಾನಿನೀ ತು ಗಾಯತ್ರ್ಯಾ ಮುಖ್ಯಾ ಶ್ರೀಃ ಪರಿಕೀರ್ತಿತಾ । ಬ್ರಹ್ಮಣ್ಯಮುಖ್ಯತೋಜ್ಞೇಯಾ' ಎಂದು ಬೃಹದ್ಭಾಷ್ಯದಲ್ಲಿ ಪ್ರಮಾಣವಿದೆ. 'ಗಾಯತ್ರೀ ಯತ್ರ ದೇವೀಸ್ಯಾತ್ ತತ್ರ ಶ್ರೀಃ ಪರಿಕೀರ್ತಿತಾ' ಎಂದು ಕೂಡ ಪ್ರಮಾಣವಿದೆ.

**ಓಂ ತತ್ಸವಿತುಃ ಅಂಗುಷ್ಠಾಭ್ಯಾಂ ನಮಃ ।** (ಅಂಗುಷ್ಠದ್ವಯವನ್ನು ಸ್ಪರ್ಶನಮಾಡಬೇಕು)

**ಓಂ ವರೇಣ್ಯ ತರ್ಜನೀಭ್ಯಾಂ ನಮಃ ।** (ಅಂಗುಷ್ಠಗಳಿಂದ ತರ್ಜನೀಬೆಟ್ಟುಗಳೆರಡನ್ನೂ ಸ್ಪರ್ಶಮಾಡಬೇಕು.)

**ಓಂ ಭರ್ಗೋದೇವಸ್ಯ ಮಧ್ಯಮಾಭ್ಯಾಂ ನಮಃ ।** (ಮಧ್ಯಮಬೆಟ್ಟುಗಳೆರಡನ್ನೂ ಸ್ಪರ್ಶ ಮಾಡಬೇಕು.)

**ಓಂ ಧೀಮಹಿ ಅನಾಮಿಕಾಭ್ಯಾಂ ನಮಃ ।** ( ಅನಾಮಿಕ ಬೆಟ್ಟುಗಳನ್ನು ಸ್ಪರ್ಶಮಾಡಬೇಕು.)

**ಓಂ ಧಿಯೋಯೋನಃ ಕನಿಷ್ಟಿಕಾಭ್ಯಾಂ ನಮಃ ।** ( ಕನಿಷ್ಠಬೆಟ್ಟುಗಳನ್ನು ಸ್ಪರ್ಶಮಾಡಬೇಕು.)

**ಓಂ ಪ್ರಚೋದಯಾತ್ ಕರತಲಕರಪೃಷ್ಠಾಭ್ಯಾಂ ನಮಃ ।** (ಕರತಳ ಅಂಗೈ ಮುಂಗೈಗಳನ್ನು ಸ್ಪರ್ಶಮಾಡಬೇಕು.)

**ಓಂ ತತ್ಸವಿತು ಹೃದಯಾಯ ನಮಃ** (ಹೃದಯವನ್ನು ಸ್ಪರ್ಶಮಾಡಬೇಕು.)

**ಓಂ ವರೇಣ್ಯಂ ಶಿರಸೇ ಸ್ವಾಹಾ** ( ಶಿರಸ್ಸು ಸ್ಪರ್ಶಮಾಡಬೇಕು)

**ಓಂ ಭರ್ಗೋದೇವಸ್ಯ ಶಿಖಾಯೈ ವೌಷಟ್।** (ಶಿಖಾ- ಕೊರಳಿನ ಹಿಂಭಾಗಕ್ಕೆ ಮೇಲಿನಪ್ರದೇಶ)

**ಓಂ ಧೀಮಹಿ ಕವಚಾಯ ಹುಂ ।**(ಎರಡು ಮೊಳಕೈಗಳನ್ನು ಕೈಗಳಿಂದ ಸ್ಪರ್ಶಮಾಡಬೇಕು.)

**ಓಂ ಧಿಯೋಯೋನಃ ನೇತ್ರಾಭ್ಯಾಂ ವಷಟ್ ।** (ಎರಡು ಕಣ್ಣುಗಳನ್ನು ಸ್ಪರ್ಶಮಾಡಿ ಚಪ್ಪಾಳೆ ಬಾರಿಸಬೇಕು)

**ಓಂ ಪ್ರಚೋದಯಾತ್ ಅಸ್ತ್ರಾಯಫಟ್ ।**( ತಲೆಯಸುತ್ತು ಬಲಗೈ ತಿರುಗಿಸಿ ಚಪ್ಪಾಳೆಬಾರಿಸಬೇಕು.)

**ಓಂ ಭೂರ್ಭುವಸ್ಸ್ವರೋಮ್ ಇತಿ ದಿಗ್ಬಂಧಃ ।** ಈ ಪ್ರಕಾರಸಮಸ್ತದಿಕ್ಕುಗಳನ್ನು ಬಂಧನಮಾಡಿ ;

**ಅಸ್ಯ ಶ್ರೀ ಗಾಯತ್ರೀಮಂತ್ರಸ್ಯ ವಿಶ್ವಾಮಿತ್ರಋಷಿಃ ಸವಿತೃನಾಮಕ ಶ್ರೀಮಧ್ವಾಂತರ್ಯಾಮಿನ್ ಶ್ರೀಲಕ್ಷ್ಮೀನಾರಾಯಣೋದೇವತಾ । ಶ್ರೀಲಕ್ಷ್ಮೀನಾರಾಯಣಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ॥**

*ಕನ್ನಡಾರ್ಥ:- ಅಸ್ಯ=ಇಂಥಾ, ಶ್ರೀ=ಸಂಪದ್ಯುಕ್ತವಾದ, ಗಾಯತ್ರೀಮಂತ್ರಸ್ಯ=ಗಾಯತ್ರೀಮಂತ್ರಕ್ಕೆ ; (ಗಾಯಂತಂ ತ್ರಾಯತೇ ಯಸ್ಮಾತ್ ಗಾಯತ್ರೀ ಇತ್ಯುಚ್ಯತೇ ಬುಧಾಃ) ಎಂಬುವ ಪ್ರಮಾಣಾನುಸಾರವಾಗಿ; ವಿಶ್ವಾಮಿತ್ರಋಷಿಃ=ವಿಶ್ವಾಮಿತ್ರರು ಋಷಿಗಳು ; ಸವಿತೃ=ಸವಿತಾ ಎಂಬುವ ನಾಮಕ= ನಾಮವುಳ್ಳ ; ಶ್ರೀ=ಸಂಪದ್ಯುಕ್ತನಾದ ; ಶ್ರೀಲಕ್ಷ್ಮೀನಾರಾಯಣೋದೇವತಾ=ಶ್ರೀಲಕ್ಷ್ಮೀನಾರಾಯಣನೇ ದೇವತೆಯು; ಶ್ರೀಲಕ್ಷ್ಮೀನಾರಾಯಣ - ಪ್ರಸಾದಸಿದ್ಧ್ಯರ್ಥೇ = (ಇಂಥಾ) ಶ್ರೀಲಕ್ಷ್ಮೀನಾರಾಯಣನ ಅನುಗ್ರಹಸಂಪಾದಿಸುವುದಕ್ಕೋಸ್ಕರ ; ಯಥಾನುಶಕ್ತಿ=ನನ್ನ ಶಕ್ತ್ಯಾನುಸಾರವಾಗಿ; ಜಪೇ =ಜಪವನ್ನು ; ವಿನಿಯೋಗಃ= ಮಾಡುತ್ತೇನೆ. (ಜಪ= ಜಕಾರೋ ಜನ್ಮವಿಚ್ಛೇದಃ । ಪಕಾರಃ ಪಾಪನಾಶನಃ । ತಸ್ಮಾಜ್ಜಪ ಇತಿ ಪ್ರೋಕ್ತಃ ಜನ್ಮಪಾಪವಿನಾಶಕಃ । ಎಂಬ ಪ್ರಮಾಣಪ್ರಕಾರವಾಗಿ ಜನ್ಮವಿಚ್ಛೇದಕ ಪಾಪನಾಶಕವಾದ ಜಪವನ್ನು ಎಂದರ್ಥ)*

**ಪ್ರಶ್ನೆ:- ನ್ಯಾಸ ಎಷ್ಟು ವಿಧ?**

ಸೃಷ್ಟಿನ್ಯಾಸ, ಸ್ಥಿತಿನ್ಯಾಸ ಮತ್ತು ಲಯನ್ಯಾಸಗಳೆಂದು ಮೂರುವಿಧ.

**ಪ್ರಶ್ನೆ:- ಅವುಗಳ ಕ್ರಮ ಹೇಗೆ ?**

ಶಿರಸ್ಸಿನಿಂದ ಪಾದದವರೆಗೆ ಮಾಡುವ ನ್ಯಾಸಕ್ಕೆ ಸೃಷ್ಟಿನ್ಯಾಸವೆಂದು ಹೆಸರು. ಪಾದದಿಂದ ಶಿರಸ್ಸಿನವರೆಗೆ ಮಾಡುವ ನ್ಯಾಸಕ್ಕೆ ಲಯನ್ಯಾಸ ವೆಂದು ಹೆಸರು. ಶಿರಸ್ಸಿನಿಂದ ವಾಕ್ಕುವರೆಗೆ ಅರ್ಧ, ಪಾದದಿಂದ ಹೃದಯದವರೆಗೆ ಅರ್ಧ ಮಾಡುವುದು ಸ್ಥಿತಿನ್ಯಾಸವೆಂದು ಹೆಸರು. ಈ ಕ್ರಮಗಳು ಅದರ ಅಧಿಕಾರಿಗಳು ಇವೆಲ್ಲ **ಶ್ರೀಮದಾಚಾರ್ಯರ ತಂತ್ರಸಾರಸಂಗ್ರಹದ ಚತುರ್ಥಾಧ್ಯಾಯದಲ್ಲಿ ಹೇಳಿದ್ದಾರೆ.** ಆ ಭಾಗದಲ್ಲಿ ನೋಡಬಹುದು.

**ಪ್ರಶ್ನೆ:- ನ್ಯಾಸಸ್ಥಾನಗಳು ಯಾವುವು?**

ಯೋಗದೀಪಿಕಾದಲ್ಲಿ ನ್ಯಾಸಸ್ಥಾನಗಳು ಆ ಸ್ಥಳಗಳಲ್ಲಿ ಉಚ್ಚಾರಮಾಡತಕ್ಕ ಶಬ್ದಗಳನ್ನು ಈ ಕೆಳಕಂಡಂತೆ ಹೇಳಿದ್ದಾರೆ.

''ಹೃದಯಂ ಶಿರೋಪಿತು ಶಿಖಾಂ ಕವಚಾಸ್ತ್ರಾಣಿತಾನಿ ಚ ।

ಸೋದ್ದೇಶಾನಿ ನಮಃ ಸ್ವಾಹೋವೋಷಟ್ ಹುಂ ಫಟ್ ಪರಾನಿ ಚ ॥'' ಎಂದು ನ್ಯಾಸಸ್ಥಾನಾನಿ ವಿಜ್ಞೇಯಾಃ ಎಂದು ಹೇಳಿದ್ದಾರೆ.

**ಪ್ರಶ್ನೆ :ಗಾಯತ್ರೀ ಜಪ ಎಷ್ಟುವಿಧ ?**

''ಏಕೋಂಕಾರಾ ಸಂಪುಟಾಚ ಷಡೋಂಕಾರೇತಿ ಸಾ ತ್ರಿಧಾ'' ಎಂದು ಪ್ರಮಾಣವಿರುವುದರಿಂದ ಏಕೋಂಕಾರ ಗಾಯತ್ರೀ ಜಪ, ಸಂಪುಟೋಂಕಾರ ಗಾಯತ್ರೀ ಜಪ, ಷಡೋಂಕಾರ ಗಾಯತ್ರೀ ಜಪ ಎಂದು ಗಾಯತ್ರೀಜಪವು ಮೂರುವಿಧವಾದದ್ದು.

ಏಕೋಂಕಾರ ಗಾಯತ್ರೀ ಜಪವ್ಯಾವುದೆಂದರೆ:- 'ಪೂರ್ವೋಂಕಾರಾವ್ಯಾಹೃತಿಯುಗಂತೇ ಚಾ ಪ್ರಣವಾಹಿ ಯಾ।ನೈಕ ಪ್ರಣವಗಾಯತ್ರೀ ಕೀರ್ತಿತಾತು ಮನೀಷಿಭಿಃ।' ಎಂದು ವ್ಯಾಸಸ್ಮೃತಿಯಲ್ಲಿ ಹೇಳಿರುತ್ತದೆ. **(ಓಂ ಭೂರ್ಭುವಸ್ವಃ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್ ।)**

ಸಂಪುಟೋಂಕಾರಗಾಯತ್ರೀ ಎಂದರೆ:- ಓಂಕಾರಂ ಪೂರ್ವಮುಚ್ಚಾರ್ಯ ಭೂರ್ಭುವಸ್ವಸ್ತಥೈವಚ । ಗಾಯತ್ರೀ ಪ್ರಣವಂ ಚಾಂತೇ ಗಾಯತ್ರೀ ಸಂಪುಟಾಸ್ಮೃತಾ ।' ಎಂದು ಯೋಗಯಾಜ್ಞವಲ್ಕ್ಯದಲ್ಲಿ ಹೇಳಿರುತ್ತದೆ. ಅದು ಯಾವುದೆಂದರೆ, **(ಓಂ ಭೂರ್ಭುವಸ್ವಃ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್ । ಓಂ ॥)**

ಷಡೋಂಕಾರ ಗಾಯತ್ರೀ ಯಾವುದೆಂದರೆ, 'ತಿಸ್ರೋವ್ಯಾಹೃತಯಃ ಪೂರ್ವಂ ಪೃಥಗೋಂಕಾರಸಂಯುತಾಃ । ಪೂರ್ವಂ ಪುನರ್ವ್ಯಾಹೃತೀನಾಂ ಮಂತ್ರಸ್ಯಾದ್ಯಂತಯೋ ಸ್ತಥಾ ॥

**(ಓಂ । ಓಂ ಭೂಃ ।ಓಂ ಭುವಃ । ಓಂ ಸ್ವಃ । ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ ಧಿಯೋಯೋನಃ ಪ್ರಚೋದಯಾತ್ । ಓಂ ॥)**

**ಪ್ರಶ್ನೆ:- ಈ ಮೂರುವಿಧಗಾಯತ್ರೀ ಜಪ ಎಲ್ಲರೂ ಮಾಡತಕ್ಕದ್ದೇನಾ? ಅದರಲ್ಲಿ ಅಧಿಕಾರಿಭೇದವಾದದ್ದು ಏನಾದರೂ ಉಂಟಾ?**

ಉಂಟು. ಗೃಹಸ್ಥಾಶ್ರಮಿಗಳೂ, ಬ್ರಹ್ಮಚಾರಿಗಳೂ ಏಕೋಂಕಾರಗಾಯತ್ರೀ ಜಪಮಾತ್ರವೇ ಮಾಡತಕ್ಕದ್ದು. ವಾನಪ್ರಸ್ಥ, ಯತ್ಯಾಶ್ರಮಿಗಳು ಷಡೋಂಕಾರಗಾಯತ್ರೀ ಜಪವೇ ಮಾಡತಕ್ಕದ್ದು.

''ಆದ್ಯೋಂಕಾರಾ ಗೃಹಸ್ಥಸ್ಯ ವರ್ಣಿನಶ್ಚ ನ ಚೇತರೇ। ವಾನಪ್ರಸ್ಥಯತೀನಾಂ ತು ಷಡೋಂಕಾರ ಪ್ರಶಸ್ಯತೇ।' ಎಂದು ಪ್ರಮಾಣವಿದೆ.

**ಪ್ರಶ್ನೆ:- ಸನ್ಯಾಸಿಗಳೂ ಸಹಿತ ಗಾಯತ್ರೀ ಜಪ ಮಾಡಬೇಕಾ?**

ಅವಶ್ಯಮಾಡಬೇಕು. ಆದರೆ ಪ್ರಣವಮಂತ್ರ ಮೊದಲು ಜಪಮಾಡಿ, ತರುವಾಯದಲ್ಲಿ ವಿಶ್ವಾಮಿತ್ರಗಾಯತ್ರೀಮಂತ್ರ ಜಪ ಮಾಡತಕ್ಕದ್ದು. ಸನ್ಯಾಸಿಗಳು ಕೂಡಾ ವಿಶ್ವಾಮಿತ್ರಗಾಯತ್ರೀಮಂತ್ರಜಪ ಬಿಡಕೂಡದು. ಆ ಪ್ರಕಾರಬಿಟ್ಟರೆ ಪ್ರತ್ಯವಾಯ ಹೇಳಲ್ಪಟ್ಟಿದೆ.

''ಸರ್ವಂ ಚ ಸನ್ಯಸೇದ್ವಿದ್ವಾನ್ ವೇದಮೇಕಂ ನ ಸಂತ್ಯಜೇತ್। ವೇದಸನ್ಯಸನಾಚ್ಛೂದ್ರಸ್ತಸ್ಮಾದ್ವೇದ ನ ಸಂತ್ಯಜೇತ್।'' ಎಂದು ಮನುಸ್ಮೃತಿಯಲ್ಲಿ ಪ್ರಮಾಣವುಂಟು. 'ಕುಟೀಚಕೋಬಹೂದಕಶ್ಚಹಂಸಃ ಪರಮಹಂಸಕಃ । ವೇದಮಾತ್ರಪರಿತ್ಯಾಗೀ ಚಂಡಾಲಾದಧಮಾಧಮಃ । ಬ್ರಾಹ್ಮಣ್ಯಂ ಚ ಕುತಸ್ತೇಷಾಂ ಗಾಯತ್ರೀಂ ರಹಿತಾತ್ಮನಾಂ। ಗಾಯತ್ರೀ ರಹಿತಾಸ್ಸರ್ವೇ ಚಂಡಾಲಾದಧಮಾಧಮಾಃ॥' ಎಂದು ಅತ್ರಿಸ್ಮೃತಿಯಲ್ಲಿ ಹೇಳಿರುವುದರಿಂದ ಚತುರ್ವಿಧಸನ್ಯಾಸಿಗಳು ಪ್ರಣವಮಂತ್ರಾನಂತರ ವಿಶ್ವಾಮಿತ್ರಗಾಯತ್ರೀಜಪ ಅವಶ್ಯವಾಗಿ ಮಾಡಲೇ ಬೇಕು.

'ಸಂಧ್ಯಾಸುಮಂತ್ರಾ ಇಮಯೇವಜಪ್ಯಾಂತಾರೋಯತೀನಾಂ ಪ್ರಥಮೋಹಿಮಂತ್ರಃ । ಸಾವಿತ್ರ ಉಕ್ತಶ್ಚ ತಥಾಪರೇಷಾಂ ದ್ವಿನ್ಮನಾಂ ಶಶ್ವದನಿಂದಿತಾನಾಂ।' ಎಂದು ಪ್ರಮಾಣವಿರುವುದರಿಂದ ಯತಿಗಳು ಮೊದಲು ಪ್ರಣವಮಂತ್ರವನ್ನು ಜಪಮಾಡಿ ನಂತರ ವಿಶ್ವಾಮಿತ್ರ ಗಾಯತ್ರಿ ಜಪ ಮಾಡತಕ್ಕದ್ದು. ಗೃಹಸ್ಥಾಶ್ರಮಿಗಳು ವಿಶ್ವಾಮಿತ್ರಗಾಯತ್ರಿಮಂತ್ರ ಮೊದಲುಮಾಡಿ ಇತರಮಂತ್ರಗಳನ್ನು ತರುವಾಯದಲ್ಲಿ ಮಾಡಬೇಕು.

'ತಾರೋ ಯತೀನಾಂ ಪ್ರಥಮೋಹಿ ಮಂತ್ರಃ ಸಾವಿತ್ರ ಉಕ್ತಶ್ಚ ತಥಾಪರೇಷಾಂ' ಎಂದು ಕೂಡಾ ಪ್ರಮಾಣವುಂಟು.

**ಪ್ರಶ್ನೆ:- ಈ ಗಾಯತ್ರೀ ಜಪಧ್ಯಾನಾದಿಗಳು ಯಾರ ಉದ್ದೇಶದಿಂದ ಮಾಡಬೇಕು?**

ಸಾಕ್ಷಾತ್ತು ಸರ್ವದೇವೇಶ್ವರ ದೇವೋತ್ತಮನಾದ ಪರಮಾತ್ಮನ ಉದ್ದೇಶದಿಂದಲೇ ಮಾಡತಕ್ಕದ್ದೇ ಹೊರ್ತು ಸೂರ್ಯ, ಬ್ರಹ್ಮ, ರುದ್ರಾದಿ ಗಳದೆಶೆಯಿಂದ ಸರ್ವಥಾ ಮಾಡಬಾರದು.

'ಜಪಧ್ಯಾನಹುತಾರ್ಚಾದೀನೇವಂ ಯಃ ಕುರತೇ ಸದಾ। ಧರ್ಮಾರ್ಥಕಾಮಮೋಕ್ಷಾಣಾಂ ಭಾಜನಂ ಸ್ಯಾತ್ಸಯೇವ ಹಿ॥

ಸರ್ವೋತ್ತಮಂ ಹರಿಂ ಜ್ಞಾತ್ವಾ ಯ ಏವಂ ಭಕ್ತಿಪೂರ್ವಕಂ। ಜಪಧ್ಯಾನಾದಿಭಿರ್ನಿತ್ಯಂ ಪೂಜಯೇನ್ನಾಸ್ಯದುರ್ಲಭಮ್ ॥

ಭಕ್ತಿಂ ಕೃತ್ವಾನ್ಯದೇವೇಷು ಬ್ರಹ್ಮರುದ್ರಾದಿಕೇಷ್ವಪಿ। ಸರ್ವೋತ್ಕರ್ಷಮವಿಜ್ಞಾಯ ವಿಷ್ಣೋರ್ಯಾತಿ ತಮೋಧ್ರುವಂ॥

ನ ಯಜ್ಞಾ ನಚತೀರ್ಥಾನಿ ನೋಪವಾಸವ್ರತಾನಿ ಚ। ದೈವತಾನಿ ಚ ಸರ್ವಾಣಿ ತ್ರಾತುಂ ತಂ ಶಕ್ನುಯುಃ ಕ್ವಚಿತ್ ॥

ಹರಿರ್ಹಿ ಸರ್ವದೇವಾನಾಂ ಪರಮಃ ಪೂರ್ಣಶಕ್ತಿಮಾನ್ । ಸ್ವತಂತ್ರೋನ್ಯೇತದ್ವಶಾಹಿ ಸರ್ವೇತಃ ಸಜಗದ್ಗುರುಃ ॥

ಬ್ರಹ್ಮಾದಯಶ್ಚ ತದ್ಭಕ್ತ್ಯಾಭಾಗಿನೋ ಭೋಗಮೋಕ್ಷಯೋಃ । ತಸ್ಮಾಜ್ಜ್ಞೇಯಶ್ಚ ಪೂಜ್ಯಶ್ಚ ವಂದ್ಯೋ ಧ್ಯೇಯಃ ಸದಾಹರಿಃ ॥

ಈ ವಿಷಯಕವಾಗಿ ಮೇಲೆ ಹೇಳಿದ ಪ್ರಮಾಣ ತಂತ್ರಸಾರದಲ್ಲಿ ಶ್ರೀಮದಾಚಾರ್ಯರು ನಮಗಾಗಿ ಉದಾಹರಿಸಿದ್ದು ಸಮಸ್ತ ವೈಷ್ಣವರು ಗಮನದಲ್ಲಿಡತಕ್ಕದ್ದು.

**ಗಾಯತ್ರೀಜಪಾಂಗ ಧ್ಯಾನ ಮತ್ತು ಜಪ :-**

**ಧ್ಯಾನಂ॥ ಧೇಯಸ್ಸದಾ ಸವಿತೃಮಂಡಲಮಧ್ಯವರ್ತೀ** (ಶ್ರೀಮಧ್ವಾಂತರ್ಯಾಮಿನ್) **ಶ್ರೀನಾರಾಯಣ ಸರಸಿಜಾಸನ ಸನ್ನಿವಿಷ್ಟಃ ಕೇಯೂರವಾನ್ ಮಕರಕುಂಡಲವಾನ್ ಕಿರೀಟಿಹಾರೀ ಹಿರಣ್ಮಯವಪುಃ ಧೃತಶಂಖಚಕ್ರಃ । ಪ್ರೋದ್ಯದಾದಿತ್ಯ ವರ್ಣಾಭಃ ಸೂರ್ಯಮಂಡಲಮಧ್ಯಗಃ । ಚಕ್ರಶಂಖದರೋಂಕಸ್ಥದೋರ್ದ್ವಯೋ ಧ್ಯೇಯ ಏವಚ ॥**

**ಸವಿತೃನಾಮಕ ಶ್ರೀಲಕ್ಷ್ಮೀನಾರಾಯಣಪ್ರೇರಣಯಾ ಸವಿತೃನಾಮಕ ಶ್ರೀಲಕ್ಷ್ಮೀನಾರಾಯಣಪ್ರೀತ್ಯರ್ಥಂ ಯಥಾ ಶಕ್ತಿ ಪ್ರಾತಸ್ಸಂಧ್ಯಾಗಾಯತ್ರೀಮಂತ್ರ ಜಪಂ ಕರಿಷ್ಯೇ ॥**

ಮಂತ್ರಾರ್ಥ:- ಧ್ಯೇಯಃ= ಧ್ಯಾನಕ್ಕೆ ಪಾತ್ರನಾದಂಥಾ ; ಸದಾ= ಸರ್ವಕಾಲದಲ್ಲಿಯೂ; ಸವಿತೃ= ಸೂರ್ಯನ; ಮಂಡಲ= ಬಿಂಬದ; ಮಧ್ಯವರ್ತಿ= ಅಂತರ್ಗತನಾದ; ( ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ। ತತ್ವಂ ಪೂಷನ್ನಪಾವೃಣು ಸತ್ಯಧರ್ಮಾಯದೃಷ್ಟಯೇ। ಪೂಷನ್ನೇಕರ್ಷೇ ಯಮಸೂರ್ಯಪ್ರಾಜಾಪತ್ಯವ್ಯೂಹರಸ್ಮಿನ್ಸಮೂಹತೇಜೋ ಯತ್ತೇರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ।) ಎಂದು ಈಶಾವಸ್ಯೋಪನಿಷತ್ತಿನ ವಾಕ್ಯವುಂಟು. ನಾರಾಯಣಃ= ನಾರಾಯಣನಾಮಕನು ಅಥವಾ( ಜ್ಞಾನಿಗಳಿಗೆ ಆಶ್ರಯನಾದ ಪರಮಾತ್ಮನು)ಸರಸಿಜಾಸನಃ= ಕಮಲಾಸನದಲ್ಲಿ ; ಸನ್ನಿವಿಷ್ಟಃ= ಸಮೀಚೀನವಾಗಿ ಕೂತು ಇರುವವನೇ, ಕೇಯೂರವಾನ್= ತೋಳುಭೂಷಣವುಳ್ಳವನೇ; ಮಕರಕುಂಡಲವಾನ್= ಕರ್ಣಭೂಷಣಗ-ಳುಳ್ಳವನು ; ಕಿರೀಟಿ= ಕಿರೀಟವನ್ನು ಧರಿಸಿರುವವನು; ಧೃತ= ಧರಿಸಲ್ಪಟ್ಟ; ಶಂಖಚಕ್ರಃ= ಶಂಖಚಕ್ರಗಳುಳ್ಳವನು; ಪ್ರೋದ್ಯತ್= ಉದಯವಾಗುತಕ್ಕ; ಆದಿತ್ಯ= ಸೂರ್ಯನ; ವರ್ಣಾಭಃ= ಕಾಂತಿಯುಳ್ಳವ; ಸೂರ್ಯಮಂಡಲಮಧ್ಯಗಃ= (ಮೇಲೆ ಹೇಳೋಣವಾಗಿದೆ); ಚಕ್ರಶಂಖಧರಃ= ಎರಡು ಕೈಗಳಲ್ಲಿ ಚಕ್ರಶಂಖಗಳನ್ನು ಧರಿಸಿದವನು; ಅಂಕಸ್ಥದೋರ್ದ್ವಯಃ= ಮಿಕ್ಕ ಎರಡುಕೈಗಳನ್ನು ತೊಡೆಗಳಮೇಲೆ ಇಟ್ಟುಕೊಂಡವವನು; (ಇಂಥಾ ಪರಮಾತ್ಮನು) ಧ್ಯೇಯ ಏವ ಚ= ಧ್ಯಾನಪಾತ್ರನೇ ಸರಿ।

**ಪ್ರಶ್ನೆ:- ಧ್ಯಾನಶ್ಲೋಕಸಮಸ್ತರಿಗೂ ಇದೇನಾ ? ಮತ್ತೇನಾದರೂ ಸಂಪ್ರದಾಯಭೇದಗಳು ಇವೆಯೋ?**

ಧ್ಯಾನಶ್ಲೋಕಸಂಪ್ರದಾಯಗಳೂ ಕೂಡ ಅನೇಕವಿಧ ಇದ್ದಂತೆ ತೋರುತ್ತದೆ. ಅದರ ಸಂಪ್ರದಾಯಭೇದಗಳು ಕೆಲವು ಈ ಕೆಳಗೆ ಬರೆಯೋಣವಾಗಿದೆ.

ಒಂದು ಸಂಪ್ರದಾಯದಲ್ಲಿ ಈ ಕೆಳಗೆ ಹೇಳುವ ಧ್ಯಾನಶ್ಲೋಕವಿದೆ.

''ಹೃದಯೇಷ್ಟದಳಂ ಪದ್ಮಕರ್ಣಿಕಾಮಧ್ಯಶೋಭಿತಂ । ಓಂಕಾರನಾಳೇ ವಿಲಸನ್ನದಗಂಭೀರವಿಭ್ರಮಂ । ತನ್ಮಧ್ಯೇ ನವರತ್ನಾಢ್ಯಂ ತಪ್ತಹಾಟಕ ಸನ್ನಿಭಂ । ತಸ್ಯೋಪರಿಷ್ಟಾಚ್ಚತುರಂ ನಾನಾರತ್ನವಿಭೂಷಿತಂ । ವಿದ್ರುಮಸ್ಫಟಿಕಾಕಾರ ಶಾತಕುಂಭಸಮನ್ವಿತಂ । ಸೂರ್ಯಕೋಟಿಪ್ರತೀಕಾಶಂ ವಿಮಾನೇನವಿರಾಜಿತಂ। ಮುಕ್ತಾದಾಮ ವಿತಾನಾಢ್ಯಂ ಚಿತ್ರಧ್ವಜ ಪತಾಕಿನಂ। ಮಲ್ಲಿಕಾಕುಂದಮಂದಾರಕೇತಕೀಚಂಪಕಾದಿಭಿಃ। ಅನ್ಯೈಸ್ಸುಗಂಧ ಪುಷ್ಪೈಶ್ಚ ಸಮಂತಾದವಕೀರ್ಣಿತಂ। ಮಹಾಶಾಖಾಸ್ವರತ್ನೃಷ್ಣಕಲ್ಪವೃಕ್ಷಾಂತರಸ್ಥಿತಂ। ಸಿಂಹಾಸನೇ ಸಮಾಸೀನಂ ಸೂರ್ಯಕೋಟಿಸಮಪ್ರಭಂ। ವಿಷ್ಣುಂ ಚತುರ್ಭುಜಂ ಲಕ್ಷ್ಮೀಭೂಮಿಭ್ಯಾಂ ಪಾರ್ಶ್ವಶೋಭಿತಂ । ಧ್ಯೇಯಸ್ಸದಾ ಸವಿತೃಮಂಡಲಮಧ್ಯವರ್ತೀ........ '' ಎಂದು ಕಾಣಬರುತ್ತದೆ.

ಮತ್ತೊಂದು ಧ್ಯಾನಶ್ಲೋಕ

''ಹೃದಯೇಷ್ಟದಳಂ ಪದ್ಮಕರ್ಣಿಕಾಮಧ್ಯಶೋಭಿತಂ । ಓಂಕಾರನಾಳೇ ವಿಲಸನ್ನದಗಂಭೀರವಿಭ್ರಮಂ । ತನ್ಮಧ್ಯೇ ನವರತ್ನಾಢ್ಯಂ ತಪ್ತಹಾಟಕ

ಸನ್ನಿಭಂ । ತಸ್ಯೋಪರಿಷ್ಟಾಚ್ಚತುರಂ ನಾನಾರತ್ನವಿಭೂಷಿತಂ । ವಿದ್ರುಮಸ್ಫಟಿಕಾಕಾರ ಶಾತಕುಂಭಸಮನ್ವಿತಂ । ಸೂರ್ಯಕೋಟಿಪ್ರತೀಕಾಶಂ ವಿಮಾನೇನವಿರಾಜಿತಂ। ಮುಕ್ತಾದಾಮ ವಿತಾನಾಢ್ಯಂ ಚಿತ್ರಧ್ವಜ ಪತಾಕಿನಂ। ಮಲ್ಲಿಕಾಕುಂದಮಂದಾರಕೇತಕೀಚಂಪಕಾದಿಭಿಃ। ಅನ್ಯೈಸ್ಸುಗಂಧ ಪುಷ್ಪೈಶ್ಚ ಸಮಂತಾದವಕೀರ್ಣಿತಂ। ಮಹಾಶಾಖಾಸ್ವರತ್ನೈಷ್ಣಕಲ್ಪವೃಕ್ಷಾಂತರಸ್ಥಿತಂ। ಸಿಂಹಾಸನೇ ಸಮಾಸೀನಂ ಸೂರ್ಯಕೋಟಿಸಮಪ್ರಭಂ। ವಿಷ್ಣುಂ ಚತುರ್ಭುಜಂ ಲಕ್ಷ್ಮೀಭೂಮಿಭ್ಯಾಂ ಪಾರ್ಶ್ವಶೋಭಿತಂ। ಕಿರೀಟಹಾರಕೇಯೂರ ಕುಂಡಲೈರ್ಮಂಡಿತಾಕೃತಿಂ। ಕಟಿಸೂತ್ರ ಬ್ರಹ್ಮಸೂತ್ರ ನೂಪುರೈರುಪಶೋಭಿತಂ । ಶ್ರೀವತ್ಸವನಮಾಲಾಢ್ಯಂ ತುಲಸೀದಾಮಶೋಭಿತಂ । ಅನೇಕ ದಿವ್ಯಾಭರಣಂ ಕಟಿಕಾಭರಣೋಜ್ವಲಂ । ವರದಾಭಯಹಸ್ತಾಢ್ಯಂ ಶಂಖಚಕ್ರಸ್ಫುರತ್ಕರಂ । ಪೀತಾಂಬರಧರಂವಿಷ್ಣುಂ ಪ್ರಸನ್ನವದನಂ ಶುಭಂ । ಮನೋಹರಂ ದಯಾಮೂರ್ತಿಂ ಮಂದಹಾಸಮುಖಾಂಬುಜಂ। ಅಣಿಮಾದ್ಯೈರ್ಮೂರ್ತಿಮದ್ಭಿಃ ಅಷ್ಟೈಶ್ವರ್ಯೈರುಪಾಸಿತಂ। ಬದ್ಧಾಂಜಲಿ ಪುಟೈರ್ಭಕ್ತೈಃ ಬ್ರಹ್ಮರುದ್ರಾದಿಭಿ-ಸ್ಸುರೈಃ। ಗಾಯದ್ಭಿರ್ನಾರದಾದ್ಯೈಶ್ಚ ಸನಕಾದ್ಯೈಶ್ಚ ಸೇವಿತಂ। ಸ್ತುತಂ ಪರಮಕಲ್ಯಾಣಂ ನೂತಮಾಗಧವಂದಿಭಿಃ। ದಿವ್ಯಸ್ತ್ರೀವರಯುಗ್ಮೇನ ಯುಕ್ತಂ ಪಾರ್ಶ್ವದ್ವಯೇ ಹರಿಂ। ಸ್ವರ್ಣದಂಡವಿಚಿತ್ರಾಭ್ಯಾಂ ಚಾಮರಾಭ್ಯಾಂ ಸುಸೇವಿತಂ। ಮಾಧವಂ ಪರಮಾತ್ಮಾನಂ ಭಕ್ತವತ್ಸಲಮೀಶ್ವರಂ। ಧ್ಯಾತ್ವೇವಂ ಹೃದಿವಾ ಸೂರ್ಯಮಂಡಲೇ ಮಾಧವಂ ಜಪೇತ್ ॥

(ಇಂಥಾ) ಸವಿತೃನಾಮಕ =ಸವಿತೃನಾಮಕನಾದ; ಶ್ರೀಲಕ್ಷ್ಮೀನಾರಾಯಣಪ್ರೇರಣಯಾ= ಸಂಪದ್ಯುಕ್ತವಾದ ಲಕ್ಷ್ಮೀಸಹಿತನಾದ ಶ್ರೀಮನ್ನಾರಾಯಣದೇವರ ಪ್ರೇರಣಾದಿಂದ ; ''ನ ಋತೇ ತ್ವತ್ಕಿಂಚನಾರೇ'' ಎಂದು ಪ್ರಮಾಣವುಂಟು. ಆದಕಾರಣ ಆತನಪ್ರೇರಣಾ ವಿನಹ ನಾವುಗಳು ಸ್ವತಂತ್ರವಾಗಿ ಯಾವಕಾರ್ಯವನ್ನೂ ಮಾಡಲಾರೆವು. ಸವಿತೃನಾಮಕ ಶ್ರೀಲಕ್ಷ್ಮೀನಾರಾಯಣಪ್ರೀತ್ಯರ್ಥಂ=ಅಂಥಾ ಶ್ರೀಮನ್ನಾರಾಯಣ ದೇವರ ಪ್ರೀತಿಗೋಸ್ಕರ ಯಥಾಶಕ್ತಿ ಪ್ರಾಥಸ್ಸಂಧ್ಯಾಗಾಯತ್ರೀಮಂತ್ರಜಪಂ=ಪ್ರಾತಸ್ಸಂಧ್ಯಾಪ್ರಯುಕ್ತ ಗಾಯತ್ರೀಜಪವನ್ನು; ಕರಿಷ್ಯೇ=ಮಾಡುತ್ತೇನೆ.

**ಪ್ರಶ್ನೆ: ಗಾಯತ್ರೀಯು ಎಷ್ಟುವಿಧವಾದದ್ದು?**

ಬ್ರಹ್ಮಗಾಯತ್ರೀ ವಿಶ್ವಾಮಿತ್ರಗಾಯತ್ರೀ ಎಂದು ಗಾಯತ್ರಿಯು ಎರಡುವಿಧವಾದದ್ದು. ಸಂಧ್ಯಾವಂದನಸ್ಥವಾದ ಗಾಯತ್ರೀ ವಿಶ್ವಾಮಿತ್ರ ಗಾಯತ್ರೀ. ಇದಕ್ಕೆ ವಿಶ್ವಾಮಿತ್ರರು ಋಷಿಗಳು. ಇದು ವ್ಯಾಹೃತಿ ಸಹಿತವಾದದ್ದು. ಬ್ರಹ್ಮಗಾಯತ್ರಿಗೆ ವ್ಯಾಹೃತಿಗಳಿಲ್ಲ. ಅದಕ್ಕೆ ಬ್ರಹ್ಮನೇ ಋಷಿ. ಇದರ ವಿವರಗಳು ವರಾಹಪುರಾಣಚಾತುರ್ಮಾಸ್ಯಮಾಹಾತ್ಮೆಯಲ್ಲಿ ಹೇಳಿದೆ. ಆ ಗ್ರಂಥದಲ್ಲಿ ನೋಡಬಹುದು.

**ಪ್ರಶ್ನೆ: ಗಾಯತ್ರೀಜಪವಿಷಯದಲ್ಲಿ ಗೃಹಸ್ಥಾಶ್ರಮಿಗಳಿಗೂ, ಯತ್ಯಾಶ್ರಮಿಗಳಿಗೂ ಏನಾದರೂ ಭೇದವುಂಟಾ?**

ಉಂಟು. ಗೃಹಸ್ಥಾಶ್ರಮಿಗಳು ಸಮಸ್ತಮಂತ್ರಗಳಿಗೂ ಮೊದಲು ವಿಶ್ವಾಮಿತ್ರಗಾಯತ್ರಿಜಪವನ್ನು ಮಾಡಿ ಅಷ್ಟಮಹಾಮಂತ್ರಗಳನ್ನು ತರುವಾಯದಲ್ಲಿ ಮಾಡತಕ್ಕದ್ದು. ಸನ್ಯಾಸಿಗಳು ಓಂಕಾರನಾಮಕವಾದ ಪ್ರಣವಮಂತ್ರವನ್ನು ಪ್ರಥಮದಲ್ಲಿ ಮಾಡಿ ತರುವಾಯದಲ್ಲಿ ಗಾಯತ್ರೀ ಮೊದಲಾದ ಇತರಮಂತ್ರಗಳನ್ನು ಜಪಮಾಡತಕ್ಕದ್ದು.

**ಗಾಯತ್ರೀ ಜಪ:-**

(ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್) **ಓಂ ಭೂರ್ಭುವಃ ಸ್ವಃ । ತತ್ಸವಿತುರ್ವರೇಣ್ಯಂ । ಭರ್ಗೋದೇವಸ್ಯ ಧೀಮಹಿ । ಧಿಯೋಯೋ ನಃ ಪ್ರಚೋದಯಾತ್ ॥**

ಮತ್ತೆ ಪುನಃ ಪ್ರಾಣಾಯಾಮ, ಕರನ್ಯಾಸ, ಅಂಗನ್ಯಾಸಾದಿಗಳನ್ನು ಮಾಡಿ, ಋಷಿಛಂದಸ್ಸುಗಳನ್ನು ಹೇಳಿ; ಧ್ಯಾನಮಾಡಿ ಭಗವಾನ್ ಸವಿತೃನಾಮಕ (ಶ್ರೀಮಧ್ವಾಂತರ್ಯಾಮಿನ್) ಶ್ರೀಲಕ್ಷ್ಮೀನಾರಾಯಣಪ್ರೀತ್ಯರ್ಥಂ ಪ್ರಾತಸ್ಸಂಧ್ಯಾಂಗ ಗಾಯತ್ರೀಮಂತ್ರಜಪಃ ಸಂಪೂರ್ಣಂ । ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು॥

**ಓಂ ಭೂಃ।** (ಪರಮಾತ್ಮನು ಗುಣಪೂರ್ಣನು) **ಓಂ ಭುವಃ।**(ನಿರವಧಿಕ ಐಶ್ವರ್ಯವುಳ್ಳವನು) **ಓಂ ಸ್ವಃ।** (ಸಂಪೂರ್ಣ ಸುಖಸ್ವರೂಪನು ಯಃ=(ಇಂಥಾ ಗುಣವುಳ್ಳ ಸವಿತೃನಾಮಕ ಸವಿತೃನಿಯಾಮಕನಾದ ಯಾವ ಪರಮಾತ್ಮನು; ನ=ನಮ್ಮಗಳಿಗೆ; ಧಿಯಃ= ಬುದ್ಧಿ ವೃತ್ತಿ ಅಥವಾ ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳನ್ನು ; ಪ್ರಚೋದಯಾತ್= ಪ್ರೇರಣವನ್ನು ಮಾಡುತ್ತಾ ಇರುವನೋ ; ತಸ್ಯ=ಆ ; ದೇವಸ್ಯ=ಕ್ರೀಡಾದಿ ಗುಣವಿಶಿಷ್ಟತ್ವೇನ ಪ್ರಕಾಶಮಾನನಾದ; ಸವಿತುಃ=ಜಗತ್ತಿಗೆ ಜನಕನಾದಂತಹ ಅಂದರೆ ಸೃಷ್ಟಿಕರ್ತನಾದ; ತತ=ಗುಣಗಳಿಂದ ವ್ಯಾಪ್ತನಾದ; ವರೇಣ್ಯಂ= ಸರ್ವರಿಂದಲೂ ಭಜನೀಯನಾದಂಥಾ; ಭರ್ಗಃ= ಪರಿಪೂರ್ಣಕಾಂತಿ ಕ್ರೀಡಾ- ಜ್ಞಾನಸ್ವರೂಪನಾದಂಥಾ ಪರಮಾತ್ಮನ

ಸ್ವರೂಪವನ್ನು; ಧೀಮಹಿ=ಧ್ಯಾನ ಮಾಡುತ್ತೇವೆ.

**ಪ್ರಶ್ನೆ: ಗಾಯತ್ರೀಜಪ ಯಾವರೀತಿಯಿಂದ ಮಾಡಬೇಕು?**

''ಓಂಕಾರಂ ಪೂರ್ವಮುಚ್ಚಾರ್ಯ ಭೂರ್ಭುವಸ್ವಸ್ತಥೈವಚ । ಗಾಯತ್ರೀಂ ಪ್ರಣವಂ ಚಾಂತೇ । ಜಪಏವಮುದಾಹೃತಃ ।' ಎಂದು ಪ್ರಮಾಣವಿರುವುದರಿಂದ, ಮೊದಲು ಓಂಕಾರ, ತರುವಾಯದಲ್ಲಿ ವ್ಯಾಹೃತಿ, ತರುವಾಯದಲ್ಲಿ ಗಾಯತ್ರೀ ಪುನಃ ಅಂತ್ಯದಲ್ಲಿ ಓಂಕಾರ । ಈ ಪ್ರಕಾರ ಜಪಮಾಡಬೇಕು ಮತ್ತು 'ಪ್ರಣವವ್ಯಾಹೃತಿಯುತಾಂ ಗಾಯತ್ರೀಂ ಚ ಜಪೇತ್ತತಃ' ಎಂದು ವ್ಯಾಸಸ್ಮೃತಿಯಲ್ಲಿ ಪ್ರಮಾಣವಿರುವುದರಿಂದ, ಪ್ರಣವವ್ಯಾಹೃತಿಸಹಿತವಾಗಿಯೇ ಗಾಯತ್ರೀಜಪಮಾಡತಕ್ಕದ್ದು.

**ಪ್ರಶ್ನೆ: ಜಪ ಎಷ್ಟುವಿಧ? ಅವುಗಳ ವಿವರಣೆಯೇನು.**

ವಾಚಿಕ, ಉಪಾಂಶುಕ, ಮಾನಸಿಕ ಎಂದು ಮೂರುವಿಧ.

ಉಚ್ಚನೀಚಸ್ವರಗಳಿಂದ ಸ್ಪಷ್ಟವಾಗಿ ಶಬ್ದಗಳಿಂದ ಮಂತ್ರವನ್ನು ಬಾಯಿಯಿಂದ ಉಚ್ಚಾರಮಾಡುವುದು ವಾಚಿಕಜಪವೆಂದು ಹೆಸರು. ಮಂತ್ರವನ್ನು ಮೆಲ್ಲಗೆ ಉಚ್ಚಾರಮಾಡುತ್ತಾ ಸ್ವಲ್ಪವಾಗಿ ತುಟಿಗಳು ಕದಲಿಸುತ್ತಾ ಇತರರಿಂದ ಕೇಳದ್ದಾಂಗೆ ಮಂತ್ರೋಚ್ಚಾರಣೆ ಮಾಡುವುದು ಉಪಾಂಶುಕ ಜಪ ವೆಂದು ಹೆಸರು., ಅಕ್ಷರಸಮೂಹವರ್ಣಗಳನ್ನು ಪದಗಳನ್ನು ಧ್ಯಾನಮಾಡುತ್ತಾ ಶಬ್ದಾರ್ಥವನ್ನು ಮನಸ್ಸಿನಲ್ಲಿ ಪುನಃ ಪುನಃ ಧ್ಯಾನಿಸುತ್ತಾ ಮಾಡುವ ಜಪಕ್ಕೆ ಮಾನಸಿಕಜಪವೆಂದು ಹೆಸರು. 'ಧ್ಯಾಯೇಚ್ಚಮನಸಾಮಂತ್ರಂ ಜಿಹ್ವೋಷ್ಠೌ ನವಿಚಾಲಯೇತ್ । ನ ಕಂಸಯೇಚ್ಛಿರೋಗ್ರೀವೌ ದಂತಾನ್ನೈವಪ್ರಕಾಶಯೇತ್ ।' ಎಂದು ಮನುಸ್ಮೃತಿವಚನವುಂಟು. ವಾಚಕದಿಂದ ಉಪಾಂಶುಕ, ಉಪಾಂಶುಕಕ್ಕಿಂತ ಮಾನಸಿಕಜಪವು ಅಧಿಕ ಫಲವನ್ನು ಕೊಡುತ್ತದೆ.

**ಪ್ರಶ್ನೆ: ಸಮಸ್ತಮಂತ್ರಗಳ ಜಪಕ್ಕೂ ಇದೇ ನಿಯಮವೇನಾ?**

ಹೌದು. ''ಉತ್ತಮಂ ಮಾನಸಂ ಜಪ್ಯಂ। ಉಪಾಂಶುಂ ಮಧ್ಯಮಂ ಸ್ಮೃತಂ। ಅಧಮಂ ವಾಚಿಕಂ ಪ್ರಾಹುಸ್ಸರ್ವಮಂತ್ರೇಷು ವೈ ದ್ವಿಜಾः। ವಾಚಿಕಸ್ತ್ವೇಕಮೇಕಂ ಸ್ಯಾದುಪಾಂಶುಶ್ಶತಮುಚ್ಯತೇ। ಸಾಹಸ್ರಂ ಮಾನಸಂ ಪ್ರೋಕ್ತಂ। ಮನ್ವತ್ರಿಭೃಗುನಾರದೈಃ॥ ಎಂದು ಪ್ರಮಾಣವಿದೆ.

**ಜಪಕಾಲದಲ್ಲಿ ಯಾವಪ್ರಕಾರ ಇರಬೇಕು?**

''ಪೂರ್ವಾಂ ಸಂಧ್ಯಾಂ ಜಪಸ್ತಿಷ್ಠೇತ್ಸಾವಿತ್ರೀಮಾರ್ಕದರ್ಶನಾತ್ । ಪಶ್ಚಿಮಾಂತು ಸಮಾಸೀನಃ ಸಮ್ಯಗಾರ್ಕ್ಷವಿಭಾವನಾತ್ । ತಥಾ ಮಧ್ಯಮಸಂಧ್ಯಾಯಾಮಾಸೀನಃ ಪ್ರಾಙ್ಮುಖೋ ಜಪೇತ್ ॥'' ಎಂದು ಪ್ರಮಾಣವಿರುವುದರಿಂದ ಪ್ರಾತಸ್ಸಂಧ್ಯಾಜಪ ನಿಂತು ಸೂರ್ಯನನ್ನು ನೋಡುತ್ತಾ ಮಾಡತಕ್ಕದ್ದು. ಮಿಕ್ಕ ಎರಡು ಸಂಧ್ಯಾಂಗಜಪ ಕೂತುಮಾಡತಕ್ಕದ್ದು.

**ಜಪಕಾಲದಲ್ಲಿ ಯಾವಯಾವಕಾರ್ಯಗಳು ಬಿಡಬೇಕು?(ಮಾಡಕೂಡದು?)**

' ನ ಸಂಕ್ರಾಮನ್ ನ ಹಸನ್ । ನಪಾರ್ಶ್ವಮಲೋಕಯನ್ । ನಾಯಾಸಿತೌ ನ ಜಲ್ಪಂಶ್ಚ। ನ ಪ್ರಾವೃತಶಿರಾಸ್ತಥಾ। ನಪದಾ ಪದಮಾಕ್ರಮ್ಯ । ನ ಚೈವಹಿಕರೌ ತಥಾ। ನ ಚಾಸಮಾಹಿತಮನಾ। ನ ಚ ಸಂಶ್ರಾವಯನ್ ಜಪೇತ್। ನಾಭೇರಧಸ್ಸಂಶ್ಪರ್ಶನೇ। ಕರ್ಮಸಂಯುಕ್ತೋ ವರ್ಜಯೇತ್। ಜಪಕಾಲೇ ನ ಭಾಷೇತ । ವ್ರತಹೋಮಾದಿಕೇಷು ಚ । ಏತೇಷ್ವೇವಾವಸಕ್ತಸ್ತು ಯದ್ಯಾಗಚ್ಛೇ ದ್ವಿಜೋತ್ತಮಃ । ಅಭಿವಾದ್ಯ ತತೋವಿಪ್ರಂ ಯೋಗಕ್ಷೇಮಂ ಚ ಕೀರ್ತಯೇತ್ ॥'' ಎಂದು ಪ್ರಮಾಣವಿರುವುದರಿಂದ, ಜಪಕಾಲದಲ್ಲಿ ನಗಬಾರದು; ಪಾರ್ಶ್ವಗಳಲ್ಲಿ ನೋಡಬಾರದು; ಮಾತನಾಡಬಾರದು; ಮಷ್ಕಿರಿ ಮಾಡಬಾರದು; ತಲೆಗೆ ಬಟ್ಟೆಕಟ್ಟಿಕೊಂಡು ಕೂಡಬಾರದು; ಕಾಲುಮೇಲೆ ಕಾಲುಹಾಕಿಕೊಂಡು ಕೈಮೇಲೆ ಕೈಹಾಕಿ ಕೊಂಡು ಕೂಡಬಾರದು; ಮನಸ್ಸು ಅನ್ಯತ್ರದಲ್ಲಿಡಬಾರದು; ನಾಭಿಪ್ರದೇಶಕ್ಕೆ ಕೆಳಭಾಗದಲ್ಲಿ ಸ್ಪರ್ಶಮಾಡಬಾರದು; ಈ ಪ್ರಕಾರ ಸಮಾಹಿತ ಮನಸ್ಸುಳ್ಳವನಾಗಿ ಜಪವನ್ನು ಮಾಡಬೇಕು. ಜಪಕಾಲದಲ್ಲಿ ಯಾರಾದರೂ ಬ್ರಾಹ್ಮಣಶ್ರೇಷ್ಠರು ಬಂದರೆ, ಅವರಿಗೆ ನಮಸ್ಕಾರಮಾಡಿ ಯೋಗಕ್ಷೇಮವನ್ನು ವಿಚಾರಿಸಬೇಕು.

ಮತ್ತು 'ಕ್ರೋಧ,ಮಾಂದ್ಯ,ನಿದ್ರಾ, ಹಸಿವು, ಅಪಾನವಾಯುವುಬಿಡೋಣ, ನಾಯಿ ಮೊದಲಾದ ನೀಚರ ದರ್ಶನ, ಇಂಥಾವು ಕೂಡ ಬಿಡತಕ್ಕದ್ದು. 'ಕ್ರೋಧಂ ಮಾಂದ್ಯಂ ಕ್ಷುತಂ ನಿದ್ರಾಂ। ನಿಷ್ಠೀವನ ವಿಜೃಂಭಣಂ। ದರ್ಶನಂ ಶ್ವಾದಿ ನೀಚಾನಾಂ ವರ್ಜಯೇಜ್ಜಪಕರ್ಮಣಿ।''

ಎಂದು ಪ್ರಮಾಣವಿದೆ.

**ಶ್ರೀತಿಮ್ಮಣ್ಣಾರ್ಯರು: ಜಪಾದಿ ವಿಷಯೇ ವರ್ಜಾಃ** ॥ ಸೋಷ್ಣೀಷಕಂಚುಕೋನಗ್ನಮುಕ್ತಕೇಶಗಲಾವೃತಃ । ಅಪವಿತ್ರ-ಕರೋಶುದ್ಧಃ ಪ್ರಹಸನ್ ನ ಜಪೇತ್ ಕ್ವಚಿತ್ । ಗಲಾವೃತಃ ಗಲೇ ವಸ್ತ್ರಾವೃತ ಇತ್ಯರ್ಥಃ । ಮುಕ್ತಕೇಶೋರ್ಗಳಾವೃತಃ ಇತಿ ಕುತ್ರಚಿತ್ ಪಾಠಃ ॥ ತತ್ಪಕ್ಷೇ ಅಗಲಾವೃತಃ ಶೃಂಖಲಾಬದ್ಧ ಇತ್ಯರ್ಥಃ । ಅಪವಿತ್ರಕರಃ ಶುದ್ಧಿರಹಿತಃ ಅಶುದ್ಧಃ ಪಾಪಪುರುಷ ವಿಸರ್ಜನಾದಿ ರಹಿತಃ । ನ ಚಕ್ರಮನ್ ನ ಚ ಹಸನ್ ನಪಾರ್ಶ್ವಮವಲೋಕಯನ್ । ನ ಪಾದೇ ಪಾದಮಾಕ್ರಮ್ಯ ನ ಚ ವ್ಯವಹಿತೌ ಕರೌ । ನಚಾಸಮಾಹಿತಮನಾಃ ನ ಚ ಸಂಶ್ರಾವಯನ್ ಜಪೇತ್ । ಕ್ರಮನ್ ಪಾದವಿಕ್ಷೇಪಂ ಕುರ್ವನ್ । ಗಚ್ಛನ್ನಿತಿ ಯಾವತ್ । ಸಂಶ್ರಾವಯನ್ ದುಷ್ಟವಚನಾನಿ ಶೃಣ್ವನ್ । 'ಶ್ರಾವಯಂಶ್ಚವದನ್ನುಚ್ಚೈಃ ಸ್ವಯಂ ಚಾನ್ಯಮಾಶ್ರಯನ್ । ಕಿಮಪಿ ಸ್ಮರನ್ । ಕೃತಜೃಂಭಣ ಆಕಾರಾದಿಃ ವಿಗಲೀಕೃತಮಾನಸಃ । ಮಂತ್ರಸಿದ್ಧಿಂ ನ ಚಾಪ್ನೋತಿ ಪಶ್ವಾದ್ಯತಪರೋ ಭವೇತ್ ॥ ಅನ್ಯಮಾಶ್ರಯನ್ ಭೀತಾದ್ಯವಲಂಬನಂ ಕುರ್ವನ್ನಿತಿ ಅರ್ಥಃ । ಕ್ರೋಧೋನ್ಮಾದಕ್ಷುಧಾನಿದ್ರಾನಿಷ್ಠೀವನಜೃಂಭಣಂ । ದರ್ಶನಂ ಚಾನ್ಯ ನೀಚಾನಾಂ ವರ್ಜಯೇಜ್ಜಪಕರ್ಮಣಿ । ಪ್ರಮಾದಾತ್ಪ್ರಾಪ್ತಾಪ್ತ ನೀಚೇದಾಚಮ್ಯ ಶುದ್ಧ್ಯತಿ । ಶೂದ್ರಂ ವಾ ಪತಿತಂ ಚೈವ ರಾಸಭಂ ಚ ರಜಸ್ವಲಾಂ । ದೃಷ್ಟ್ವಾತೋಯಮುಪಸ್ಪೃಶ್ಯ ಬಾಹ್ಯೇ ಸ್ನಾತ್ವಾ ಪುನರ್ಜಪೇತ್ । ಜಪಸಂಪತ್ತಿಕರಾಣ್ಯಾಹ ॥

### ಗಾಯತ್ರಿಜಪವನ್ನು ಎಷ್ಟು ಆವರ್ತಿ ಮಾಡತಕ್ಕದ್ದು ?

''ಸಹಸ್ರಂ ಪರಮಾಂ ದೇವೀಂ । ಶತಮಧ್ಯಾಂ ದಶಾವರಾಂ।'' ಎಂದು ಶ್ರೀಮದಾಚಾರ್ಯರು 1000 ಆವರ್ತಿ ಉತ್ತಮವೆಂತಲೂ, 100 ಆವರ್ತಿ ಮಧ್ಯಮವೆಂತಲೂ, ಹತ್ತಾವರ್ತಿ ಅಧಮವೆಂತಲೂ ಹೇಳಿದ್ದಾರೆ. ಅವರವರ ಸೌಕರ್ಯಾನುಸಾರ ಗುರುಗಳ ಆಜ್ಞಾತೆಗೆದುಕೊಂಡು ಅವರಿಂದ ಉಕ್ತವಾದ ಆವರ್ತಿಗಳನ್ನು ಮಾಡತಕ್ಕದ್ದು. ಮತ್ತು,

''ಬ್ರಹ್ಮಚಾರ್ಯಾಹಿತಾಗ್ನಿಶ್ಚ । ಶತಮಷ್ಟೋತ್ತರಂ ಜಪೇತ್ ॥ ವಾನಪ್ರಸ್ಥೋ ಯತಿಶ್ಚೈವ । ಸಹಸ್ರಾದಧಿಕಂ ಜಪೇತ್ ॥'' ಎಂದು ಯಾಜ್ಞ್ಯವಲ್ಕ್ಯಸ್ಮೃತಿಯಲ್ಲಿ ಉಕ್ತವಾಗಿದೆ. ಮತ್ತು, 'ಸಹಸ್ರಂ ಪರಮಾಂ ದೇವೀಂ । ಶತಮಧ್ಯಾಂ ದಶಾವರಾಂ ॥ ಗಾಯತ್ರೀಂ ತು ಜಪೇನ್ನಿತ್ಯಂ । ಸರ್ವಪಾಪಪ್ರಣಾಶನಂ ॥'' ಎಂದು ಮನುಸ್ಮೃತಿಯಲ್ಲಿಯೂ, ಮತ್ತು 'ದರ್ಶೇಶ್ರಾದ್ಧೇ ಪ್ರದೋಷೇಚ ಗಾಯತ್ರೀಂ ದಶಸಂಖ್ಯಯಾ । ಅಷ್ಟಾವಿಂಶತ್ಯನಧ್ಯಾಯೇ । ಸುದಿನೇ ತು ಯಥಾಕ್ರಮಂ ॥'' ಎಂತೆಯೂ ಬಹುಪ್ರಮಾಣಗಳುಂಟು. ಆದಕಡೆಯಿಂದ, ಬ್ರಹ್ಮಚಾರಿ ಮತ್ತು ಗೃಹಸ್ಥಾಶ್ರಮಿಗಳು ಸಾಧ್ಯವಾದರೆ 108 ಆವರ್ತಿಜಪಮಾಡುವುದು ಯುಕ್ತವೆಂದು ತೋರುತ್ತದೆ. ವಾನಪ್ರಸ್ಥ ಮತ್ತು ಯತಿಗಳು ಅವಶ್ಯಕವಾಗಿ 1000 ಆವರ್ತಿಮೇಲೆ ಮಾಡುವುದು ಅವಶ್ಯಕವೆಂದು ತೋರುತ್ತದೆ. ಹತ್ತು ಆವರ್ತಿಯೆಂಬುವುದು ಅಧಮಪಕ್ಷ, ಅಷ್ಟಕ್ಕೆ ಕಡಿಮೆ ಮಾಡಬಾರದೆಂದು ತಿಳಿಯಬೇಕು. (ವಾನಪ್ರಸ್ಥಾಶ್ರಮವು ಕಲಿಯುಗದಲ್ಲಿ ನಿಷಿದ್ಧಮಾಡಲ್ಪಟ್ಟಿದೆ.)

ಮತ್ತು ; ''ಶತಂ ಜಪ್ತ್ವಾತು ಗಾಯತ್ರೀ ಪಾಪೋಪಶಮನೀಸ್ಮೃತಾ । ಸಹಸ್ರಂ ಜಪ್ತ್ವಾ ಸಾ ದೇವೀ ಉಪಪಾತಕನಾಶಿನೀ । ಅಭೀಷ್ಟದಾ ಕೋಟಿ ಜಪ್ತ್ವಾದೇವತ್ವಂ ರಾಜತಾಮಿಯಾತ್ ॥'' ಎಂತೆಯೂ ಪ್ರಮಾಣವಿದೆ.

''ದರ್ಭೇಷ್ವಾಸೀನೋ ದರ್ಭಾಂಧಾರಯಮಾಣಸ್ಸೋದಕೇನ ಪಾಣಿನಾ ಪ್ರಾಙ್ಮುಖಸ್ಸಾವಿತ್ರೀಂ ಸಹಸ್ರಕೃತ್ವಾ ಆವರ್ತಯೇಚ್ಛತಕೃತ್ವೋಪರಿಮಿತ ಕೃತ್ವೋ ವಾ'' ಎಂದು ಮತ್ತೊಂದು ಶೃತಿಯ ಪ್ರಮಾಣವುಂಟು. ಮತ್ತು '' ಆದ್ರ್ರವಾಸಾಜಲೇ ಕುರ್ಯಾತ್ ತರ್ಪಣಾಚಮನಂ ಜಪಂ । ಶುಷ್ಕವಾಸಾಸ್ಥಲೇ ಕುರ್ಯಾತ್ತರ್ಪಣಾಚಮನಂ ಜಪಂ । ಜಾನುಮಾತ್ರೇ ಜಲೇತಿಷ್ಠನ್ನಾಸೀನಃ ಪ್ರಾಙ್ಮುಖಸ್ಥಲೇ ।'' ಎಂದು ಪ್ರಮಾಣವಿದ್ದುದರಿಂದ, ನೀರಿನಲ್ಲಿ ಮೊಳಕಾಲುಮಟ್ಟು ನೀರಿನಲ್ಲಿ ನಿಂತು ವದ್ದೆ ಉಟ್ಟುಕೊಂಡು, ಸ್ಥಳದಲ್ಲಿ ಒಣಗಿದವಸ್ತ್ರವನ್ನುಟ್ಟುಕೊಂಡು ಪೂರ್ವಾಭಿಮುಖನಾಗಿ ಜಪಮಾಡತಕ್ಕದ್ದು.

### ಗಾಯತ್ರೀಜಪ ಮಾಲಾದಿಂದ ಮಾಡಬೇಕಾ, ಬೆಟ್ಟುಗಳಿಂದ ಮಾಡಬೇಕಾ?

ಗಾಯತ್ರೀಜಪ ಪರ್ವಗಳಿಂದ ಮಾಡಬೇಕೆಂದು, ಈ ಕೆಳಗೆ ಹೇಳುವ ಪ್ರಮಾಣಗಳುಂಟು. ಪರ್ವಗಳೆಂದರೆ, ಕೈಗೆಣ್ಣುಗಳು.

''ಗಾಯತ್ರ್ಯಾಃ ವೇದಮೂಲತ್ವಾದ್ವೇದಃ ಪರ್ವಸುಗೀಯತೇ । ಪರ್ವಭಿಶ್ಚ ಜಪೇನ್ನಿತ್ಯಂ ನಾಕ್ಷಮಾಲಾದಿಭಿರ್ನೃಪ । ಆರಭ್ಯಾನಾಮಿಕಾಮೂಲಂ

ಪ್ರಾದಕ್ಷಿಣ್ಯೇನವೈ ಕ್ರಮಾತ್ । ಮಧ್ಯಮಾಮೂಲಪರ್ಯಂತಂ ಜಪೇದ್ದಶಸುಪರ್ವಸು ।'' ಎಂದು ಶಂಖಸ್ಮೃತಿಯಲ್ಲಿಯೂ; ''ಪರ್ವಭಿಸ್ತು ಜಪೇದ್ದೇವೀಂ ಮಾಲಾಕಾಮ್ಯಂ ಜಪೇಸ್ಮೃತಾ।'' ಎಂದು ಪ್ರಪಂಚಸಾರದಲ್ಲಿ ಹೇಳಿದೆ.

'ಶಂಖರೂಪ್ಯಮಯೀಮಾಲಾ ಕಾಂಚನೀಭಿರಥೋತ್ಪಲೈಃ । ಪದ್ಮಾಕ್ಷಕೈಶ್ಚರುದ್ರಾಕ್ಷೈರ್ವಿದ್ರುಮೈರ್ಮಣಿಮೌಕ್ತಿಕೈಃ । ತಥಾ ಚೈಂದ್ರಾಕ್ಷಿಕೈರ್ಮಾಲಾ ತಥೈಕಾಂಗುಲಿಪರ್ವಭಿಃ । ಪುತ್ರಜೀವಮಯೀಮಾಲಾಶಸ್ತಾವೈಜಪಕರ್ಮಣಿ ॥'' ಎಂದು ಪರಾಶರಸ್ಮೃತಿಯಲ್ಲಿ ಪ್ರಮಾಣವಿದೆ. ವಿಶ್ವಾಮಿತ್ರ ಗಾಯತ್ರಿಜಪ ಅಂಗುಲಿಪರ್ವಗಳಿಂದಲೂ, ಅಷ್ಟಮಹಾಮಂತ್ರಾಂತರ್ಗತ ಗಾಯತ್ರೀಜಪ ಮಾಲಾದಿಂದಲೂ ಮಾಡಬೇಕೆಂತಲೂ ತೋರುತ್ತದೆ. ಮತ್ತು 'ಪರ್ವಾಭಿರ್ಗಣಯತ್ಸಂಖ್ಯಾ ನಾಕ್ಷಮಾಲಾದಿಭಿರ್ನೃಪ। ಗಾಯತ್ರ್ಯಾ ವೇದಮೂಲತ್ವಾತ್ ವೇದಃ ಪರ್ವಸುಗೀಯತೇ। ಆರಭ್ಯಾನಾಮಿಕಾ ಮಧ್ಯಪರ್ವಪ್ರಾದಕ್ಷಿಣ್ಯೇನಕ್ರಮಾತ್ ।ತರ್ಜನೀಮೂಲಪರ್ಯಂತಂ ಸಂಖ್ಯಾಯಂ ತ್ರಿಪದೀಂ ಜಪೇತ್ । ಮಧ್ಯಪರ್ವದ್ವಯೇ ಮೇರೂಸ್ತಂ ಮೇರುಂ ನಾತಿಲಂಘಯೇತ್ ॥'' ಎಂದು ಮತ್ತೊಂದು ಪ್ರಮಾಣವುಂಟು.

### ಗಾಯತ್ರೀ ಜಪ ಮಾಡಿದರೆ ಫಲವೇನು?

''ತ್ರಿಮೂರ್ತಿರೂಪಾಂ ಗಾಯತ್ರೀಂ। ತ್ರಿಸಂಧ್ಯಾಯಾಂ ಜಪೇಚ್ಛುಚಿಃ। ಸರ್ವಬಂಧವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ॥'' ಎಂದು ಪ್ರಮಾಣವಿರುವುದರಿಂದ ಗಾಯತ್ರೀ ಜಪ ಮಾಡುವವನು ಸರ್ವಬಂಧಗಳಿಂದ ಬಿಡಲ್ಪಟ್ಟವನಾಗಿ ವಿಷ್ಣುಲೋಕ(ವೈಕುಂಠ)ವನ್ನು ಹೊಂದುತ್ತಾನೆ.

### ಗಾಯತ್ರೀಜಪ ಯಜ್ಞೋಪವೀತಹಿಡಿದುಕೊಂಡು ಮಾಡಬೇಕಾ?

ಗಾಯತ್ರೀಜಪ ಯಜ್ಞೋಪವೀತ ಹಿಡುಕೊಂಡು ಮಾಡಬಾರದು. ವ್ಯಾಘ್ರಪಾದಸ್ಮೃತಿಯಲ್ಲಿ ''ಯಜ್ಞೋಪವೀತಹಸ್ತೇನ ಗಾಯತ್ರೀ ಜಪಮಾಚರೇತ್। ತಜ್ಜಪಂ ನಿಷ್ಫಲಂ ಪ್ರೋಕ್ತಂ ಸ ವಿಪ್ರೋ ಬ್ರಹ್ಮಹಾಭವೇತ್ ॥' ಎಂದು ಪ್ರಮಾಣವಿದೆ.

ಗಾಯತ್ರೀಜಪವನ್ನು ಯಜ್ಞೋಪವೀತಹಿಡುಕೊಂಡು ಮಾಡಿದರೆ ಆ ಜಪ ನಿಷ್ಫಲವಾಗುತ್ತದೆಂದೂ, ಜಪಮಾಡಿದವ ಬ್ರಹ್ಮಹತ್ಯಾಪಾಪಭಾಗಿ ಯಾಗುತ್ತಾನೆಂದೂ ಪ್ರಮಾಣವು ಹೇಳುತ್ತದೆ.

### ಗಾಯತ್ರೀಜಪಮಾಡುವಾಗ್ಗೆ ಕೈಗಳನ್ನು ಯಾಕೆ ಮುಚ್ಚುತ್ತಾರೆ?

ಜಪಕಾಲದಲ್ಲಿ ಜಪಮಾಡುವ ಕೈಗಳು ಹೊರಗೆ ಕಾಣಿಸಬಾರದೆಂದೂ ಆ ಪ್ರಕಾರಕಾಣಿಸಿದರೆ ಜಪ ನಿಷ್ಫಲವಾಗುತ್ತದೆಂದೂ ಪ್ರಮಾಣವಿದೆ.

### ಗಾಯತ್ರೀ ಜಪ ಮಾಡದಿದ್ದರೆ ಏನು ಪ್ರತ್ಯವಾಯ(ದೋಷ) ಬರುತ್ತದೆ?

'ಗಾಯತ್ರೀಂ ತು ಪರಿತ್ಯಜ್ಯ ಯೋನ್ಯಮಂತ್ರಮುಪಾಸತೇ। ಮಂಡೂಕರಾವಾಂತೇ ಜ್ಞೇಯಾ। ಇತಿ ವೇದವಿದೋ ವಿದುಃ।''
ಎಂದು ಪ್ರಮಾಣವಿದ್ದಕಡೆಯಿಂದ, ಗಾಯತ್ರಿಮಂತ್ರಬಿಟ್ಟು ಬೇರೆಮಂತ್ರಗಳನ್ನು ಜಪಮಾಡಿದರೆ ಕಪ್ಪೆಗಳು ವದರಿದಂತೆ ಆಗುತ್ತದೆ. 'ಏಕಾಹಂ ಜಪ ಹೀನಶ್ಚ। ಸಂಧ್ಯಾಹೀನೋ ದಿನತ್ರಯೇ। ದ್ವಾದಶಾಹಮನಗ್ನಿಶ್ಚ ಶೂದ್ರ ಏವ ನ ಸಂಶಯಃ' ಎಂದು ಪ್ರಮಾಣವಿದೆ. ಮತ್ತು ''ಕುರ್ಯಾದನ್ಯಂ ನವಾ ಕುರ್ಯಾತ್ಸ್ವಾಧ್ಯಾಯಮಂಜಸಾ' ಎಂದು ಪ್ರಮಾಣವಿರುವುದರಿಂದ ಯಾವುದನ್ನು ಬಿಟ್ಟರೂ ಸಂಧ್ಯಾಂಗ ಗಾಯತ್ರೀಜಪ ಬಿಡಕೂಡದು.

### ಪ್ರಶ್ನೆ:- ಗಾಯತ್ರೀಜಪ ಸ್ನಾನಮಾಡಿ ಮಾಡಬೇಕೋ ಇಲ್ಲವೋ?

''ಗಾಯತ್ರೀಂ ಯೋ ಜಪೇದ್ವಿಪ್ರೋ। ನಿರೋಗೋ ಸ್ನಾನವರ್ಜಿತಃ॥ ಅಷ್ಟೋತ್ತರ ಸಹಸ್ರಂ ವಾ ಬ್ರಾಹ್ಮಣ್ಯರ್ಥ ಸಮಶ್ನುತೇ॥ ಪಶ್ಚಾದ್ವೈಶ್ಯೋ ಭವೇದ್ವಿಪ್ರೋ ಕ್ಷಯರೋಗೀ ಸ ಜಾಯತೇ॥ ತಸ್ಮಾತ್ ಸ್ನಾತ್ವಾ ಯಥಾಶಕ್ತಿ ಜಪೇದಾಭಾಸ್ಕರೋದಯಂ॥ ಎಂದು ಪ್ರಮಾಣವಿರುವುದರಿಂದ ರೋಗರಹಿತನು ಸ್ನಾನಮಾಡಿಯೇ ಜಪವನ್ನು ಮಾಡತಕ್ಕದ್ದು. ಸ್ನಾನಗಳು ದಶವಿಧವುಂಟು. (ಅವುಗಳನ್ನು ಬೇರೆ ಆಕರಗಳಿಂದ ತಿಳಿಯತಕ್ಕದ್ದು)

### ಅಂಗನ್ಯಾಸ, ಋಷಿಛಂದಸ್ಸು, ಧ್ಯಾನ ಮೊದಲಾದ್ದು ಏಕೆ ಮಾಡಬೇಕು?

'ನ್ಯಾಸಹೀನೇ ಹರೇದಾಯುಃ। ಧ್ಯಾನಹೀನೇತು ನಿಷ್ಫಲಂ। ಋಷಿಹೀನೇ ಮಹಾವ್ಯಾಧಿಃ। ಭವತ್ಯೇವ ನ ಸಂಶಯಃ॥ ತಸ್ಮಾದ್ದೇವರ್ಷಿ ಛಂದಾಂಸಿ। ಜ್ಞಾತವ್ಯಾನಿ ಮಹಾತ್ಮಭಿಃ।' ಎಂದು ನಾರದೀಯವಚನವಿರುವುದರಿಂದ, ನ್ಯಾಸಾದಿಗಳು ಮೊದಲು ಮಾಡಿ ತರುವಾಯದಲ್ಲಿಯೇ

ಜಪಮಾಡತಕ್ಕದ್ದು.

**ಗಾಯತ್ರೀ ಜಪ ಯಾವದಿಕ್ಕಿಗೆ ಅಭಿಮುಖವಾಗಿ ಮಾಡಿದರೆ ಏನು ಫಲ?**

'ದೇವಸ್ಯಪೂರ್ವದಿಗ್ಭಾಗೇ ಜಪೇದಾಯುಷ್ಯವರ್ಧನಂ। ಪಾವಕೇ ಕಲಹಂ ಕುರ್ಯಾತ್ ದಕ್ಷಿಣೇಜ್ಞಾನವರ್ಧನಂ। ರಾಕ್ಷಸೇ ಮರಣಂ ಕುರ್ಯಾತ್ ಪಶ್ಚಿಮೇ ಮೋಕ್ಷದಾಯಕಂ । ಆಕರ್ಷಣಂ ಸ್ಯಾದ್ವಾಯವ್ಯೇ ಉತ್ತರೇ ಶ್ರಿಪ್ರದಾಯಕಂ ಉಚ್ಚಾಟನಕರಂ ತ್ವೀಶೇ ಮಧ್ಯಮೇ ಚಾರ್ಥಸಿದ್ಧಿದಂ ॥'' ಎಂದು ಪ್ರಮಾಣವಿರುವುದರಿಂದ, ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳಿಗೆ ಒಂದು ದಿಕ್ಕಿಗೆ ಅಭಿಮುಖವಾಗಿ ಮಾಡಬೇಕು. ಅದು ಶುಭಫಲಪ್ರದ.

**ಮಾಲಾದಿಂದ ಜಪಮಾಡುವಪಕ್ಷಕ್ಕೆ ಮಾಲಾವನ್ನು ಹೇಗೆ ಹಿಡಿದುಕೊಳ್ಳಬೇಕು?**

ಮಧ್ಯಮಾನಾಮಿಕಾಂಗುಷ್ಠೈರ್ಜಪೇನ್ನಾನ್ಯೈಃ ಕದಾಚನ । ತರ್ಜನ್ಯಾನಸ್ಪೃಶೇನ್ಮಾಲಾಂ ಕನಿಷ್ಠೇನ ಕದಾಚನಾ ॥ ಜಪಮಾಲಾ ಪ್ರಗೋಪ್ತವ್ಯಾ ಜಪಕಾಲೇಸುಮೇಧಸಾ । ಪರದೃಷ್ಟಿಕೃತಾಮಾಲಾ ನಿಷ್ಫಲಾಜಪಕರ್ಮಣಿ । ಅಕ್ಷಮಾಲಾ ಪ್ರಗೋಪ್ತವ್ಯಾ ಗುರೋರಪಿ ನದರ್ಶಯೇತ್ ।'' ಎಂದು ಬ್ರಹ್ಮತರ್ಕದಲ್ಲಿ ಪ್ರಮಾಣವಿರುವುದರಿಂದ, ಜಪಮಾಲಾವನ್ನು ಹೆಬ್ಬೆಟ್ಟು, ಮಧ್ಯಬೆಟ್ಟು ಮತ್ತು ಅನಾಮಿಕಾ ಇವು ಮೂರುಬೆಟ್ಟುಗಳಿಂದ ಹಿಡಯಬೇಕು. ತರ್ಜನೀಬೆಟ್ಟಾಗಲೀ, ಕಿರುಬೆಟ್ಟಾಗಲೀ ಅದಕ್ಕೆ ತಗಲಕೂಡದು. ಮಾಲಾವನ್ನು ಇತರರು ನೋಡದಂತೆ ಜಪಮಾಡಬೇಕು. ತನ್ನ ಗುರುಗಳಿಗೂ ಕೂಡಾ ತೋರಿಸಬಾರದು. (ಅದಕ್ಕೆ ಬಹುಮಂದಿ ಶಿಷ್ಯರು ತುಂಬಾ ಮುಸುಕು ಹಾಕಿಕೊಂಡು ಮುಸುಕಿನ ಒಳಗೆ ಆಗಲೀ ದೇವರಪೆಟ್ಟಿಗೆ ಮುಚ್ಚಳದಲ್ಲಿಯಾಗಲೀ, ಮಾಲಾವನ್ನು ಹಿಡಿದುಕೊಂಡು ಒಬ್ಬರಿಗೆ ಕಾಣಿಸದಂತೆ ಜಪಮಾಡುತ್ತಾರೆ.)

ಮತ್ತು 'ಕೃತ್ವೋತ್ತಾನೌ ಕರೌ ಪ್ರಾತಃ ಸಾಯಂ ಚಾಧೋಮುಖೌ ಕರೌ । ಮಧ್ಯೆಸ್ಕಂಧಭುಜಾಭ್ಯಾಂ ತು ಜಪ ಏವ ಮುದಾಹೃತಃ । ಪ್ರಾತರ್ನಾಭ್ಯಾಂ ಕರೇ ತತ್ರ (ಕೃತ್ವಾ) ಮಧ್ಯಾನ್ಹೇ ಹೃದಿಸಂಸ್ಥಿತೇ। ಸಾಯಾಹ್ನೇ ಮುಖಮಧ್ಯೇ ಚ ಗಾಯತ್ರೀಜಪಮುತ್ತಮಂ।' ಎಂದು ಪ್ರಮಾಣ ವಿರುವುದರಿಂದ, ಭುಜಗಳಿಗೂ, ಸ್ಕಂಧ(ಕುತ್ತಿಗೆ ಕೆಳಗಿನ ದೇಹ)ಕ್ಕೂ ಮಧ್ಯವಾಗಿ ಕೈಗಳನ್ನು ಮಾಡಿಕೊಂಡು ಜಪಮಾಡತಕ್ಕದ್ದೆಂದು ತೋರುತ್ತದೆ. ಮತ್ತು ಪ್ರಾತಃಕಾಲದ ಜಪ ನಾಭಿಗೆ ಸಮನಾಗಿಯೂ, ಮಧ್ಯಾನ್ಹ ಸಂಧ್ಯಾಂಗಜಪ ಹೃದಯದ ಸಮವಾಗಿಯೂ, ಸಾಯಂಕಾಲದ ಜಪ ಮುಖಕ್ಕೆ ಸಮವಾಗಿಯೂ ಕೈಗಳು ಇಟ್ಟುಕೊಂಡು ಉತ್ತಮಕಲ್ಪದಲ್ಲಿ ಮಾಡಬೇಕೆಂತಲೂ ತಿಳಿಯುತ್ತದೆ.

ಮತ್ತು ಪ್ರಾತಸ್ಸಂಧ್ಯಾಂಗಜಪ ನಾಭಿಗೆ, ಮಧ್ಯಾನ್ಹ ಜಪ ಹೃದಯಕ್ಕೆ, ಸಾಯಂಕಾಲ ಜಪ ನಾಸಿಕಾಗ್ರಕ್ಕೆ ಎದುರಾಗಿ ಮಾಡಬೇಕೆಂತಲೂ, ಈ ಕೆಳಗೆ ಹೇಳುವ ಮತ್ತೊಂದು ಪ್ರಮಾಣವಿದೆ. '' ಪ್ರಾತರ್ಮಧ್ಯಾನ್ಹಸಾಯಾನ್ಹೇ ನಾಭೌಹೃದಯನಾಸಯೋಃ। ಉತ್ತಾನತಿರ್ಯನ್ನ್ಯುಬ್ಜೌ ಚಕರೌಕೃತ್ವಾ ಜಪೇತ್ಕ್ರಮಾತ್ ॥'' ಎಂದು.

**ಗಾಯತ್ರೀ ಜಪ ದಂಡಾಕಾರವಾಗಿ ಮಾಡಬೇಕಾ? ಇಲ್ಲದಿದ್ದರೆ ಗಾಯತ್ರೀ ಮಂತ್ರವನ್ನು ಮೂರುಪಾದವಾಗಿ ವಿಭಜಿಸಿ ಮಾಡಬೇಕಾ?**

ಗಾಯತ್ರೀಮಂತ್ರವನ್ನು ಮೂರುಪಾದವಾಗಿ ವಿಭಜಿಸಿ ಜಪಮಾಡಬೇಕು. ಆ ಪ್ರಕಾರಮಾಡಿದರೆ ಬ್ರಹ್ಮಹತ್ಯಾದಿ ಪಾಪಾಗಳು ಕಳಿಯುವು-ದೆಂತಲೂ, ದಂಡಾಕಾರವಾಗಿ ಮಾಡಿದರೆ ಬ್ರಹ್ಮಹತ್ಯಾದೋಷವು ಕೂಡುವುದೆಂತಲೂ, ಈ ಕೆಳಗೆ ಹೇಳುವ ಶಂಖಸ್ಮೃತಿಯ ಪ್ರಮಾಣವಿದೆ.

''ಭಿನ್ನಪಾದಾತು ಗಾಯತ್ರೀ ಬ್ರಹ್ಮಹತ್ಯಾಂ ವ್ಯಪೋಹತಿ । ಅಚ್ಛಿನ್ನಪಾದ ಗಾಯತ್ರೀ ಬ್ರಹ್ಮಹತ್ಯಾಂ ಪ್ರಯಚ್ಛತಿ । ತಸ್ಮಾತ್ಪಾದತ್ರಯಂ ಛಿತ್ವಾ ಜಪಯಜ್ಞಂ ಸಮಾಚರೇತ್।

**ಗಾಯತ್ರೀಜಪಮಾಡುವುದರಲ್ಲಿ ಏನಾದರೂ ದೋಷಗಳು ಉಂಟಾ ?**

ಉಂಟು. ಅವುಗಳನ್ನು ಕೆಳಗೆ ವಿವರಣೆ ಮಾಡುತ್ತೇವೆ. ಅವಕ್ಕೆ ಆಸ್ಪದವಿಲ್ಲ, ಆದುದರಿಂದ ಆ ದೋಷಗಳನ್ನು ಕಳೆದುಕೊಂಡು ಜಪವನ್ನು ಜಾಗ್ರತೆಯಿಂದ ಮಾಡತಕ್ಕದ್ದು.

ವಿಷ್ಣುತಿಲಕ ತಂತ್ರದಲ್ಲಿ:- ''ಮೂಕಃಸುಪ್ತೌಮೃತೋನಗ್ನೋ ವೀರ್ಯಹೀನೋ ವೃಥಾಹತಃ। ಭುಜಂಗಃ ಕೀಲಿತಂ ಶೂನ್ಯೋ ದಶದೋಷಾಃ ಪ್ರಕೀರ್ತಿತಾಃ।''

''ನ್ಯಾಸಹೀನೋ ಭವೇನ್ಮೂಕಃ; ಸುಪ್ತಸ್ಯಾದಾಸನಂ ವಿನಾ । ಶಿರೋಹೀನೋ ಮೃತಃ ಪ್ರೋಕ್ತೋ ವಾಸೋಹೀನಸ್ತು ನಗ್ನಕಃ । ಮಂತ್ರಾಣಾಂ ಪಲ್ಲವೋ ವಾಸೋ ಮಂತ್ರಾಣಾಂ ಪ್ರಣವಶ್ಶಿರಃ । ಗುರುಂ ವಿನಾ ವೃಥಾಮಂತ್ರೋ ವೀರ್ಯಹೀನೋಧಿಕಾಕ್ಷರಃ । ನ್ಯೂನಾಕ್ಷರೋ ಹತಃ ಪ್ರೋಕ್ತೋ ಭುಜಂಗಸ್ಸ್ವರಯಾಯುತಃ । ವಿಲಘಿತಂ ಕೀಲಿತಂ ಸ್ಯಾತ್ ಜ್ಞಾತ್ವಾ ಮಂತ್ರಂ ಜಪೇತ್ಸುಧೀಃ । ಯಸ್ಯ ಜಾಪ್ಯಂ ಶೃಣೋತ್ಯನ್ಯಃ ಸ ಮಂತ್ರಶ್ಶೂನ್ಯ ಉಚ್ಯತೇ। ದೋಷಾನೇತಾನ್ಪರಿತ್ಯಜ್ಯ ಜಪ್ತ್ವಾಸಿದ್ಧಿಮವಾಪ್ನುಯಾತ್ । ಮಂತ್ರಸಿದ್ಧಿರ್ಭವೇತ್ತಸ್ಯ ಯಥೋಕ್ತ ಜಪಪೂರಣಾತ್ ॥''

**ಪ್ರಪಂಚಸಾರದಲ್ಲಿ** :-

''ವಸ್ತ್ರೇಣಾಚ್ಛಾದ್ಯ ತು ಕರಂ ಗಾಯತ್ರೀಂ ಯಸ್ಸದಾಜಪೇತ್ । ತಜ್ಜಪಂ ಸಫಲಂ ಪ್ರೋಕ್ತಂ ವಿನಾ ಸಂಖ್ಯಾಂ ತು ನಿಷ್ಫಲಂ ।'' ಎಂದು ಪ್ರಮಾಣ-ವಿರುವುದರಿಂದ ಕೈಗಳು ಮುಚ್ಚುವುದಲ್ಲದೇ ಸಂಖ್ಯಾಕ್ರಮದಿಂದ ಕೂಡಾ ಜಪಮಾಡತಕ್ಕದ್ದು. ಸಂಖ್ಯಾಕ್ಲುಪ್ತ ಇಲ್ಲದೇ ಮಾಡಿದರೆ ಫಲವಿಲ್ಲ. ಕೆಲವರು ವಸ್ತ್ರಕ್ಕೆ ಬದಲಾಗಿ ಎಡಗೈಯಿಂದ ಮುಚ್ಚುತ್ತಾರೆ.

### ಆಸನದಲ್ಲಿ ಕೂತುಕೊಂಡು ಜಪಮಾಡಬೇಕೆಂದು ಮೇಲೆಹೇಳಿದರೆ ಆಸನವೆಂದರೇನು? ಅದು ಎಷ್ಟುವಿಧ? ಅದರ ವಿವರಗಳು ಹೇಳಿರಿ?

ಆಸನ ಎರಡುವಿಧವಾದದ್ದು. ಒಂದು ತಾನು ತನ್ನ ಕೆಳಗೆ ಹಾಕಿಕೊಂಡು ಕೂಡುವುದು. ಮತ್ತೊಂದು ತನ್ನ ದೇಹವನ್ನು ಒಂದು ವಿಧವಾಗಿ ನಿಯಮನಮಾಡಿಕೊಂಡು ಕೂಡುವುದು.

ಪ್ರಥಮದ್ದು:- ಭಗವದ್ಗೀತಾದಲ್ಲಿ ''ಚೈಲಾಜಿನಕುಶೋತ್ತರಂ'' ಎಂದು ಭಗವದ್ವಾಕ್ಯವಿದೆ. ಆದಕಡೆಯಿಂದ, ಮೊದಲು ಭೂಮಿಮೇಲೆ ದರ್ಭೆಯನ್ನು ಹಾಸಿ ಅದರಮೇಲೆ ವ್ಯಾಘ್ರಚರ್ಮವೋ ಕೃಷ್ಣಾಜಿನವೋ ಹಾಸಿ ಅದರಮೇಲೆ ಕಂಬಳಿ ಮೊದಲಾದ ವಸ್ತ್ರವನ್ನು ಹಾಸುವುದು.

ಎರಡನೆಯದು:- ತನ್ನ ಶರೀರವನ್ನು ಪದ್ಮ, ಸ್ವಸ್ತಿ, ವೀರಭೇದದಿಂದ ಮೂರುವಿಧವಾಗಿ ಮಾಡಬೇಕೆಂದು ಪಂಚರಾತ್ರದಲ್ಲಿ ಹೇಳಿದೆ.

ಪದ್ಮಾಸನವೆಂದರೆ:- 'ಊರ್ವೋರುಪರಿವಿಸನ್ಯಶ್ಯ ಸಮ್ಯಕ್ಪಾದತಳೇಶುಭೇ। ಪದ್ಮಾಸನಮಿತಿ ಪ್ರೋಕ್ತಂ ಯೋಗಿನಾಂ ಹೃದಯಂ ಗಮಂ' ಎಂದು ಪ್ರಮಾಣವಿದೆ. ತೊಡೆಗಳಮೇಲೆ ಪಾದಗಳನ್ನು ಹಾಕಿಕೊಂಡು( ಯೋಗಾಭ್ಯಾಸಕ್ಕೆ) ಜಪಕ್ಕೆ ಕೂಡುವುದು ಪದ್ಮಾಸನವೆಂದು ಹೆಸರು.

ಸ್ವಸ್ತಿಕಾಸನವೆಂದರೆ:- 'ಊರ್ವೋರಧಸ್ತಾತ್ಸಮ್ಯಕ್ಕೃತ್ವಾ ಪಾದತಳೇ ಉಭೇ । ಋಜುಕಾಯೋವಿಶೇದ್ಯೋಗೀ ಸ್ವಸ್ತಿಕಂ ತತ್ಪ್ರಚಕ್ಷತೇ ।' ಎಂದು ಪ್ರಮಾಣವಿದೆ. ಎರಡುಪಾದಗಳು ಎರಡು ತೊಡೆಗಳ ಕೆಳಗೆ ಮಾಡಿಕೊಂಡು ಜಪಕ್ಕೆ ಕೂಡುವುದು ಸ್ವಸ್ತಿಕಾಸನವೆಂದು ಹೆಸರು.

ವೀರಾಸನವೆಂದರೆ:- ಏಕಪಾದಮಧಃ ಕೃತ್ವಾವಿನ್ಯಸ್ಯೋರೌ ತಥೋತ್ತರಂ । ಋಜುಕಾಯೋವಿಶೇದ್ಯೋಗೀ ವೀರಾಸನಮಿತೀರಿತಂ ।' ಎಂದು ಪ್ರಮಾಣವಿದೆ. ಪ್ರತಿತೊಡೆಕೆಳಗೆ ಅದೇ ಪಾದವನ್ನೇ ಇಟ್ಟು( ಬಲತೊಡೆಕೆಳಗೆ ಬಲಪಾದ, ಎಡತೊಡೆಕೆಳಗೆ ಎಡಪಾದ) ದೇಹವನ್ನು ನೆಟ್ಟಗೆ ಎತ್ತಿ ಜಪಕ್ಕೆ ಕೂಡುವುದು ವೀರಾಸನವೆಂದು ಹೆಸರು. ಜಪಾತ್ಪೂರ್ವದಲ್ಲಿ ಆಧಾರರೂಪರಾದ ದೇವತೆಗಳಿಗೆ ಕೆಳಗೆ ಹೇಳುವ ಪ್ರಕಾರ ನಮಸ್ಕಾರ ಕೂಡಾ ಮಾಡಬೇಕು.

1. ಓಂ ಆಧಾರರೂಪಿಣ್ಯೈ ಶಕ್ತ್ಯೈನಮಃ । 2. ಓಂ ಕುಂ ಕೂರ್ಮಾಯನಮಃ । 3. ಓಂ ಮಂ ಮಂಡೂಕಾಯನಮಃ । 4. ಓಂ ಕಂ ಕಾಲಾಗ್ನಿ ರುದ್ರಾಯನಮಃ । 5. ಓಂ ವಂ ವಜ್ರಾಯನಮಃ । 6. ಓಂ ಅಂ ಅನಂತಾಸನಾಯನಮಃ । 7. ಓಂ ವಂ ವರಾಹಾಯನಮಃ । ಓಂ ಪಂ ಪೃಥಿವ್ಯೈ ನಮಃ ॥

### ಸಂಧ್ಯಾ ಒಂದು ಸ್ಥಳದಲ್ಲಿ ಆರಂಭಮಾಡಿ ಮತ್ತೊಂದು ಸ್ಥಳದಲ್ಲಿ ಜಪಾದಿಗಳನ್ನು ಮಾಡಬಹುದಾ?

ಸಂಧ್ಯಾಪ್ರಾರಂಭಮಾಡಿದ ಸ್ಥಳದಲ್ಲೇ ಜಪಾದಿಗಳು ಮಾಡತಕ್ಕದ್ದೆಂದು ಈ ಕೆಳಗೆ ಹೇಳುವ ಪ್ರಮಾಣವಿದೆ.

ಸಂವರ್ತಕ ಶ್ರುತಿಯಲ್ಲಿ; 'ಯತ್ರ ಸಂಧ್ಯಾಂ ಪ್ರಕುರ್ವೀತ ತತ್ರೈವ ಜಪಮಾಚರೇತ್ । ಜಪಮನ್ಯತ್ರಕುರ್ವೀತ ಪುನಸ್ಸಂಧ್ಯಾಂ ಸಮಾಚರೇತ್।'

### ಜಪಮಾಡಲಿಕ್ಕೆ ಉತ್ತಮವಾದ ಆಸನವು ಯಾವುದು?

''ಧರಣ್ಯಾಂ ದುಃಖಸಂಭೂತಿ । ದೌರ್ಭಾಗ್ಯಂ ದಾರುಕಾಸನೇ ॥ ಕೇಶಾಸನೇ ತು ದಾರಿದ್ರ್ಯಂ ಪಲ್ಲವೇ ಚಿತ್ತವಿಭ್ರಮಃ ॥
ತೃಣಾಸನೇ ಯಶೋಹಾನಿಃ । ಪತ್ರಾಸನಮಶೋಭನಂ ॥ ಭಸ್ಮಾಸನೇ ವ್ಯಾಧಿನಾಶಃ । ಪಾಷಾಣೇವ್ಯಾಧಿಸಂಭವಂ ॥

ಪುಷ್ಪಾಸನೇ ದುಃಖನಾಶಂ। ಕಂಬಳೇ ದುಃಖಮೋಚನಂ॥ ಕೃಷ್ಣಾಜಿನೇ ಬ್ರಹ್ಮವೃದ್ಧಿ। ಆಯುಃ ಪ್ರಜ್ಞಾಯಶೋಬಲಂ॥''

ಎಂದು ವಾಕ್ಯವಿರುವುದರಿಂದ ಸಮಸ್ತ ಆಸನಗಳಿಗಿಂತಲೂ ಕೃಷ್ಣಾಜಿನವು ಅತ್ಯುತ್ತಮವು.

**ಶ್ರೀತಿಮ್ಮಣ್ಣಾರ್ಯರು:- ಮಂತ್ರಾರ್ಥ ಚಿಂತನಂ ।** ಮೌನಂ ದಿಶಾಂ ಚಾವಲೋಕನಂ । ಅವ್ಯಗ್ರತ್ವಂ ಚ । ನಿರ್ವೇದಂ ಜಪಸಂಪತ್ತಿ ಹೇತವಃ। ತಿಷ್ಠನ್ ಸ್ಥಿತಸ್ತು ಗಾಯತ್ರೀ ಪ್ರಾತರ್ಮಾಧ್ಯಾನ್ಹಿಕಂ ಜಪೇತ್ । ಆಚಾರ್ಯೈರುಕ್ತಂ॥ ತಿಷ್ಠನ್ ಪ್ರಾತಃ ಸ್ಥಿತಃ ಆಸೀನಃ ಮಧ್ಯಾನ್ಹೇ ಸ್ಥಿತಃ ತಿಷ್ಠನ್ ಸನ್ ಕಾಲದ್ವಯೇ ಜಪೇತ್ । ಆಸೂರ್ಯದರ್ಶನಾತ್ತಿಷ್ಠೇತ್ತತಸ್ತೂಪವಿಶತವೇತಿ॥ ಸಾಯಂ ತು ಉತ್ತರಾಮುಪವಿಶ್ಯೈವೇತಿ। ಉತ್ತರಾಂ ಸಾಯಂ ಸಂಧ್ಯಾಂ ಉಪವಿಶ್ಯೈವ ಜಪೇತ್ । ವಾಗ್ಯತಃ ಸರ್ವದಾ ಜಪೇತ್ । ಮೌನೀ ಜಪೇತ್ । ಬ್ರಹ್ಮಚಾರಿಣೋ ವಿಶೇಷಮಾಹ ॥ ಪ್ರಾತರ್ಮಧ್ಯಾನ್ಹ ಸಮಯೇ ಬ್ರಹ್ಮಚಾರೀಜಪೇತ್ ಕ್ರಮಾತ್ ಪಾದದ್ವಯಂ ಸಮಂಸ್ಥಿತ್ವಾ ಏಕಪಾದೇ ವಿಶೇಷತಃ । ಏಕಪಾದೇಶತಂ ಜಪ್ತಂ ಲಕ್ಷಣಂ ಬ್ರಹ್ಮಚಾರಿಣಃ । ಪದ್ಮಾಸನೇ ಸಮಾಸೀನಃ ಜಪೇದೌಪಾಸನಾದಿಕೇ । ಅಂಗನ್ಯಾಸಂ ಕರನ್ಯಾಸಂ ದೇಹನ್ಯಾಸಂ ವಿನಾ ಜಪೇತ್ । ಅಂಧತ್ವಂ ಬಧಿರತ್ವಂ ಚ ಮೂಕತ್ವಂ ಪ್ರಾಪ್ನುಯಾನ್ನರೋ। ದೇಹನ್ಯಾಸಂ ಮಾತೃಕಾನ್ಯಾಸಂ। ಮನೋಃ ಮಂತ್ರಾದಿತ್ಯರ್ಥಃ। ಅಷ್ಟೋತ್ತರಸಹಸ್ರಂ ವಾ ಅಷ್ಟೋತ್ತರ ಶತಂ ತಥಾ । ಅಷ್ಟಾವಿಂಶತಿಮೇವಾಥ ಗಾಯತ್ರೀ ದಶಕಂ ಜಪೇತ್ । ಆಚಾರ್ಯೈರಪಿ ಉಕ್ತಂ 'ಸಹಸ್ರಂ ಪರಮಾಂ ದೇವೀಂ ಶತಮಧ್ಯಾಂದಶಾವರಾ' ಮಿತಿ । ಉತ್ತಮಂ ವರ್ಣಮಾಲಾಯಾ ಮಧ್ಯಮಾ ಮಾಲಿಕಾಕೃತಂ ಅಧಮಂ ಪರ್ವಣಿಜ್ಞೇಯಂ ಅಸಂಖ್ಯಾತಂ ತು ನಿಷ್ಫಲಂ॥ ಅಕಾರಾದಿ ಕ್ಷಕಾರಾಂತಂ ಕ್ಷಕಾರಾದಿ ವಿಲೋಮತಃ। ಬಿಂದುಯುಕ್ತಾಷ್ಟವರ್ಗಂ ಚ ವರ್ಣಮಾಲಾ ಇತಿ ಸ್ಮೃತಾಃ । ಮಾಲಕೃತಜಪಸ್ಯೋತ್ತಮತ್ವ ವರ್ಣನಮನ್ಯಮಂತ್ರವಿಷಯಂ । ಗಾಯತ್ರೀಜಪಸ್ಯ ಪರ್ವಸ್ವೇವ ಕರ್ತವ್ಯತ್ವೇ ಪ್ರಮಾಣಂ ವಕ್ಷ್ಯಾಮಃ। ಉತ್ತಮಂ ಮಾನಸಂ ಪ್ರೋಕ್ತಂ ಉಪಾಂಶುರ್ಮಧ್ಯಮಂ ಸ್ಮೃತಂ। ಅಧಮಂ ವಾಚಕಂ ಜ್ಞೇಯಂ ಸ್ತೋತ್ರಾದಿಷು ಜಪಾದಿಷು । ಶಾಂತಿಕೇದಾಷ್ಟಿಕೇ ಮೋಕ್ಷೇ ಮಾನಸಂ ಜಪಕರ್ಮಣಿ । ವಶ್ಯಾಕರ್ಷೇ ಉಪಾಂಶುಶ್ಚ ವಾಚಕಃ ಕ್ಷುದ್ರಕರ್ಮಣಿ। ಉಚ್ಚೈರ್ಜಪೋರಿಷ್ಟದಃ ಸ್ಯಾನೀಚೈರ್ದಶಗುಣಃ ಸ್ಮೃತಃ। ಉಪಾಂಶುಃ ಸ್ಯಾಚ್ಛತಗುಣಃ ಸಹಸ್ರೋ ಮಾನಸಃ ಸ್ಮೃತಃ । ಮಾನಸಃ ಸಿದ್ಧಿಕಾಮಾನಾಂ ಪುಷ್ಟಕಾಮ ಉಪಾಂಶುಕಃ । ವಾಚಕೋ ಮಾರಣೇಚೈವ ಪ್ರಶಸ್ತೋ ಜಪ ಈರಿತಃ । ಮಾನಸಂ ಶಬ್ದರಹಿತಂ ವಾಚಕಃ ಶಬ್ದಸಂಯುತಃ। ಯತ್ಕಿಂಚಿಚ್ಛಬ್ದಶ್ಚೋಪಾಂಶುರೀಷದೋಷ್ಟಸ್ಯ ಚಾಲನಂ। ಜಪೋಧ್ಯಾನಸಮಾಯುಕ್ತಃ ಶೀಘ್ರಂ ಸಿದ್ಧ್ಯತಿ ಮಂತ್ರರಾಟ್। ಪ್ರಾಣಾಯಾಮೇ ಜಪೇನ್ಯಾಸಂ ವರ್ಣಂ ವರ್ಣಂ ಪೃಥಕ್ ಪೃಥಕ್। ವೇದಪಾರಾಯಣೇಕಾಲೇ ನ ಭೇದಃ ಶಿಷ್ಟಮುಚ್ಯತೇ ।ವರೇಣ್ಯಂ ವಿರಳಂ ಚೋಕ್ತ್ವಾ ಜಪಕಾಲೇ ವಿಶೇಷತಃ । ಪಾರಾಯಣೇಷುಯುಕ್ತಂ ಸ್ಯಾದನ್ಯಥಾವಿರಳಂ ಭವೇತ್ ।ಪ್ರಾತಃ ಸಂಗವಮಧ್ಯಾನ್ಹೇ ಪ್ರಾಙ್ಮುಖೋ ಜಪಮಾಚರೇತ್। ಆಪರಾಣ್ಹೇ ಚ ಸಾಯಾನ್ಹೇ ಜಪೇತ ಪ್ರತ್ಯಙ್ಮುಖೋ ಬುಧಃ । ಸಾಂಗಂ ಸಮುದ್ರಂ ಸನ್ಯಾಸಂ ಸಋಷಿಛಂದದೈವತಂ । ಶತಮಷ್ಟೋತ್ತರಂ ತಿಷ್ಟನ್ ಜಪೇದಾಭಾಸ್ಕರೋದಯಾತ್ । ಜಪಕಾಲೇ ನ ಭಾಷೇತದ್ದೃಷ್ಟ್ವಾ ಸ್ಪೃಷ್ಟ್ವಾ ಪ್ರಭಾಷಿತಂ। ಸಂಖ್ಯಾಂ ವಿನಾ ಚ ಯಜ್ಜಪ್ಯಂ ತತ್ಸರ್ವಂ ನಿಷ್ಫಲಂ ಭವೇತ್। ಅಪ್ರಭಾಷಿತಂ ಭಾಷಣಾಯೋಗ್ಯಂ ದೃಷ್ಟ್ವಾ ಸ್ಪೃಷ್ಟ್ವಾ ಆಭಾಷ್ಯ ಯದಿ ಜಪ್ಯಂ ಕೃತಂ ಭವೇತ್ತನಿಷ್ಫಲಮಿತ್ಯರ್ಥಃ। ಜಪ ಕಾಲೇ ನ ಭಾಷೇತ ಜಪಹೋಮಾದಿಕೇಷು ಚ। ಏತೇಷ್ವೇವಾವಸಕ್ತಸ್ತು ಯದ್ಯಾಗಚ್ಛೇ ದ್ವಿಜೋತ್ತಮಃ। ಅಭಿವಾದ್ಯತತೋ ವಿಪ್ರಂ ಯೋಗಕ್ಷೇಮಂ ಚ ಕೀರ್ತ್ತಯೇತ್। ಜಪಕಾಲೇ ಗುರುರ್ಯಾತಿ ಯಾತಿರ್ವಾ ಬ್ರಾಹ್ಮಣೋಪಿವಾ। ಯುಕ್ತಪೂಜಾವಿಧಿಂ ಕುರ್ಯಾಜ್ಜಪಶೇಷಂ ಸಮಾಪಯೇತ್ । ಯದಿ ವೈಗುಣ್ಯಲೋಪಸ್ಯಾಜ್ಜಪಾದಿಷು ಕದಾಚನ । ವ್ಯಾಹರೇದ್ವ್ಯಾಹೃತಿ ಮಾಂತ್ರಂ ಸ್ಮರೇದ್ವಾ ವಿಷ್ಣುನಾಮಕಂ। ಮಂತ್ರಮಧ್ಯೇ ಕ್ರಿಯಾಮಧ್ಯೇ ವಿಷ್ಣೋಃ ಸ್ಮರಣ ಪೂರ್ವಕಂ। ಯತ್ಕಿಂಚಿತ್ಕ್ರಿಯತೇ ಕರ್ಮ ತತ್ಕರ್ಮ ಸಫಲಂ ಭವೇತ್। ಯೋ ಜಲೇ ಶುಷ್ಕವಸ್ತ್ರೇಣ ಸ್ಥಳೇ ಚೈವಾದ್ರ್ರವಸ್ತ್ರಕಃ। ಜಪಂ ಹೋಮಂ ತಥಾ ದಾನಂ ತತ್ಸರ್ವಂ ನಿಷ್ಫಲಂ ಭವೇತ್ । ಯದಿ ಜಪಾದಿಕಂ ಕುರ್ಯಾತ್ತತ್ಸರ್ವಂ ನಿಷ್ಫಲಮಿತ್ಯರ್ಥಃ । ''ತ್ರಿಸಂಧ್ಯಾಸು ಜಪೇದ್ದೇವೀಂ ವಿಚ್ಛಿದ್ಯೈವ ಪದತ್ರಯಂ । ಅವಿಚ್ಛಿದ್ಯ ಜಪೇದ್ಯಸ್ತು ರೌರವಂ ನರಕಂವ್ರಜೇತ್ । ಗಾಯತ್ರೀಂ

ಮೌಲ್ಯಮಾದಾಯಪರಸ್ಮೈ ಯಪ್ರಯಚ್ಛತಿ। ಸ ಜೀವನ್ನೇವ ಶೂದ್ರತ್ವಂ ಪ್ರಾಪ್ನೋತ್ಯೇವ ನ ಸಂಶಯಃ॥ '' ಗಾಯತ್ರೀಮೂಲ್ಯಂ ಗಾಯತ್ರೀಜಪಪ್ರಯುಕ್ತಮೂಲ್ಯಫಲಮಾದಾಯ ಸ್ವೀಕೃತ್ಯ ತತ್ಫಲಂ ಪರಸ್ಮೈ ದ್ರವ್ಯಲೋಭೇನ ಪ್ರಯಚ್ಛತಿ ವಿಕ್ರಯಂ ಕರೋತಿ ಸ ಶೂದ್ರತ್ವಂ ಪ್ರಾಪ್ನೋತೀತಿ॥ ತಸ್ಮಾತ್ ಗಾಯತ್ರೀಜಪಫಲ ವಿಕ್ರಯಣಂ ನ ಕರ್ತವ್ಯಂ। ಪ್ರಣವೈಕಾಂ ಗ್ರಹಸ್ಥಸ್ಯ ತಥೈವ ಬ್ರಹ್ಮಚಾರಿಣಃ । ವಾನಪ್ರಸ್ಥಸ್ಯ ಷಡೋಂಕಾರಂ ಸಂಪುಟಂ ಸಂಪುಟಂ ಭವೇತ್ । ಚತುರ್ಥ್ಯಾದಿ ಪ್ರದೋಷೇಷು ಗಾಯತ್ರೀ ದಶಕಂ ಜಪೇತ್ । ಅಷ್ಟಾವಿಂಶತ್ಯನಾಧ್ಯಾಯೇ ಹೀತರೇಷು ಯಥಾವಿಧಿ । ದಶಭಿಃ ಕಾಲಜನಿತಂ ಶತೇನ ತದಹರ್ನಿಶಂ । ಸಾಹಸ್ರೇಣ ಜನ್ಮಕೃತಂ ಗಾಯತ್ರೀ ಹಂತಿ ಕಿಲ್ಬಿಷಂ॥ ಗಾಯತ್ರೀ ನಾಮಪೂರ್ವಾನ್ಹೇ ಸಾವಿತ್ರೀಮಧ್ಯಮೇ ದಿನೇ। ಸರಸ್ವತೀ ಚ ಸಾಯಾನ್ಹೇ ಸಾವೈಸಂಧ್ಯಾ ತ್ರಿಧಾ ಮತಾ॥ ಗಾಯತ್ರೀ ಪ್ರೋಚ್ಯತೇ ತಸ್ಮಾದ್ಗಾಯಂತಂ ತ್ರಾಯತೇ ಯತಃ। ಸವಿತುರ್ದ್ಯೋತನಾಚ್ಚೈವ ಸಾವಿತ್ರೀ ಪರಿಕೀರ್ತಿತಃ । ಜಗತಃ ಪ್ರಸವಿತೃತ್ವಾದ್ವಾವಾಪಾಸ್ಯಾತ್ಸರಸ್ವತೀ । ಗಾಯತ್ರೀ ತು ಭವೇದ್ರಕ್ತಾ ಸಾವಿತ್ರೀ ಶುಕ್ಲವರ್ಣಿಕಾ । ಸರಸ್ವತೀ ತಥಾ ಕೃಷ್ಣಾ ಉಪಾಸ್ಯಾ ವರ್ಣಭೇದತಃ । ಬ್ರಹ್ಮಚಾರೀ ಮಿತಾಹಾರಃ ಸರ್ವಭೂತಾನುಕಂಪನಃ । ಗಾಯತ್ರೀಲಕ್ಷ ಜಪ್ಯೇನ ಸರ್ವಪಾಪೈಃ ಪ್ರಮುಚ್ಯತೇ॥ ಪ್ರಣವಃ ಪುರುಷಶ್ರೇಷ್ಠಃ ಗಾಯತ್ರೀಸುಂದರೀ ಭವೇತ್। ತಯೋಃ ಸಂಗಮವೇಲಾಯಾಂ ವಸ್ತ್ರೇಣಾಚ್ಛಾದನಂ ಭವೇತ್ । ಓಂಕಾರಃ ಪುರುಷೋ ಯಸ್ಮಾನ್ಮಂತ್ರಸ್ಯ ಪ್ರಕೃತಿರ್ಭವೇತ್ । ತಯೋರಪಿ ಚ ಸಂಯೋಗೇ ವಸ್ತ್ರೇಣಾಚ್ಛಾದಯೇತ್ ಬುಧಃ। ಪ್ರಕೃತಿಃ ಶ್ರೀರಿತ್ಯರ್ಥಃ। ಪರ್ವಭಿಸ್ತು ಜಪೇದ್ದೇವೀಂ ನಾಂಗುಲೀನಾಂ ನಿಪಾತನಾತ್। ನಿಪಾತನೇಸ್ತು ಯಜ್ಜಪ್ಯಂ ಸರ್ವಂ ವಿಂದ್ಯಾತ್ತದಾಸುರಂ । ಅನಾಮಿಕಾದಿಮಾರಭ್ಯ ಪ್ರಾದಕ್ಷಿಣ್ಯೇನ ಚ ಕ್ರಮಾತ್ । ಮಧ್ಯಮಾಮೂಲಪರ್ಯಂತಂ ಜಪೇದ್ದಶಸು ಪರ್ವಸು॥ ಪರ್ವಭಿಸ್ತು ಜಪೇದ್ದೇವೀಂ ಗಾಯತ್ರೀಂ ವೇದಮಾತರಂ। ಜಪ್ಯಂ ಕೋಟಿಗುಣಂ ಪುಣ್ಯಂ ತಥೈವಾಕ್ಷರಮಾಲಯಾ। ಅನಾಮಿಕಾಮಧ್ಯಮಾದಿ ತರ್ಜನ್ಯಾದ್ಯವಧಿ ಕ್ರಮಾದಿತಿ ಕುತ್ರಚಿದುಕ್ತಂ । ಶನೈರುಚ್ಚಾರಯೇನ್ಮಂತ್ರಂ ಈಷದೋಷ್ಠೌ ಪ್ರಚಾಲಯೇತ್ । ಕಿಂಚಿಚ್ಛಬ್ದಾನ್ ಸ್ವಯಂ ವಿಂದ್ಯಾದುಪಾಂಶು ಸ ಜಪಃ ಸ್ಮೃತಃ । ಕುಸಾಸನೇ ಸಮಾಸೀನೋ ಗಾಯತ್ರೀ ಜಪಮಾಚರೇತ್ । ಆತಾರಕೋದಯಾತ್ಸಾಯಮರ್ಧಾಸ್ತಮಿತಿ ಭಾಸ್ಕರಾತ್ । ಅರ್ಧಾಸ್ತಮಿತಭಾಸ್ಕರಮಾರಭ್ಯ ಆತಾರಕೋದಯ ಪರ್ಯಂತಂ ಜಪೇತ್ । ಯಥಾನಿಶಾಂತಂ ಗಾಯತ್ರೀಮುಚ್ಚರನ್ ಜಪಮಾಚರೇತ್ । ಸಂಧ್ಯಾ ಸ್ವಭಿನ್ನ-ಪಾದಾಚೇತ್ಸಜಪೋ ನಿಷ್ಫಲೋ ಭವೇತ್ । ಪ್ರಾತರ್ನಾಭಿ ಸಮಂ ಕುರ್ಯಾನ್ಮಧ್ಯಾನ್ಹೇ ಹೃದಯೇನ ಚ । ಸಾಯಾನ್ಹೇ ನಾಸಿಕಾಮೂಲೇ ಗಾಯತ್ರೀಜಪಲಕ್ಷಣಂ । ಕೃತೋತ್ತಾನೌ ಕರೌ ಪ್ರಾತಃ ಸಾಯಂ ಚಾಧೋಮುಖೌ ಕರೌ । ಮಧ್ಯೇ ಪ್ರಸಾರಿತಕರೋ ಜಪ ಏವಮುದಾಹೃತಃ। ಉತ್ತಾನಾದಿಕರೌ ಕೃತ್ವಾ ಜಪ ಇತ್ಯರ್ಥಃ। ಮಧ್ಯೇ ಮಧ್ಯಾನ್ಹೇ। ಸರ್ವ ಸ್ವಂಗುಷ್ಟತೋ ಜಪ್ಯಂ ಕೃತಂ ದಶಫಲಂ ಲಭೇತ್ । ಅಂಗುಲೀ ಸಂಖ್ಯಯಾಜಪ್ಯಂ ಏಕಮೇಕಗುಣಂ ಭವೇತ್ । ರೇಖಯಾಷ್ಟಗುಣಂ ವಿಂದ್ಯಾತ್ಪುತ್ರಜೀವೈರ್ದಶಾದಿಕಂ ಶತಂ ಸ್ಯಾತ್ ಶಂಖಮಣಿಭಿಃ ಪ್ರವಾಳೈಸ್ತು ಸಹಸ್ರಕಂ । ಸ್ಫಟಿಕೈರಯುತಂಪ್ರೋಕ್ತಂ ಮೌಕ್ತಿಕೇರ್ಲಕ್ಷಮುಚ್ಯತೇ ।ರೌಪ್ಯೈಸ್ತು ದಶಲಕ್ಷಂ ತು ಸೌವರ್ಣೈ ಕೋಟಿಮುಚ್ಯತೇ । ಪದ್ಮಾಕ್ಷೈರ್ದಶಕೋಟಿಸ್ತು ಕುಶಾಗ್ರಂಥ್ಯಾಶತೋತ್ತರಂ । ತತಃ ಸಹಸ್ರಂರಕ್ಷೈಃ ತುಲಸ್ಯಾಸ್ಯಾದನುತ್ತರಂ । ತುಲಸ್ಯಾಮಣಿಭಿರಿತಿ ಶೇಷಃ । ಕುಶಬಂಧೈರ್ಜಪೇದ್ವಿಪ್ರಃ ಸುವರ್ಣ ಮಣಿಭಿಃರ್ನೃಪಃ। ಪುತ್ರಜೀವಫಲೈರ್ವೈಶ್ಯಃ ಪದ್ಮಾಕ್ಷೈಸರ್ವ ಏವ ಚ। ಸರ್ವೇ ವಿಪ್ರಾದ್ಯಾಃ ಜಪಂ ಕುರ್ಯುರಿತ್ಯರ್ಥಃ । ಕುರ್ಯಾದಕ್ಷಹಿರಣ್ಯಯೇನ ಸಕಲಾನ್ ಕಾಮಾನ್ಪ್ರವಾಳೈರ್ಧನಂ ಪದ್ಮಾಕ್ಷೈರಹಿತಕ್ಷಯಂ ಕುಶಮಯ್ಯೈಃ ಪಾಪಕ್ಷಯಂ ಗ್ರಂಥಿಭಿಃ । ಪುತ್ರಂ ಜೀವಫಲೈಃ ಪ್ರಜಾಃ ಸುಯಶಸಃ ಶಂಖೈಃಶ್ರಿಯಂ ಮೌಕ್ತಿಕೈಸೌಭಾಗ್ಯಂ ಸ್ಫಟಿಕೈಶ್ಚಮುಕ್ತಿಮಖಿಲಂ ಶ್ರೀಮತ್ತುಲಸ್ಯಾಲಭೇದಿತ್ಯಾದಿ ಜಪವಿಷಯಪ್ರಮಾಣಾನಿ ಬಹೂನಿ ಸಂತಿ। ವಿಸ್ತರಭಯಾದುಪರಮ್ಯತೇ।

**ಅಥ ಜಪಾಂಗ ಪ್ರಾಣಾಯಾಮಃ।** ಉತ್ತಮಂ ನವಧಾ ಪ್ರೋಕ್ತಂ ಮಧ್ಯಮಂ ಋತುಸಂಖ್ಯಯಾ। ಅಧಮಂ ತ್ರಯಮಿತ್ಯಾಹುಃ ಪ್ರಾಣಾಯಾಮಂ ವಿಚಕ್ಷಣಾಃ। ಗಾಯತ್ರೀಂ ಶಿರಸಾ ಸಾರ್ಧಂ ಜಪೇದ್ವ್ಯಾಹೃತಿಪೂರ್ವಕಂ। ಪ್ರತಿಪ್ರಣವ ಸಂಯುಕ್ತಂ ತ್ರಿತಯಂ ಪ್ರಾಣಸಂಯಮಃ। ಭೂರ್ಭುವಸ್ವರ್ಮಹರ್ಜನಸ್ತಪಃಸತ್ಯಂ ತಥೈವ ಚ। ಪ್ರತ್ಯೋಂಕಾರಸಮಾಯುಕ್ತಃ ತಥಾ ತತ್ಸವಿತುಃ ಪರಂ।

ಓಮಾಪೋಜ್ಯೋತೀರಿತ್ಯತಚ್ಛಿರಃ ಪಶ್ಚಾತ್ತು ಯೋಜಯೇತ್ । ತ್ರಿರಾವರ್ತನ ಯೋಗಾತ್ಸಪ್ರಾಣಾಯಾಮ ಇತಿ ಶಕ್ಯತೇ । ಏವಂ ಪ್ರಾಣಾಯಾಮಂ ಕೃತ್ವಾ ಅಂಗನ್ಯಾಸ ಧ್ಯಾನಾನಿ ವಿಧಾಯ ಗಾಯತ್ರೀಜಪಂ ಕುರ್ಯಾತ್ । ಸಹಸ್ರಪರಮೇತ್ಯಾದಿ ಸಂಖ್ಯಯಾ । **ಗಾಯತ್ರ್ಯಾಮೂರ್ತಿವಿಶೇಷಾಃ ಅಸಂಖ್ಯೇಯಾಃ** । ತಥಾಪಿ ಸ್ವಗುರ್ವನುಗ್ರಹ ಲಬ್ಧಬುಧ್ಯನುಸಾರೇಣ ಕತಿಚಿತ್ ಕಥ್ಯಂತೇ ॥ ಗಾಯತ್ರ್ಯಾಂ ಸಂಸ್ಥಿತಾ ಇತ್ಯುಕ್ತ ಸಂಕರ್ಷಣಮೂರ್ತಯಃ ವ್ಯಾಹೃತ್ಯರ್ಥಾತು ಗಾಯತ್ರೀತ್ಯುಕ್ತ್ವಾ ತದ್ವ್ಯಾಖ್ಯಾನತ್ವೇನ ವ್ಯಾಖ್ಯಾನವ್ಯಾಖೇಯಯೋರೇಕಾರ್ಥತ್ವೇನ ಪ್ರಣವಾದ್ಯಪ್ರತಿಪಾದ್ಯ ವಿಶ್ವಾದಯಃ ಭೂರಾದಿ ಪ್ರತಿಪಾದ್ಯನಿರುದ್ಧಾದಯಃ ನಾರಾಯಣಾಷ್ಟಾಕ್ಷರಾಚ್ಚ ವ್ಯಾಹೃತಿ ತ್ರಿಗುಣಾತ್ಸ್ವನಃ । ವೇದಮಾತಾತು ಗಾಯತ್ರೀ ದ್ವಿಗುಣಾದ್ವಾದಶಾಕ್ಷರಾದಿತ್ಯುಕ್ತ್ಯಾ ನಾರಾಯಣಾದಯಃ ಮಾತೃಕಾಭಿವ್ಯಕ್ತತ್ವಾ ಚ್ಚತೇಷಾಮಪಿ ಗಾಯತ್ರ್ಯರ್ಥತಾ ಪುರುಷ ಸೂಕ್ತಸ್ಯ ಪುರುಷೋಪಿ ಸರ್ವವೇದಾನಾಂ ಗಾಯತ್ರ್ಯರ್ಥತ್ವೇನ ಸರ್ವವೇದವೇದ್ಯಪಿ ಪೂರ್ವೋತ್ತರ ವರ್ಣಸಂಧಿ ಸಂಧಾನಭೇದೇನಾನಿರುದ್ಧಾದಯಃ ಅಕ್ಷರಪ್ರತಿಪಾದ್ಯಾಃ ಕೇಶವಾದ್ಯಾಃ ಚತುರ್ವಿಂಶತಿಮೂರ್ತಯಃ ಸವಿತೃಮಂಡಲಮಧ್ಯವರ್ತೀ ನಾರಾಯಣಃ ತಸ್ಮಿನ್ ಸ್ಥಿತಾಃ ಬೃಹತೀಸಹಸ್ರಸ್ವರವರ್ಣ-ವಾಚ್ಯಾಃ ದ್ವಾಸಪ್ತತಿ ಸಹಸ್ರಮೂರ್ತಯಃ । ಏವಮನ್ಯೇಪಿ ಬಹವೋ ವಿದ್ಯಂತೇ । ತೇ ಸರ್ವೇ ಸ್ವಸ್ಯಯೋಗ್ಯತಾನುಸಾರೇಣಾನು-ಸ್ಮರ್ತವ್ಯಾಃ । ಸವಿತೃನಾಮಾಕಗಾಯತ್ರೀಸಂಧ್ಯಾಪರನಾಮಕಂ ಶ್ರೀನಾರಾಯಣಂ ಧ್ಯಾಯನ್ ಯಥಾ ಶಕ್ತಿ ಗಾಯತ್ರೀ ಜಪಂ ಕೃತ್ವಾ **ತತ್ರಿಗುಣ ನಾರಾಯಣಾಷ್ಟಾಕ್ಷರ ಜಪಂ** ಕುರ್ಯಾತ್ । ತದುಕ್ತಂ ॥ ಗಾಯತ್ರ್ಯಾತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್ । ಏವಂ ಜಪಂ ವಿಧಾಯ ತತಃ ಆಸನಾದುತ್ಥಾಯ ತದಾಸನಂ ವಾಮಕರೇಣೋತ್ಥಾಪ್ಯ ತತ್ರಲೋಕತ್ರಯವಿಲೋಮೇನ ಸ್ವಃ ಭುವಃ ಭೂರಿತಿ ಮಂತ್ರೇಣ ವಾರಿಣಾಪ್ರೋಕ್ಷ್ಯ ತದ್ರೇಣುಂ ತಿಲಕಂ ಕುರ್ಯಾತ್ । **ಜಪಸ್ಥಳಪ್ರೋಕ್ಷಣ ಮತ್ತು ತಿಲಕಧಾರಣ** ತದುಕ್ತಂ ॥ ''ಜಪಾಂತೇ ಚಾಸನಂ ಗ್ರಾಹ್ಯಂ ಪ್ರೋಕ್ಷಯೇತ್ತತ್ರವಾರಿಣಾ ॥ ಲೋಕತ್ರಯಂ ವಿಲೋಮೇನ ಧಾರಯೇ ತತ್ರ ರೇಣುಭಿಃ । ತಿಲಕಮಿತಿ ಶೇಷಃ ॥ ಯತ್ರ ಭೂಮೌ ಜಪಂ ಕುರ್ಯಾತತ್ರ ಸಂಪ್ರೋಕ್ಷ್ಯ ವಾರಿಣಾ । ತದ್ರೇಣುಂ ತಿಲಕಂ ಕುರ್ಯಾದನಂತಂ ಚ ಫಲಂ ಲಭೇತ್' ॥ ಧೀಯತೇ ಧತ್ತೇ ॥

**ಸಂಧ್ಯೋಪಸ್ಥಾನ ಮಂತ್ರಗಳು :-**

ಓಂ ಜಾತವೇದಸ ಇತ್ಯಸ್ಯ ಮಂತ್ರಸ್ಯ ಕಶ್ಯಪಋಷಿಃ । ದುರ್ಗಾಜಾತವೇದಾಗ್ನಿರ್ದೇವತಾ । ತ್ರಿಷ್ಟುಪ್ ಛಂದಃ । ಸಂಧ್ಯೋಪಸ್ಥಾನೇ ವಿನಿಯೋಗಃ ।

(ಶ್ರೀಮಧ್ವಾಂತರ್ಯಾಮಿನ್) **ಹರಿಃ ಓಂ । ಜಾತವೇದಸೇ ಸುನವಾಮ ಸೋಮಮರಾತೀಯತೋ ನಿದಹಾತಿ ವೇದಃ । ಸ ನಃ ಪರ್ಷದತಿ ದುರ್ಗಾಣಿ ವಿಶ್ವಾ ನಾವೇವ ಸಿಂಧುಂ ದುರಿತಾತ್ಯಗ್ನಿಃ ॥** (ಋ॥ ಮಂ 1-99-1)

***ಮಂತ್ರಾರ್ಥ:-*** ಇದಕ್ಕೆ ಉಪಸ್ಥಾನಮಂತ್ರವೆಂದು ಹೆಸರು. 'ಪ್ರಾತರತ್ಥಾನಹಸ್ತಾಭ್ಯಾಂ । ಸಾಯಂ ಸಮ್ಮುಖಹಸ್ತತಃ । ಮಧ್ಯಾನ್ಹೇತು ಊರ್ಧ್ವ-ಬಾಹುಭ್ಯಾಂ । ಉಪತಿಷ್ಠೇದ್ದಿವಾಕರಂ ।'' ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಪ್ರಮಾಣವಿರುವುದರಿಂದ, ಪ್ರಾತಸ್ಸಂಧ್ಯಾದಲ್ಲಿ ಅಂಗೈಗಳನ್ನು ತೋರಿಸುತ್ತಾ, ಸಾಯಂಕಾಲಕೈಗಳನ್ನು ಜೋಡಿಸಿ, ಮಧ್ಯಾಹ್ನದಲ್ಲಿ ಭುಜಗಳನ್ನು ಎತ್ತಿ ಉಪಸ್ಥಾನವನ್ನು (ಸ್ತೋತ್ರವನ್ನು) ಮಾಡಬೇಕು.

ಜಾತವೇದಸೇ= ಜ್ಞಾನಕಾರಣನಾದ (ಅಗ್ನಿ ಅಂತರ್ಗತ ಅಗ್ನಿನಿಯಾಮಕನಾದ) ಜಾತಂ ಸರ್ವಂ ವೇತ್ತೀತಿ ಜಾತವೇದಸಃ (ಜಾತಾವೇದಾಃ ಯಸ್ಮಾದಿತಿ ವಾ) ಎಂಬುವ ವಿಗ್ರಹದ್ವಾರಾ ಪರಮಾತ್ಮನದೆಶೆಯಿಂದ; ಸೋಮಂ=ಸೋಮಲತಾವನ್ನು; (ನಾವು) ಸುನವಾಮ= ಭಗವದ್ವಿಷಯಕ ವಾಗಿ) ಹಿಂಡೋಣ ; ವೇದಃ=(ಜ್ಞಾನಿಯಾದ)(ಅಗ್ನ್ಯಂತರ್ಗತ) ಅಗ್ನಿಶಬ್ದವಾಚ್ಯನಾದ ಪರಮಾತ್ಮನು ! ಅರಾತೀಯತಃ=(ನಮ್ಮಗಳಲ್ಲಿ) ಶತೃತ್ವವನ್ನು ಇಚ್ಛಿಸುವಪುರುಷರನ್ನು; ಸಃ= ಆ ಅಗ್ನಿ; ನಃ=ನಮ್ಮಗಳ, ವಿಶ್ವಾ=ಸಮಸ್ತವಾದ; ದುರ್ಗಾಣಿ= ವಿಪತ್ತುಗಳನ್ನು (ಕಷ್ಟಗಳನ್ನು); ಸಿಂಧುಂ= ಸಮುದ್ರವನ್ನು; ನಾವ ಇವ= ಹಡಗಿನೋಪಾದಿಯಲಿ; ಅತಿಪರ್ಷತ್= ವಿಶೇಷಾಕಾರವಾಗಿ ದಾಟಿಸಲಿ.

**ಶ್ರೀತಿಮ್ಮಣ್ಣಾರ್ಯರು:-ತತಃ ಉಪಸ್ಥಾನಂ॥** ಜಪಂ ಕೃತ್ವಾ ವಿಧಾನೇನ ಸಂಧ್ಯೋಪಾಸ್ಥಾನಮಾಚರೇತ್ । ಉಪಸ್ಥಾನಂ ಸ್ವಕೈರ್ಮಂತ್ರೈರಾದಿತ್ಯಸ್ಯ ತು ಕಾರಯೇತ್ ॥ ಸ್ವಕೈಃ ಸ್ವಶಾಖಾಗತೈಃ ಮಂತ್ರೈಃ । ಋಗ್ವೇದಿನಾಂ ಜಾತವೇದಸ ಇತಿ ॥

ಯಜುರ್ವೇದಿನಾಂ ಮಿತ್ರಸ್ಯೇತಿ। ಜಾತವೇದಸ ಇತ್ಯಸ್ಯ ಮಂತ್ರಸ್ಯ ಕಶ್ಯಪಋಷಿಃ ಜಾತವೇದಾಗ್ನಿರ್ದೇವತಾ। ತ್ರಿಷ್ಟುಪ್ ಛಂದಃ॥ ಸಂಧ್ಯೋಪಸ್ಥಾನೇ ವಿನಿಯೋಗಃ॥ ಜಾತಂ ಸರ್ವಂ ವೇತ್ತೀತಿ ಜಾತವೇದಾಃ ಸರ್ವಜ್ಞಃ । ಅಗ್ರ್ಯತ್ವಾದಗ್ನಿಃ ಜಾತವೇದಾಶ್ಚಾಸೌ ಅಗ್ನಿಶ್ಚ ಜಾತವೇದಾಗ್ನಿಃ । ಸಮ್ಯಕ್‌ಸಜ್ಜನಾನಾಂ ಧ್ಯಾನವಿಷಯತ್ವೇನ ಸಂಧ್ಯಾನಾಮಕಃ ಶ್ರೀಸವಿತೃನಾಮಕಃ ನಾರಾಯಣಃ । (ಜಾತವೇದಸೇ ಸುನವಾಮ ಸೋಮಮರಾತೀಯತೋ ನಿದಹಾತಿ ವೇದಃ। ಸನಃ ಪರ್ಷದತಿ ದುರ್ಗಾಣಿವಿಶ್ವಾ ನಾವೇವಸಿಂಧುಂ ದುರಿತಾತ್ಯಗ್ನಿಃ ॥) ಜಾತಂ ವೇತ್ತೀತಿ ಜಾತವೇದಾಃ ಜಾತಮಿತ್ಯುಪಲಕ್ಷಣಂ । ಅತೀತಾನಾಗತವರ್ತಮಾನವೇತ್ತಾ ಸರ್ವಜ್ಞ ಇತಿ ಯಾವತ್। ಜಾತಂ ಜಾಯಮಾನಂ ಜನಿಷ್ಯಮಾಣಂ ಚ ಜಾತವೇದಸೇ ಸರ್ವಜ್ಞಾಯ ಶ್ರೀನಾರಾಯಣಾಯ ತದರ್ಥಂ ವಯಂ ಸೋಮಂ ಸೋಮಲತಾಂ ಸುನುವಾಮ ಕಲ್ಪಯಾಮಃ ಶ್ರೀನಾರಾಯಣಪ್ರೀತ್ಯರ್ಥಂ ಸೋಮಲತಾ ಭಿಷವಣಂ ಕುರ್ಮ ಇತಿ ಭಾವಃ ।ಅಧ್ಯಾತ್ಮಂ ತು ಸೋಮಂ ಸೋಮಭಿಮನ್ಯಮಾನಂ ಸೋಮಂ ಜನನಾಶ್ರಯಂ ಮನಃ ಸುನುವಾಮ ತದ್ವಿಷಯ ಶ್ರವಣಾದಿ ಪ್ರವಣಂ ಕುರ್ಮಃ। ಯ ವೇತ್ತೀತಿ ವೇದಃ ಅಗ್ನಿಃ ಅಗ್ನಿನಾಮಕ ಶ್ರೀನಾರಾಯಣಃ। ಅರಾತೀಯತಃ ಶತ್ರುತ್ವಕುರ್ವತಾಂ ಕಾಮಾದೀನ್ ಬಾಹ್ಯಾಂಶ್ಚ ಶತ್ರೂನ್ ದಹತಿ ಭಸ್ಮೀಕರೋತಿ ಸಃ ಅಗ್ನಿನಾಮಕಃ ನಃ ಅಸ್ಮಾಕಂ ಅಧಿಕಾನಿ ದುರ್ಗಾಣಿ ಗಂತುಮಶಕ್ಯಾನಿ ತರ್ತುಮಶಕ್ಯಾನೀತಿ ಯಾವತ್। ವಿಶ್ವಾ ವಿಶ್ವಾನಿ ದುರಿತಾ ದುರಿತಾನಿ ನಾವಾ ತಯಾ ಸಿಂಧುಮಿವಾತಿಪರ್ಷತು ಪಾರಂ ಗಮಯತು ತಾರಯತು ಸಕಲ ದುರಿತನಿವೃತ್ತಿಂ ಕರೋತ್ವಿತಿ ಯಾವತ್।

ಓಂ ತಚ್ಛಂಯೋರಿತ್ಯಸ್ಯ ಮಂತ್ರಸ್ಯ ಶಂಯುಃ ಋಷಿಃ । ವಿಶ್ವೇದೇವಾ ದೇವತಾ । ಶಕ್ವರೀಛಂದಃ । ಶಾಂತ್ಯರ್ಥೇ ಜಪೇ ವಿನಿಯೋಗಃ॥

(ಶ್ರೀಮಧ್ವಾಂತರ್ಯಾಮಿನ್।) **ಹರಿಃ ಓಂ ॥ ತಚ್ಛಂಯೋರಾವೃಣೀಮಹೇ ಗಾತುಂ ಯಜ್ಞಾಯ ಗಾತುಂ ಯಜ್ಞಪತಯೇ । ದೈವೀಃ ಸ್ವಸ್ತಿರಸ್ತುನಃ । ಸ್ವಸ್ತಿರ್ಮಾನುಷೇಭ್ಯಃ । ಊರ್ಧ್ವಂ ಜಿಗಾತು ಭೇಷಜಂ । ಶನ್ನೋ ಅಸ್ತು ದ್ವಿಪದೇ ಶಂ ಚತುಷ್ಪದೇ ॥**

***ಮಂತ್ರಾರ್ಥ:*** *ಈ ಮಂತ್ರವನ್ನು ತನಗೆ ಕ್ಷೇಮಾರ್ಥವಾಗಿ (ಶಾಂತಿಗಾಗಿ ) ಪಠಿಸತಕ್ಕದ್ದು.*

ಶಂ=ಪ್ರಾಪ್ತವಾದರೋಗಗಳ ನಿವಾರಕವಾದ ; ಯೋಃ=ಇನ್ನುಮೇಲೆ ಬರತಕ್ಕ ರೋಗಗಳ ನಿವಾರಕವಾದ(ಸುಖಪ್ರಾಪ್ತ್ಯರ್ಥವಾಗಿ) ; ತತ್=ಅದನ್ನು(ಅರುಣಕೇತಕ ಎಂಬುವ ಕರ್ಮವನ್ನು) ; ಆವೃಣೀಮಹೇ=ವಿಶೇಷಾಕಾರವಾಗಿ ಪ್ರಾರ್ಥಿಸುತ್ತೇವೆ(ಸಮೀಚೀನವಾಗಿ ಶರಣು ಹೊಂದುತ್ತೇವೆ); ಯಜ್ಞಾಯ=ಯಜ್ಞಾದಿ ಸಕಲಕರ್ಮಾನುಷ್ಠಾನಸಂಕಲ್ಪಕ್ಕೋಸ್ಕರ; ಗಾತುಂ=ಗತಿಯನ್ನು(ಪಾರ್ಥಿಸುತ್ತೇವೆ); ಯಜ್ಞಪತಯೇ= ಯಜ್ಞದ ಯಜಮಾನನಿಗೆ; ಗಾತುಂ=ಹೊಂದತಕ್ಕ ಫಲಪ್ರಾಪ್ತಿಯನ್ನು ಕುರಿತು ಪ್ರಾರ್ಥಿಸುತ್ತೇವೆ.) ದೈವೀ=ದೇವಶಬ್ದವಾಚ್ಯವಾದ; ಸ್ವಸ್ತಿ= ಕ್ಷೇಮವೇ; ನಃ=ನಮ್ಮಗಳಿಗೆ; ಅಸ್ತು= ಆಗಲಿ ; ಮಾನುಷೇಭ್ಯಃ= ಭಗವದ್ಭಕ್ತಿ(ಜ್ಞಾನ) ಉಳ್ಳ ನಮ್ಮ ಸಂತತಿಯವರಿಗೆ ; ಸ್ವಸ್ತಿಃ=(ಅಂಥಾ)ಕ್ಷೇಮವು ಆಗಲಿ; ಊರ್ಧ್ವಂ=ಅತ್ಯುತ್ತಮವಾದ; ಭೇಷಜಂ=(ಸಂಸಾರಸಂಬಂಧಿಯಾದ) ಸರ್ವಾರಿಷ್ಟ ನಿವಾರಕವಾದ ಔಷಧವು; ಜಿಗಾತು=ಗಾಯತ್ರೀ ಪ್ರತಿಪಾದ್ಯನಾದ ಬ್ರಹ್ಮ(ನಮ್ಮಗಳನ್ನು) ಹೊಂದಲಿ (ಜಯಿಸಲಿ); ನಃ=ನಮ್ಮಗಳ; ದ್ವಿಪದೇ=ಮನುಷ್ಯರಿಗಾಗಿ ; ಶಂ=ಸುಖವು; ಅಸ್ತು=ಆಗಲಿ; ಚತುಷ್ಪದೇ=ಪಶುಗಳಿಗೆ; ಶಂ=ಸುಖವು (ಆಗಲಿ).

**ಶ್ರೀತಿಮ್ಮಣ್ಣಾರ್ಯರು:-** ವಯಂ ತತ್ ತಂ ವ್ಯಾಪ್ತಂ ಬ್ರಹ್ಮ। ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಸ್ಮೃತ ಇತಿ ಗೀತೋಕ್ತೇಃ। ಆವೃಣೀಮಹೇ ವರಯಾಮಃ। ತದ್ಭಕ್ತ್ಯಾದಿ ವರಣಂ ಕುರ್ಮಃ। ಶಂಯೋಃ ಸುಖಾರ್ಥಂ ಸುಖೇನೇತಿ ವಚನ ವ್ಯತ್ಯಯಃ। ಛಾಂದಸಃ । ಯಜ್ಞಾಯ ಯಜ್ಞಸಿದ್ಧ್ಯರ್ಥಂ ಗಾತುಂ ಹೋತೃಮಂತ್ರಾನ್ ಪಠಿತುಂ ಯಜ್ಞಾಯ ಯಜ್ಞನಾಮಕ ಶ್ರೀವಿಷ್ಣು ಪ್ರೀತ್ಯರ್ಥಮಿತಿ ವಾ ॥ ಯಜ್ಞಪತಯೇ ಯಜ್ಞಸ್ವಾಮಿ ದೇವತಾನುರೂಪಾಯ ಗಾತುಂ ವಿಷ್ಣುರ್ಯಜ್ಞಪತಿಃ ಸಾಕ್ಷಾದಿತ್ಯುಕ್ತೇಃ। ಯಜ್ಞಪತಯೇ ಶ್ರೀನಾರಾಯಣಾಯ ತತ್ಪ್ರೀತ್ಯರ್ಥ ಸಾಮಗಾನಾದಿ ಕರ್ತುಮಿತಿ ವಾ ॥ ಯಜ್ಞೋ ವಿಷ್ಣುರ್ದೇವತೇತಿ ಶ್ರುತೇಃ॥ ಯಜ್ಞಪತಿರ್ಯಸ್ಯೇತಿ ವಾ । ಯಜ್ಞಪತಿರ್ದೇವತಾ ಸಮೂಹಃ। ತದುದ್ದೇಶೇನ ಕ್ರಿಯಮಾಣ ಯಜ್ಞಾಯ ಯಜ್ಞಸಿದ್ಧ್ಯರ್ಥಂ

ಗಾತುಂ ಹೌತ್ರಾನ್ಮಂತ್ರಾನ್ ಪಠಿತುಂ ಗಾತುಂ ಗಾಯನಂ ಕರ್ತುಮಿತಿ ವಾ ॥ ದೈವೀಃ ಹೇ ದೇವ್ಯಃ ದೇವತಾಃ ನಃ ಸ್ವಸ್ತಿ ಕ್ಷೇಮಮಸ್ತುಃ । ವಿಭಕ್ತಿ ವ್ಯತ್ಯಯೇನ ದೈವೀಃ ದೈವೀಭ್ಯಃ ಸ್ವಸ್ತಿನಃ ಅಸ್ತ್ವಿತಿ ವಾ ॥ ದೈವೀಃ ಕ್ರಿಯಮಾಣಂ ಸ್ವಸ್ತೀತಿ ವಾ । ಮಾನುಷೇಭ್ಯೋ ನಃ ಸ್ವಸ್ತಿರಸ್ತು । ಭೇಷಜಂ ಸಂಸಾರೌಷಧಂ ಊರ್ಧ್ವಂ ಉಚ್ಚಂ । ಊರ್ಧ್ವ ಪವಿತ್ರ ಇತ್ಯಾದೌ ಅತ್ಯುಚ್ಚೇನೈವ ಹರಿಣೇತ್ಯಾದಿ ತದ್ಭಾಷ್ಯೋಕ್ತೇಃ । ಅತ್ಯುಚ್ಚಂ ಏತಾದೃಶಂ ಬ್ರಹ್ಮ ಸ್ವಯಮೇವ ಅಸ್ಮದಾದಿಷು ಹೋತೃಷು ಸ್ಥಿತ್ವಾ ಜಿಗಾತು ಗಾಯನಂ ಕರೋತು । ಭೇಷಜಂ ಸಂಸಾರೌಷಧಂ ಊರ್ಧ್ವಂ ಪುರುಷಾರ್ಥೋಽಚ್ಚಂ ಮೋಕ್ಷಮುದ್ದಿಶ್ಯ ಜಿಗಾತು । ವ್ಯತ್ಯಯೇನ ಗಾಯಿಷ್ಯೇ ಗಾನಂ ಕರೋಮೀತ್ಯರ್ಥಃ ॥ ಅಸ್ಮದೀಯ ಯಜ್ಞಾರ್ಥಂ ಆಗತವ್ಯಮಿತ್ಯಾಹ್ವಾನೇನ ದೇವತಾ ಹೇಲನಂ ಸ್ಯಾತ್ತೇನಾರಿಷ್ಟಂ ಸ್ಯಾತ್ತನ್ನಸ್ಯಾದಿತಿ ಪ್ರಾರ್ಥಯತೇ ॥ ಶಮಿತಿ ॥ ನಃ ದ್ವಿಪದೇ ದ್ವಿಪಾದಮನುಷ್ಯ ಜನಾಯ ಸ್ವಸ್ವದಾರಾಪತ್ಯಬಂಧುಭೃತ್ಯಾದಿ ಜನಾಯ ಚತುಷ್ಪದೇ ಸ್ವಾರ್ಜಿತ ಗೋಮಹಿಷ್ಯಶ್ವಾದಿ ಪಶುವರ್ಗಾಯ ಶಮಸ್ತು॥ಪ್ರತ್ಯೇಕಮನ್ವಯಃ।

ಓಂ ನಮೋಬ್ರಹ್ಮಣ ಇತ್ಯಸ್ಯ ಮಂತ್ರಸ್ಯ ವಾಮದೇವಋಷಿಃ । ಲಿಂಗೋಕ್ತದೇವತಾ । ತ್ರಿಷ್ಟುಪ್ ಛಂದಃ । ಸಂಧ್ಯೋಪಸ್ಥಾನೇ ವಿನಿಯೋಗಃ ॥

(ಶ್ರೀಮಧ್ವಾಂತರ್ಯಾಮಿನ್)**ಹರಿಃ ಓಂ ॥ ನಮೋ ಬ್ರಹ್ಮಣೇ ನಮೋ ಅಸ್ತ್ವಗ್ನಯೇ ನಮಃ ಪೃಥಿವ್ಯೈ ನಮಃ ಓಷಧೀಭ್ಯಃ । ನಮೋ ವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಮಹತೇ ಕರೋಮಿ ॥**ಹರಿಃ ಓಂ ॥

***ಮಂತ್ರಾರ್ಥ:-*** ಬ್ರಹ್ಮಣೇ=ಓಂಕಾರನಾಮಕನಾದ; ಅಗ್ನಯೇ=ಅಗ್ನಿಶಬ್ದವಾಚ್ಯನಾದ; ಪೃಥಿವ್ಯೈ=ಪೃಥಿವೀನಿಯಾಮಕನಾದ; ಓಷಧೀಭ್ಯಃ= ಓಷಧೀನಿಯಾಮಕನಾದ; ವಾಚೇ=ಸರಸ್ವತೀನಿಯಾಮಕನಾದ; ವಾಚಸ್ಪತಯೇ=ಚತುರ್ಮುಖಬ್ರಹ್ಮನ ನಿಯಾಮಕನಾದ; ವಿಷ್ಣವೇ=ವ್ಯಾಪ್ತನಾದ ಬೃಹತೇ=ಗುಣಪೂರ್ಣನಾದ ಪರಮಾತ್ಮನಿಗೆ; ನಮೋನಮಃ=ಅನಂತಾನಂತ ನಮಸ್ಕಾರಗಳು; ಕರೋಮಿ=ಮಾಡುತ್ತೇನೆ.; (ನನ್ನ) ನಮಃ= ನಮಸ್ಕಾರಗಳು; (ಆ ಪರಮಾತ್ಮನಲ್ಲಿ) ಅಸ್ತು=ಇರಲಿ(ಸೇರಲಿ).

**ಶ್ರೀತಿಮ್ಮಣ್ಣಾರ್ಯರು:-**ತವ ಗಾನಶಕ್ತಿದಾನೇನ ದೇವಾನಾಂ ಕಃ ಉಪಕಾರ ಇತ್ಯತಃ ಅಶಕ್ತೋಽಹಂ ನಮನಂ ಕರೋಮೀತಿ ಭಾವೇನ ನಮತಿ ॥

ಪೂರ್ವಾರ್ಧೇ ನಮೋಸ್ತು ಉತ್ತರಾರ್ಧೇ ನಮಃ ಕರೋಮೀತಿ ಸಂಬಂಧಃ । ಬ್ರಹ್ಮಣೇ ಗುಣಪೂರ್ಣಾಯ ಅಗ್ನಯೇ ಅಗ್ರ್ಯತ್ವಾದಿ ಗುಣಾಯ ಪೃಥಿವ್ಯೈ ಪೃಥುಗುಣಾಯ ಔಷಧೀಭ್ಯಃ ಔಷಾಣಂ ಸಂಸಾರತಪ್ತಾಃ ಧೀಯಂತೇ ಅತ್ರೇತಿ ಔಷಧೀ ನಾಮಕಾಯ । ಬಹುರೂಪತ್ವಾದ್ಬಹುವಚನಂ । ವಾಚೇ ವಕ್ತೃಗುಣಾಯ ವಾಚಸ್ಪತಯೇ ಸರ್ವದಾ ವಾಕ್ ಸ್ವಾಮಿನೇ ಮಹತೇ ಮಹಾತ್ಮನೇ ವಿಷ್ಣವೇ ವಿಶೇಷೇಣ ಬಲಚೇಷ್ಟಕಾಯ ತತ್ತದ್ಗುಣದಾತೃತ್ವೇನ ತೇಷು ಸ್ಥಿತಾಯ ನಮ ಇತಿ ಪ್ರತ್ಯೇಕಂ ಸಂಬಂಧಃ ॥ ಅಗ್ನಿರ್ವೈದೇವಾನಾಮವಮೋವಿಷ್ಣುಃ ಪರಮಃ ತದಂತರಾಹಿ ಸರ್ವಾದೇವತಾ ಇತಿ ಬ್ರಾಹ್ಮಣೋಕ್ತಾನುಸಾರೇಣ ಬ್ರಹ್ಮಣೇ ವಿಷ್ಣವೇ ನಮನಂ ವಿಧಾಯಾಗ್ನಯೇ ಚ ನಮನಂ ವಿಧಾಯ ತದಂತರಾವರ್ತಿ ದೇವಾನ್ನಮತಿ ॥ ಪೃಥಿವ್ಯೈ ಶ್ರೀಲಕ್ಷ್ಮ್ಯೈ ಓಷಧೀಭ್ಯಃ ಓಷಧಿ ೞಶಾಯ ನಿಶಾಂಪತಯೇ ವಾಚೇ ಭಾರತ್ಯೈ ವಾಚಸ್ಪತಯೇ ವಾಯವೇ ಬ್ರಹ್ಮಣೇ ಇತರದೇವತಾ ನಮಸ್ಕಾರೇಣ ನಮನಮಪರಿತುಷ್ಯನ್ ಪುನರ್ವಿಷ್ಣವೇ ನಮತಿ ॥ ನಮೋ ವಿಷ್ಣವೇ ಮಹತೇ ಕರೋಮಿ । ಅಂತವರ್ತಿನಾಂ ದೇವಾನಾಂ ಕ್ರಮೋ ನ ವಿವಕ್ಷಿತಃ । ಓಷಧೀಭ್ಯಃ ಓಷಧಿ ಜನಕಾಯೈ ಪೃಥಿವ್ಯೈ ರಮಾಯೈ ಓಷಧಿಜನನಾರ್ಥಂ ಪೃಥಿವೀಭಾವಮಾಪನ್ನಾಯೈ ಇತಿ ಯಾವತ್ । ನಮೋ ವಾಚೇ ಭಾರತ್ಯೈ ಸರಸ್ವತ್ಯೈ ವಾಚಸ್ಪತಯೇ ಬ್ರಹ್ಮಣೇ ವಾಯವೇ ಸರ್ವೋತ್ತಮತ್ವಾದ್ಧರಿರ್ನಮ್ಯಃ ಭಾರ್ಯಾತ್ಮಕತ್ವಾಲ್ಲಕ್ಷ್ಮೀಃ । ಗುರುತ್ವಾದ್ಬ್ರಹ್ಮವಾಯೂ । ವಿದ್ಯಾದೇವೀತ್ವಾತ್ಸರಸ್ವತೀಭಾರತೀ ವಿಶೇಷೇಣ ನಮ್ಯಾ । ತದುಕ್ತಂ ತಂತ್ರಸಾರೇ ॥ ಇಷ್ಟಂ ಹರಿಃ ಸಾಕ್ಷಾದ್ದೈವಂ ಲಕ್ಷ್ಮೀರ್ಭಾರ್ಗ್ಯಾಧಿದೇವತಾ । ಗುರುರ್ಬ್ರಹ್ಮಾಥವಾಯುರ್ವಾ ವಿದ್ಯಾದೇವ್ಯೌ ಪ್ರಕೀರ್ತಿತೇ । ತಸ್ಮಾದೇತೇ ಪ್ರಿಯಾ ವಿಷ್ಣೋರಂತರಂಗತಯಾ ಸದಾ ॥ ಧ್ಯೇಯಾಶ್ಚೈವತು ಪೂಜ್ಯಾಶ್ಚ ವಿಷ್ಣೋಃ ಪ್ರೀತಿಮಭೀಪ್ಸತೇತಿ ॥ ನಾರಾಯಣಂ ನಮಸ್ಕೃತ್ಯ' ಇತಿ ಚ ॥ ಅಯಂ ಋಗ್ವೇದಿನಾಂ ಪ್ರಾತಃ ಸಂಧ್ಯಾಮುಪಸ್ಥಾನ ಮಂತ್ರಃ ॥

**ದಿಗ್ದೇವತೆಗಳಿಗೆ ನಮನವು:-**

'ಪ್ರಾಚ್ಯಪ್ರಾಣಾಸ್ತಥೇಂದ್ರಾದ್ಯಾಃ । ದಕ್ಷಿಣೇ ಚ ಯಮಾದಯಃ । ಪ್ರತೀಚ್ಯಾಂ ವರುಣಾದ್ಯಾಸ್ತು । ಸೋಮಾದ್ಯಾ ಉತ್ತರಾಸ್ಮೃತಾಃ । ಶೇಷಮಿತ್ರಾವವಾಚೀನೌ । ಸಭಾರ್ಯಾಕೋಣಪೈಃಸಾರ್ಧಂ ಚತ್ವಾರೋ ದಿಶದಿಶಸ್ಯಪಿ।'' ಎಂದು ಪ್ರಮಾಣವಚನವಿದೆ. ತತ್ತದ್ದೇವತಾನಿಯಾಮಕ ತತ್ತಚ್ಛಬ್ದವಾಚ್ಯ ಪರಮಾತ್ಮನರೂಪಗಳಿಗೆ ನಮಸ್ಕಾರವೆಂದು ತಿಳಿಯತಕ್ಕದ್ದು.

**ಓಂ ನಮಃ ಪ್ರಾಚ್ಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚನಮೋನಮಃ ॥**

ಪ್ರಾಚ್ಯೈದಿಶೇ=ಪೂರ್ವದಿಕ್ಕಿಗೆ ಅಧಿಕಾರಿಯಾದ ಇಂದ್ರಅಗ್ನಿ ಅವರವರ ಪತ್ನಿಯರು; ಪರಿವಾರಸಹಿತರಿಗೆ, ಅವರನಿಯಾಮಕ ಅವರ ಉಪಾಸ್ಯ ಪರಮಾತ್ಮನಿಗೆ ನಮಸ್ಕಾರಗಳು. ಏತಸ್ಯಾಂ=ಆ ದಿಕ್ಕಿನಲ್ಲಿ; ಯಾಃ ಚ=ಯಾವ ; ದೇವತಾಃ=ದೇವತೆಗಳು(ಮತ್ತು ಇತರ ಸ್ವರೂಪೋತ್ತಮರು) ಪ್ರತಿವಸಂತಿ=ವಾಸಮಾಡಿ(ಡುತ್ತಿ)ದ್ದಾರೋ; ಏತಾಭ್ಯಶ್ಚ= ಆದೇವತೆಗಳಿಗೆಲ್ಲರಿಗೂ; ನಮಃ=ನಮಸ್ಕಾರವು॥

**ಓಂ ನಮಃ ದಕ್ಷಿಣಾಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮೋ ನಮಃ ॥**

ದಕ್ಷಿಣಾಯೈದಿಶೇ= ದಕ್ಷಿಣದಿಕ್ಕಿಗೆ ಅಧಿಕಾರಿಯಾದ ಯಮ ನಿರ್ಋತಿಗಳು; ಅವರ ಪತ್ನಿಯರು; (ಮಿಕ್ಕದ್ದು ಮೇಲಿನಂತೆ)

**ಓಂ ನಮಃ ಪ್ರತೀಚ್ಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮೋನಮಃ ॥**

ಪ್ರತೀಚ್ಯೈದಿಶೇ= ಪಶ್ಚಿಮದಿಕ್ಕಿಗೆ ಅಧಿಕಾರಿಯಾದ ವರುಣವಾಯುವು ಮತ್ತು ಅವರ ಉಪಾಸ್ಯ ದೇವರಿಗೆ (ಮೇಲಿನಂತೆ)

**ಓಂ ನಮಃ ಉದೀಚ್ಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮೋನಮಃ ॥**

ಉದೀಚ್ಯೈದಿಶೇ= ಉತ್ತರದಿಕ್ಕಿಗೆ ಅಧಿಕಾರಿಯಾದ ಕುಬೇರ,ಸೋಮ,ರುದ್ರರೇ ಮೊದಲಾದ ದೇವತೆಗಳಿಗೂ ; ಅವರಪತ್ನಿಯರಿಗೂ; ಅವರ ಉಪಾಸ್ಯ ದೇವರಿಗೆ (ಮೇಲಿನಂತೆ)

**ಓಂ ನಮಃ ಊರ್ಧ್ವಾಯೈದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮೋನಮಃ ॥**

ಊರ್ಧ್ವದಿಕ್ಕಿಗೆ ಅಧಿಕಾರಿಗಳಾದ ಗರುಡ, ಸೌಪರ್ಣಿ, ಕಾಮ ಮೊದಲಾದ ದೇವತೆಗಳಿಗೂ, ಅವರಪತ್ನಿಯರಿಗೂ, ಅವರ ಉಪಾಸ್ಯ ದೇವರಿಗೆ, (ಮೇಲಿನಂತೆ)

**ಓಂ ಅಧರಾಯೈದಿಶೇ  ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮೋನಮಃ ॥**

ಅಧರಾಯೈದಿಶೇ= ಅಧೋಲೋಕಗಳಿಗೆ ಅಧಿಕಾರಿಗಳಾದ ಶೇಷವಾರುಣೀ, ಮೈತ್ರಾ ಅವರ ಉಪಾಸ್ಯ ಪರಮಾತ್ಮನಿಗೆ (ಮೇಲಿನಂತೆ)

**ಓಂ ಅಂತರಿಕ್ಷಾಯೈ ದಿಶೇ ಯಾಶ್ಚದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮೋನಮಃ ॥**

ಅಂತರಿಕ್ಷಾಯೈ ದಿಶೇ=ಅಂತರಿಕ್ಷಲೋಕಗಳಿಗೆ ಅಧಿಕಾರಿಯಾದ ಗಣೇಶ ; ಅವರವರ ಪತ್ನಿಯರು; ಅವರ ಉಪಾಸ್ಯ ದೇವರಿಗೆ (ಮೇಲಿನಂತೆ) (ತೈ. ಆ. 2 ಪ್ರ.20 ಅನು)

**ಶ್ರೀತಿಮ್ಮಣ್ಣಾರ್ಯರು:-**ಸ್ವಸ್ವ ಶಾಖೋದಿತೈರ್ಮಂತ್ರೈರುಪಸ್ಥಾನಂ ಪ್ರದಕ್ಷಿಣಂ ಕುರ್ವನ್ ದಿಶೋ ನಮಸ್ಕೃತ್ವಾ ದಿಗೀಶಾಂಶ್ಚ ಪೃಥಕ್ ನಮೇದಿತಿ ವಚನೋಕ್ತರೀತ್ಯಾ **ಉಪಸ್ಥಾನಾನಂತರಂ ದಿಗೀಶನಮನಂ** । ಓಂ ನಮಃ ಪ್ರಾಚ್ಯೈದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತಿ ಏತಾಭ್ಯಶ್ಚ ನಮೋ ನಮಃ ॥ ಓಮಂತ್ರತ್ವದಾದೌ ಪ್ರಣವೋಚ್ಚಾರಣಂ । ಓಂ ಗುಣಪರಿಪೂರ್ಣಾಯೈ ಸಮ್ಯಕ್ ಧ್ಯಾನವಿಷಯತ್ವೇನ ವಾ ಜ್ಞಾನರೂಪತ್ವೇನ ವಾ ಸಂಧ್ಯಾಶಬ್ದವಾಚ್ಯಾಯೈ ಪ್ರಕರ್ಷೇಣ ಅಂಚ್ಯತೇ ಪೂಜ್ಯತೇ ಅಂಚತಿ ಜಾನಾತೀತಿ ವಾ । ಪ್ರಾಚ್ಯೈ ದಿಶ ಇತ್ಯಾಜ್ಞಾಪಯತೀತಿ ಸ್ವೇಸ್ವೇ ಕರ್ಮಣಿ ಸರ್ವಾಂ ಚೇತನಾನಿ ವಾ । ಉಪದಿಶತಿ ತತ್ವಂ ಸರ್ವವೇದೇಭ್ಯ ಇತಿ ವಾ ದಿಕ್ ಶಬ್ದವಾಚ್ಯಾಯೈ ಪರದೇವತಾಯೈ ನಮ ಇತ್ಯನ್ವಯಃ । ಏತಸ್ಯಾಂ ಯಾಶ್ಚ ದೇವತಾಃ ವಾಣೀವಾಯುಶಕ್ರಾದ್ಯಾಃ ಪ್ರತಿವಸಂತಿ ಏತಾಭ್ಯಶ್ಚ ನಮೋನಮಃ ಇತ್ಯನ್ವಯಃ । ಆದರಾದ್ವಿರುಕ್ತಿಃ । ಏವಂ ದಕ್ಷಿಣಾದಿಷು ದಕ್ಷಿಣಾಯೈ ದ್ರವಿಣಪ್ರದಾಯೈ , ಪ್ರತೀಚ್ಯೈ ಪ್ರತ್ಯಗಂಚನಾತ್ಪ್ರತೀತ್ಯೈ ಪ್ರತ್ಯಗಾತ್ಮರೂಪಾಯೈ । ಉದೀಚ್ಯೈ ಉದಗಂಚನಾ-ದುಚೀಚ್ಯೈ ಉತ್ಕೃಷ್ಟತಯಾ ಅಂಚನಾದ್ವಾ ಉದೀಚ್ಯೈ ತತ್ತದ್ದಿಕ್ ಸ್ಥಿತತ್ವೇನ ತತ್ತದಾಖ್ಯಾಯೈಃ । ಊಧ್ವಾಯೈ ಉಚ್ಚಾಯೈ ಅಧರಯತಿ ಸರ್ವಾಣೀತ್ಯಧರಾಯೈ ; ಅಂತರೀಕ್ಷತ ಇತ್ಯಂತರಿಕ್ಷಾಯೈ ; ಅವಾಂತರಾಯೈ ಇತಿ ಪಾಠೇ ಅವತಿ ಸುಖಂ ಅಂತರಯತಿ

ಸುಖಮಿತ್ಯವಾಂತರಾಯೈ । ಏತಸ್ಯಾಂ ಪ್ರತಿವಸಂತೀತ್ಯುಕ್ತಾಃ ದೇವತಾಃ ಪ್ರತಿದಿಶಿ ಪ್ರಾಣಃ ಪ್ರಾಣಪತ್ನೀ ಭಾರತೀ ಚ ಪ್ರಾಚ್ಯಾಂ ಇಂದ್ರಾದ್ಯಾಃ ದಕ್ಷಿಣಾತ್ಯಾಃ ಯಮಾದ್ಯಾಃ। ಪ್ರತೀಚ್ಯಾಃ ವರುಣಾದ್ಯಾಃ। ಉದೀಚ್ಯಾಃ ಸೋಮಾದ್ಯಾಃ। ತದುಕ್ತಂ ಷಟ್ಪ್ರಶ್ನಭಾಷ್ಯೇ॥ ' ಪ್ರಾಚ್ಯ ಪ್ರಾಣಸ್ತಥೇಂದ್ರಾದ್ಯಾ ದಕ್ಷಿಣಾಶ್ಚ ಯಮಾದಯಃ। ಪ್ರತೀಚ್ಯಾ ವರುಣಾದ್ಯಾಸ್ತು ಸೋಮಾದ್ಯಾಶ್ಚೋತ್ತರಾಃ ಸ್ಮೃತಾ' ಇತಿ॥ '' ಆದಿತ್ಯಾಶ್ರಯಶ್ಚಕ್ಷುರ್ನಾಮಾ ಸ್ವಾಯಂಭುವೋ ಮನುಃ । ಚಕ್ಷುಃಸ್ಥೋ ದೃಷ್ಟಿಶಕ್ತೀಶೋ ರೂಪಾತ್ಮೇಂದ್ರಸ್ತದಾಶ್ರಯಃ । ಬುದ್ಧಿತತ್ವಾತ್ಮಿಕೋಮಾ ಚ ಶಕ್ರಸ್ಯಾಪಿ ಸಮಾಶ್ರಯಃ । ಏವಂ ಯಮಸ್ಯಾಶ್ರಯಶ್ಚ ಯಜ್ಞಮಾನ್ಯನಿರುದ್ಧಕಃ । ದಕ್ಷಿಣಾಮಾನಿನೀ ದೇವೀ ರತಿರೇವ ತದಾಶ್ರಯಃ । ಶ್ರದ್ಧಾರೂಪಃ ಸದಾ ಕಾಮಸ್ತಸ್ಯಾ ಅಪಿ ಸಮಾಶ್ರಯಃ । ಹೃದಯಾತ್ಮಿಕ್ಯುಮಾ ತಸ್ಯ ಕಾಮಸ್ಯಾಪಿ ಸಮಾಶ್ರಯಃ। ಅಬ್ದೇವತಾ ಸದಾ ಚಂದ್ರೋ ವರುಣಸ್ಯ ಸಮಾಶ್ರಯಃ। ರೇತ ಆತ್ಮಾ ಸುರಗುರುಃ ಸೋಮಸ್ಯಾಪಿ ಸಮಾಶ್ರಯಃ। ತಸ್ಯಾಪ್ಯುಮೈವಾಶ್ರಯಃ  ತಸ್ಯೈವ ತು ದಿಗೀಶಿತುಃ । ಸೋಮಸ್ಯ ದೀಕ್ಷಾರೂಪಾ ತು ಶತರೂಪಾ ಸಮಾಶ್ರಯಃ । ತಸ್ಯಾಃ ಸತ್ಯಾತ್ಮಕೋ ದೇವೋ ಮನುರೇವ ಸಮಾಶ್ರಯಃ । ತಸ್ಯಾಪ್ಯುಮೈವಾಶ್ರಯಃ ಸ್ಯಾತ್ ಪ್ರಷ್ಟ್ಯರೂಪಸ್ಯ ನಿತ್ಯದಾ । ಮಧ್ಯದಿಕ್ ಸ್ವಾಮಿನೋಽಗ್ನೇಶ್ಚ ಸ್ವಾಧಾರೋ ವಾಗ್ ಬೃಹಸ್ಪತಿಃ । ತಸ್ಯಾಪ್ಯುಮೈವ ಹೃದಯರೂಪಾ ನಿತ್ಯಂ ಸಮಾಶ್ರಯಃ ।  ತಸ್ಯಾಃ ಸಮಾಶ್ರಯೋ ರುದ್ರಸ್ತ್ವಮಹಂ ಚೇತಿ ರೂಪವಾನಿ''ತಿ ಬೃಹದ್ಭಾಷ್ಯೋಕ್ತಾಃ ದ್ರಷ್ಟವ್ಯಾಃ॥

**ದೇವಾದಿವಂದನೆ:-**

**ಓಂ ಸಂಧ್ಯಾಯೈ ನಮಃ ।** (ಸಂಧ್ಯಾನಾಮಕಗೆ ನಮಸ್ಕಾರವು)

**ಓಂ ಸಾವಿತ್ರೈನಮಃ ।**(ಸಾವಿತ್ರೀ ಮತ್ತು ಸಾವಿತ್ರೀನಿಯಾಮಕಗೆ ನಮಸ್ಕಾರವು)

**ಓಂ ಸರಸ್ವತ್ಯೈ ನಮಃ** (ಸರಸ್ವತೀ ಮತ್ತು ಸರಸ್ವತೀ ನಿಯಾಮಕಗೆ ನಮಸ್ಕಾರವು)

**ಓಂ ಸರ್ವಾಭ್ಯೋ ದೇವತಾಭ್ಯೋ ನಮಃ ।**(ಇತರ ದೇವತೆಗಳು, ಅವರ ನಿಯಾಮಕಗೆ)

**ಓಂ ದೇವಿಭ್ಯೋ ನಮಃ ।**(ದೇವತೆಗಳು ಮತ್ತು ಅವರ ನಿಯಾಮಕಗೆ)

**ಓಂ ಋಷಿಭ್ಯೋ ನಮಃ ।**(ಋಷಿಗಳು ಮತ್ತು ಅವರ ನಿಯಾಮಕಗೆ)

**ಓಂ ಗುರುಭ್ಯೋ ನಮಃ ।**(ಗುರುಗಳು ಮತ್ತು ಅವರ ನಿಯಾಮಕಗೆ)

**ಓಂ ಮಾತೃಭ್ಯೋ ನಮಃ ।**(ತಾಯಿಯು ಮತ್ತು ಅವರ ನಿಯಾಮಕಗೆ)

**ಓಂ ಪಿತೃಭ್ಯೋ ನಮಃ ।** (ತಂದೆ ಮತ್ತು ಅವರ ನಿಯಾಮಕಗೆ)

(ಪಿತಾಹಮಸ್ಯಜಗತೋ ಮಾತಾಧಾತಾ ಪಿತಾಮಹಯಂ ತೇ' - ಗೀತೋಕ್ತಿ)

**ಓಂ ಕಾಮೋಕಾರ್ಷೀನ್ನಮೋ ನಮಃ ।** (ರಾಗವನ್ನುಂಟುಮಾಡಿಸುವ ಕಾಮಾಭಿಮಾನಿದೇವತೆಗಳಿಗೂ, ಅವರ ನಿಯಾಮಕನಿಗೆ ನಮಸ್ಕಾರವು)

**ಶ್ರುತಿಮ್ಮಣ್ಣಾರ್ಯರು:-**'ಪ್ರಾತರುತ್ಥಾಯ ಸಂಧ್ಯಾಮುಪಾಸಿತೇ'ತಿ 'ಯಸ್ಸಂಧ್ಯಾಮುಪಾಸತೇ ಬ್ರಹ್ಮೈವ ತದುಪಾಸತೇಥ- ದೇವಾನ್ನಮೇ'ದಿತಿ ಭಾಷ್ಯೋಕ್ತ ಶ್ರುತೇಃ। ಪ್ರಣಮ್ಯ ದೇವಾನ್ವಿಪ್ರಾಂಶ್ಚ ಗುರೂಂಶ್ಚ ಹರಿಪಾರ್ಷದಾನಿತ್ಯುಕ್ತ ದಿಶಾ। ದೇವವಿಪ್ರ- ಗುರುವಿಷ್ಣುಪಾರ್ಷದಾನ್ನಮೇತ್। '' ನಮೋ ನಮೋ ಗಂಗಾ ಯಮುನಯೋರ್ಮಧ್ಯೇ ವಸಂತಿ ತೇ ಮೇ ಪ್ರಸನ್ನಾತ್ಮಾನಶ್ಚಿರಂ। ಜೀವಿತಂ ವರ್ಧಯಂತೀ'ತಿ ॥ ಯೇವಸಂತಿ ಮುನಯಃ ಇತ್ಯನ್ವಯಃ । ತೇಭ್ಯಃ ಮುನಿಭ್ಯಃ ನಮೋನಮ ಇತ್ಯನ್ವಯಃ । ಗಂಗಾಯಮುನಮಧ್ಯದೇಶಸ್ಯ ಪುಣ್ಯಭೂಮಿತ್ವೇನ ಪ್ರಾಯಃ ಪುಣ್ಯಮುನಿಶಬ್ದವಾಚ್ಯ ಸರ್ವದೇವಾದಿ ನಮನಂ ಸಾಮಾನ್ಯೇನ। ತತ್ರತ್ಯತ್ವೇನ ತದ್ವಂದನಂ ತೇಭ್ಯೋ ಆಶೀರಾಶಾಸನಂ ಚ ಯುಕ್ತಂ। ಪ್ರಣಮ್ಯದೇವಾನಿತ್ಯುಕ್ತ ಪ್ರಕಾರೇಣ ದೇವಾದಿ ವಂದನಂ। ಆದೌ ದೇವೋತ್ತಮಸ್ಯ ತ್ರಿಕಾಲೇ ತ್ರಿರೂಪಸಂಧ್ಯಾನಾಮಕ ಹರೇರ್ವಂದನಂ। ಸಂಧ್ಯಾಯೈ ನಮಃ ಇತ್ಯಾದಿನಾ। ಸಂಧ್ಯಾಯೈ ನಮಃ । ಸಾವಿತ್ರ್ಯೈ ನಮಃ । ಗಾಯತ್ರ್ಯೈನಮಃ । ಸರಸ್ವತ್ಯೈ ನಮಃ । ತತಸ್ತದವರ ದೇವತಾ ನಮನಂ । ಸರ್ವೇಭ್ಯೋ

ದೇವೇಭ್ಯೋ ನಮಃ। ಕೇಚಿತ್ ಸರ್ವೇಭ್ಯೋ ದೇವತಾಭ್ಯೋ ನಮಃ ಇತಿ ವದಂತಿ। ತತ್ಪಕ್ಷೇ ಸ್ತ್ರೀಲಿಂಗ ಶಬ್ದವಾಚ್ಯಾಃ ಸ್ತ್ರಿಯಃ ರಮಾದ್ಯಾಃ ದೇವತಾಃ ಪುಲ್ಲಿಂಗ ಶಬ್ದವಾಚ್ಯಾಃ ಬ್ರಹ್ಮಾದ್ಯಾ ಇತಿ ದೇವತಾಃ। ತತಃ ಋಷಿ ನಮಸ್ಕಾರಂ। ವಿಪ್ರಾನಿತ್ಯುಕ್ತೇಃ ವರೇಣ ವಿಪ್ರತ್ವಮವಾಪಯೋಽಸಾವಿತ್ಯುಕ್ತೇಃ। ವಿಪ್ರರಾಜನ್ಯಭೇದ ಇತ್ಯನುವ್ಯಾಖ್ಯಾನೇ ಕರ್ಮದೇವತಾ ಸಮೋಚಿಥ್ಯ ಪ್ರಿಯವ್ರತಾದಿಷು ವಿಶೇಷ ಪ್ರಸಂಗೇ ವಿಪ್ರಶಬ್ದಸ್ಯ ಋಷಿಷು ಪ್ರಯೋಗಾತ್ । ತತಃ ಗುರೂಂಶ್ಚ ಇತ್ಯುಕ್ತತ್ವಾತ್ । ತತಃ ಹರಿಪಾರ್ಷದಾನಿತ್ಯುಕ್ತೇಃ। ಮುನಿಭ್ಯಃ ಸದಾ ಹರಿಮನನಶೀಲೇಭ್ಯಃ ಸನಕಾದಿಭ್ಯಃ। ಕಾಲಾಜಯಾದಿಭ್ಯಃ। ''ಕಾಲಾಜಯಾದ್ಯಾ ಅಪಿ ವಿಷ್ಣುಪಾರ್ಷದಾ'' ಇತಿ ನಿರ್ಣಯೋಕ್ತೇಃ । ಇತರ ದೇವತಾ ವಂದನೇನ ಸಮಾಪನಮನುಚಿತಂ ಪುನಃ ಹರಿವಂದನಂ ಕರೋತಿ । ಕಾಮೋಕಾರ್ಷೀನ್ಮನ್ಯುರಕಾರ್ಷೀನ್ ನಮೋ ನಮಃ।

**ಕಾಮ ಇತ್ಯಾದಿನಾ ।** ಕಯೋರ್ವಾಯುಬ್ರಹ್ಮಣೋಃ ಆಸಮ್ಯಕ್ ಮಾ ಜ್ಞಾನಂ ಯಸ್ಮಾತ್ ಸ ಕಾಮಃ ಶ್ರೀ ಹರಿಃ ಕಾಮ ಇಚ್ಛಾಸ್ಥಿತಃ ಸರ್ವಮನೋವೃತ್ತ್ಯುಪಲಕ್ಷಣಂ। ಯಥಾ ಕಾರ್ಷೀನ್ ಅಕಾರಯತ್। ಮನ್ಯುಃ ಯಜ್ಞಾದಿ ಕರ್ಮಪ್ರೇರಕಃ। ಯಥಾ 'ಕ್ರತುಃ ಕರ್ಮಮಧ್ಯೇ ವರಿಷ್ಠ' ಇತ್ಯುಕ್ತೇಃ। ತಸ್ಯ ಸ್ವಪದೇನೋಕ್ತೇಃ। ಸಕಲ ಜ್ಞಾನೇಂದ್ರಿಯಪ್ರೇರಕಃ। ಸಕಲಕರ್ಮೇಂದ್ರಿಯ ಪ್ರೇರಕಶ್ಚ। ಯದಾಕಾರಿಷದಕಾರಯತ್ । ತಸ್ಮೈ ಕಾಮಾಯ ಮನ್ಯವೇ ನಮೋ ನಮಃ। ನ ಚ ಅತ್ರ ಕಾಮಮನ್ಯುಶಬ್ದೌ ಅರಿಷಡ್ವರ್ಗ ಮಧ್ಯಗಣಿತ ಕಾಮಕ್ರೋಧ ಪರೌ ಕಿಂ ನ ಸ್ಯಾತಾಮಿತಿ ಚೇನ್ನ ॥ ದೇವತಾನಮನ ಪ್ರಕರಣೇ ತಯೋಃ ಶತ್ರುಭೂತಯೋಃ ನಮೋನಮ ಇತಿ ನಮ್ಯತ್ವೋಕ್ತಿ ವಿರೋಧಾತ್। ''ಕಾಮೋಕಾರ್ಷೀನಮೋನಮಃ। ಕಾಮೋಕಾರ್ಷೀತ್ ಕಾಮಃ ಕರೋತಿ ನಾಹಂ ಕರೋಮೀತಿ, ಕಾಮಃ ಕರ್ತಾನಾಹಂ ಕರ್ತಾ, ಕಾಮಃ ಕಾರಯಿತಾ ನಾಹಂ ಕಾರಯಿತಾ ಏಷತೇ ಕಾಮಕಾಮಾಯ ಸ್ವಾಹಾ ।'' ಏವಂ ಮನ್ಯುಕರ್ತೇತಿ ಶ್ರುತಿವಾಕ್ಯದ್ವಯೇ ಅಹಂ ಶಬ್ದವಾಚ್ಯಸ್ಯ ಜೀವಸಮೂಹಸ್ಯ ಅಸ್ವಾತಂತ್ರ್ಯಮುಪಪಾದ್ಯ ಕಾಮಾದಿಶಬ್ದವಾಚ್ಯಯೋಃ ಸ್ವಾತಂತ್ರ್ಯೋಕ್ತಿ ವಿರೋಧಾಚ್ಚ। ವಿಷ್ಣೋಸ್ತ್ವೇತತ್ಸರ್ವಂ ಯುಜ್ಯತೇ। ಕಾಮಕಾಮತ್ವಂ ಮನ್ಮಥಮನ್ಮಥತ್ವಂ। ತಚ್ಚ। ''ತಾಸಾಮಾವಿರಭೂತ್ ಶೌರಿಃ ಸ್ಮಯಮಾನಮುಖಾಂಬುಜಃ। ಪೀತಾಂಬರಧರಃ ಸ್ರಗ್ವೀ ಸಾಕ್ಷಾನ್ಮನ್ಮಥಮನ್ಮಥಃ॥'' ಮನ್ಯುಮನ್ಯುತ್ವಂ ಚ ಯಜ್ಞಸ್ಯಾಪಿ ಯಜ್ಞಪ್ರದತ್ವಂ ದೈನ್ಯಸ್ಯ ದೈನ್ಯಪ್ರದತ್ವಂ ''ಕ ಇದಂ ಕಸ್ಮಾದಾತ್ ಕಾಮಃ ಕಾಮಾಯ ಕಾಮೋದಾತಾ ಕಾಮಃ ಪ್ರತಿಗೃಹೀತಾ ಕಾಮಗ್ಂ ಸಮುದ್ರಮಾವಿಶ । ಕಾಮೇನತ್ವಾ ಪ್ರತಿಗೃಹ್ಣಾಮಿ । ಕಾಮೇತತ್ತೇ ಏಷಾ ತೇ ಕಾಮದಕ್ಷಿಣ । ಉತ್ತಾನಸ್ತ್ವಾಂಗೀರಸಃ ಪ್ರತಿಗೃಹ್ಣಾತ್ವಿ''ತಿ ಶ್ರುತೇರಯಮರ್ಥಃ । ಕಃ ಪುರುಷಃ ಇದಂ ದಾನದ್ರವ್ಯಂ ಕಸ್ಮಾಕಸ್ಮೈದಾದೇಶಃ ಛಾಂದಸಃ । ದಾತ್ ಅದಾತ್ । ಅಜ(ಡ?)ಭಾವಃ ಛಾಂದಸಃ । ಇತಿ ಪ್ರಶ್ನೇ ಕಾಮೋದಾತೇತ್ಯುತ್ತರಂ। ಕಾಮೋ ಶ್ರೀಹರಿಃ ದಾತಾ ಪ್ರತಿಗೃಹೀತೇತಿ।

**ಓಂ ಪೃಥಿವ್ಯಾಪಸ್ತೇಜೋ ವಾಯುರಾಕಾಶಾತ್। ಓಂ ನಮೋ ಭಗವತೇ ವಾಸುದೇವಾಯಓಂ॥**
**ಯಾಂ ಸದಾ ಸರ್ವಭೂತಾನಿ ಸ್ಥಾವಿರಾಣಿ ಚರಾಣಿ ಚ। ಸಾಯಂ ಪ್ರಾತರ್ನಮಸ್ಯಂತಿ ಸಾ ಮಾಂ ಸಂಧ್ಯಾಭಿರಕ್ಷತು॥**
**ಸಾ ಮಾಂ ಸಂಧ್ಯಾಭಿರಕ್ಷತ್ವೋಂ ನಮೋ ನಮಃ ॥ (ತೈ.ಆ.10. ಪ್ರ.66 ಅನು)**

**ಮಂತ್ರಾರ್ಥ:-** ಪೃಥಿವೀ= ಭೂಮಿಅಭಿಮಾನಿದೇವತೆಗೂ; ಮತ್ತು ನಿಯಾಮಕವಿಷ್ಣುವಿಗೂ(ಪೃಥುತ್ವಾತ್ಪೃಥಿವೀ ವಿಷ್ಣುಃ ಎಂಬ ಪ್ರಮಾಣದಂತೆ) ; ಆಪಃ= ಉದಕಾಭಿಮಾನಿದೇವತೆಗೂ ಮತ್ತು ನಿಯಾಮಕ ಪರಮಾತ್ಮಗೂ ; ತೇಜಃ =ತೇಜೋಭಿಮಾನಿನಿಗೂ, ನಿಯಾಮಕ ವಿಷ್ಣುವಿಗೂ; ವಾಯುಃ=ವಾಯುವಿಗೂ,ನಿಯಾಮಕವಿಷ್ಣುವಿಗೂ; ಆಕಾಶಾತ್=ಆಕಾಶಾಭಿಮಾನಿಗೂ, ನಿಯಾಮಕ ವಿಷ್ಣುವಿಗೂ; ಓಂ =ಗುಣಪೂರ್ಣನಾದ; ಭಗವತೇ= ಷಡ್ಗುಣೈಶ್ವರ್ಯಸಂಪನ್ನನಾದ; ವಾಸುದೇವಾಯ= ವಾಸುದೇವನಾಮಕ ಪರಮಾತ್ಮನಿಗೂ(**ಸೂ.:-**ವಾಸುದೇವ ಪದದ ಅರ್ಥ ಮುಂದಿನ ಪದ್ಯಗಳಲ್ಲಿ ಬರುತ್ತದೆ) ನಮಃ=ನಮಸ್ಕಾರವು.

ಯಾಂ- ಯಾವ ಸಂಧ್ಯೆಯನ್ನು ಅಥವಾ ಸಂಧ್ಯಾನಾಮಕಪರಮಾತ್ಮನನ್ನು ; ಚರಾಣಿ ಸ್ಥಾವರಾಣಿ ಚ = ಚರಾಚರರೂಪಗಳಾದ; ಸರ್ವ ಭೂತಾನಿ= ಸಮಸ್ತಪ್ರಾಣಿಗಳು ;ಸಾಯಂ ಪ್ರಾತಃ=ಸಾಯಂಕಾಲದಲ್ಲಿಯೂ , ಪ್ರಾತಃಕಾಲದಲ್ಲಿಯೂ, ನಮಸ್ಯಂತಿ=ನಮಸ್ಕಾರಮಾಡುತ್ತಾರೋ ; ಸಾ ಸಂಧ್ಯಾ= ಆ ಸಂಧ್ಯೆಯೂ, ಸಂಧ್ಯಾನಾಮಕಪರಮಾತ್ಮನು ; ಮಾ=ನನ್ನನ್ನು ; ಅಭಿ=ನಾಲ್ಕುಪಾರ್ಶ್ವಗಳಲ್ಲಿಯೂ; ರಕ್ಷಂತು=ರಕ್ಷಣಮಾಡಲಿ;

ಸಾಮಾಸಂಧ್ಯಾ ಅಭಿರಕ್ಷತ್ವೋಂ ನಮಃ= ಹಿಂಗೆ ರಕ್ಷಣಮಾಡೋದಕ್ಕೋಸ್ಕರ ಮಂತ್ರಪ್ರತಿಪಾದ್ಯ ಸಂಧ್ಯಾಭಿಮಾನಿ ದೇವತಾಂತರ್ಗತ (ಶ್ರೀಮಧ್ವಾಂತರ್ಯಾಮಿನ್) ಪರಮಾತ್ಮನಿಗೆ; ನಮಃ=ನಮಸ್ಕಾರವು. (ತತ್ತದ್ದೇವತಾನಿಯಾಮಕ ತತ್ತಚ್ಛಬ್ದವಾಚ್ಯ ಪರಮಾತ್ಮನರೂಪಗಳಿಗೆ ನಮಸ್ಕಾರವೆಂದರ್ಥ.)

**ಶ್ರೀತಿಮ್ಮಣ್ಣಾರ್ಯರು:-** ಪೃಥಿವ್ಯಾಪಸ್ತೇಜೋವಾಯುರಾಕಾಶಾದಿತಿ । ದ್ವಂದ್ವೈಕವದ್ಭಾವಃ । ಲ್ಯಬ್ಲೋಪನಿಮಿತ್ತಾ ಪಂಚಮೀ ।'ಪೃಥಿವ್ಯಾಪಸ್ತೇಜೋವಾಯುರಾಕಾಶಾತ್ । ಓಂ ನಮೋ ಭಗವತೇ ವಾಸುದೇವಾಯೇ'ತಿ ಸರ್ವಪ್ರೇರಕತ್ವ ಸರ್ವವ್ಯಾಪಕತ್ವೇನ ಸರ್ವೋತ್ತಮತ್ವಾನುಸಂಧಾನಪೂರ್ವಕಂ ನಮತಿ । ಪೃಥಿವ್ಯಾಪಸ್ತೇಜೋವಾಯುರಾಕಾಶಾನ್ ಆಸ್ಥಾಯ ವಿದ್ಯಮಾನಾಯ । ಓಂ ಗುಣಪೂರ್ಣಾಯ ಭಗವತೇ ವಾಸುದೇವಾಯ ಓಂ ನಮ ಇತ್ಯನ್ವಯಃ । ವಾಯುರಾಕಾಶಾದಿತ್ಯತ್ರ ರೇಫಃ ಛಾಂದಸಃ । ಪೃಥಿವ್ಯಾಪಸ್ತೇಜೋವಾಯೂನ್ ರಾತಿ ದದಾತಿ ಜನಯತೀತಿ ವಾ । ವಾಯುಭಿಃ ಕಾರ್ಯರೂಪೈಃ ನಮತ ಇತಿ ವಾ ವಾಯುರಂತಚ್ಚ ತತ್ ಆಕಾಶಂ ಚೇತಿ ವಾ । ಪಂಚಮೀ ಚತುರ್ಥ್ಯರ್ಥೇ । ಶ್ರೀಹರಿಸರ್ವೋತ್ತಮತ್ವಾನುಸಂಧಾನಪೂರ್ವಕಂ ದೇವತಾವಂದನಂ ಶ್ರೀಹರಿವಂದನಂ ಚರಿತವ್ಯಂ । 'ಏತದೇವಾಭಿಪ್ರೇತ್ಯ ಪ್ರಣಮ್ಯ ದೇವಾನ್ವಿಪ್ರಾಂಶ್ಚ ಗುರೂಂಶ್ಚ ಹರಿಪಾರ್ಷದಾನ್ । ಏವಂ ಸರ್ವೋತ್ತಮಂ ವಿಷ್ಣುಂ ಧ್ಯಾಯೇನ್ನೇವಾರ್ಚಯೇದ್ಧರಿ'ಮಿತಿ । ನ ಚೈತದೇವಾರ್ಚನವಿಷಯಮಿತಿ ಜ್ಞಾತವ್ಯಂ । 'ಧರ್ಮೇಣ ಆಜ್ಯಾಸಾಧನಾನಿ ಸಾಧಯಿತ್ವಾ ವಿಧಾನತಃ । ಸ್ನಾತ್ವಾ ಸಂಪೂಜಯೇದ್ವಿಷ್ಣು'ಮಿತಿ ದೇವತಾರ್ಚನಸ್ಯ ಉಕ್ತೇಃ ॥

ಸಂಧ್ಯಾಸ್ತುವನ್ ರಕ್ಷಣಂ ಪ್ರಾರ್ಥಯತೇ । **ಯಾಂ ಸದೇತಿ ।** ಚರಾಣಿ ಸ್ಥಾವರಾಣಿ ಭೂತಾನಿ ಯಾಂ ಸದಾ ನಮಸ್ಯಂತಿ । ಸಾಯಂ ಪ್ರಾತರಿತ್ಯುಪಲಕ್ಷಣಂ । ಮಧ್ಯಾನ್ಹೇ ಪಂಚಕಾಲಪರಾಯಣಾಃ ಪಂಚಕಾಲೇಷು । ಸಾ ಸಂಧ್ಯಾ ಮಾಮಭಿರಕ್ಷತು । ಸಂಧ್ಯಾನಾಮಕ ಶ್ರೀಹರಿರೇ( ದೇ)ವೋದ್ದೇಶ್ಯ ಇತ್ಯಾಹ । **ಕಾಮಮಿತಿ** । ಸಮುದ್ರಂ ಸಮ್ಯಕ್ ಉತ್ ಉತ್ಕೃಷ್ಟಂ ರಂ ರಮಣಂ ಯಸ್ಯ ತಂ । ಕಾಮಸಮುದ್ರಂ । ಸಮುದ್ರಸ್ಥಂ ಕಾಮಮಿತಿ ಹಿ ಮಂಚಾಕ್ರೋಶಂತೀತಿವತ್ । ಏತದ್ದ್ರವ್ಯ ಆವಿಶ ಪ್ರವಿಶ ತತ್ತರ್ಪಕಂ ಭವತ್ವಿತಿ ಭಾವಃ । ಪ್ರತಿಗೃಹೀತುರಪಿ ಏತದನುಸಂಧಾನಂ ಚರಿತವ್ಯಮಿತಿ ಆಹ । ಕಾಮೇನತ್ವೇತಿ । ಕಾಮೇನ ಶ್ರೀಹರಿಣಾ ತ್ವಾದಾನದ್ರವ್ಯ ಪ್ರತಿಗೃಹ್ಣಾಮೀತಿ । ಶ್ರೀಹರಿಸಮರ್ಪಣ ಸ್ವರೂಪಮಾಹ । **ಕಾಮೈತದಿತಿ** । ಹೇ ಕಾಮ ಶ್ರೀಹರೇ ಏತತ್ ಸಮಸ್ತಂ ಜಗತ್ ತೇ ತ್ವದೀಯಂ । ಏತದೇವ ಸಮರ್ಪಣಂ ನಾಮ । ತದುಕ್ತಂ ಐತರೇಯಭಾಷ್ಯೇ '' ತಸ್ಯೇತ್ಯರ್ಪಣಮಾತ್ರೇಣ ಪೂಜಿತೋ ಹಿ ಭವೇದ್ಧರಿ'ರಿತಿ । ಏಷಾ । ದಕ್ಷಿಣಾ । ದಕ್ಷಿಣಾಭಿಮಾನಿನೀ ಶ್ರೀಃ । ತೇ ತ್ವದೀಯ ಉತ್ತಾನಂ ಉತ್ಕೃಷ್ಟತಃ ವಿಸ್ತೃತಃ । ಅನಶ್ಚೇಷ್ಟಕಃ ಉತ್ತಾನಃ ಊರ್ಧ್ವತನ ಇತಿ ವಾ । ಆಂಗೀರಸಃ ಆಸಮ್ಯಕ್ ಅಂಗಿ ನ ಶರೀರೇ ವಿದ್ಯಮಾನ ಸರ್ವಾಪೇಕ್ಷೇ ಯಾ ರಸಃ ಶ್ರೇಷ್ಠಃ । ಅಂಗಾನಿ ರಸಯತಿ ಇತ್ಯಂಗಿರಸ ಇತಿ ವಾ । ಇದಂ ತು ನಿರ್ವಚನಂ ಋಗ್ಭಾಷ್ಯೇ ಸ್ಪಷ್ಟಂ ॥ ಸಃ ಶ್ರೀಹರಿಃ ಪ್ರತಿಗೃಹ್ಣಾತು । ಅತ್ರಾಪಿ ದಕ್ಷಿಣಾಸ್ವಾಮಿತ್ವೋಕ್ತೇಃ ಕಾಮಶಬ್ದವಾಚ್ಯ ಶ್ರೀಹರಿರೇವ ।

**ಬ್ರಹ್ಮಣ್ಯೋ ದೇವಕೀಪುತ್ರೋ । ಬ್ರಹ್ಮಣ್ಯೋ ಮಧುಸೂದನಃ ।**
**ಬ್ರಹ್ಮಣ್ಯಪುಂಡರೀಕಾಕ್ಷೋ ಬ್ರಹ್ಮಣ್ಯೋ** (ಶ್ರೀಮಧ್ವಾಂತರ್ಯಾಮಿನ್) **ಶ್ರೀವಿಷ್ಣುರಚ್ಯುತ ।**
**''ನಮೋ ಬ್ರಹ್ಮಣ್ಯ ದೇವಾಯ ಗೋ ಬ್ರಾಹ್ಮಣ ಹಿತಾಯ ಚ ।ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋನಮಃ ॥''**

ಅರ್ಥ:- ದೇವಕೀಪುತ್ರಃ=ದೇವಕೀದೇವಿಯರಲ್ಲಿ ಅವತಾರಮಾಡಿದ ಪರಮಾತ್ಮನು ; ಬ್ರಹ್ಮಣ್ಯಃ=ಬ್ರಾಹ್ಮಣಪ್ರಿಯನು ; ಮಧುಸೂದನಃ= ಮಧು ನಾಮಕದೈತ್ಯಸಂಹಾರಕನಾದ ಪರಮಾತ್ಮನು ; ಬ್ರಹ್ಮಣ್ಯಃ=ಬ್ರಹ್ಮಣ್ಯನು; ಪುಂಡರೀಕಾಕ್ಷಃ= ಕಮಲಗಳೋಪಾದಿಯಲ್ಲಿ ಕಣ್ಣುಗಳುಳ್ಳ ಪರಮಾತ್ಮನು; ಬ್ರಹ್ಮಣ್ಯಃ=ಬ್ರಾಹ್ಮಣಪ್ರಿಯನು; ವಿಷ್ಣುಃ=ವ್ಯಾಪ್ತನಾದ ಪರಮಾತ್ಮನು; ಬ್ರಹ್ಮಣ್ಯಃ=ಬ್ರಹ್ಮಣ್ಯನು; ಅಚ್ಯುತಃ=ನಾಶರಹಿತನಾದ ಪರಮಾತ್ಮನು ; ಬ್ರಹ್ಮಣ್ಯಃ= ಬ್ರಹ್ಮಣ್ಯನು; ಬ್ರಹ್ಮಣ್ಯದೇವಾಯ=ಪೂರ್ವೋಕ್ತ ಬ್ರಹ್ಮಣ್ಯತ್ವವಿಶಿಷ್ಟನಾದ ಕ್ರೀಡಾದಿಗುಣವಿಶಿಷ್ಟನಾದ; ಗೋ=ಆಕಳುಗಳಿಗೆ; ಬ್ರಾಹ್ಮಣ= ಬ್ರಾಹ್ಮಣರಿಗೆ, ಅಥವಾ ಬ್ರಹ್ಮಜ್ಞಾನಿಗಳಿಗೆ; ಹಿತಾಯ=ಹಿತವನ್ನು ಮಾಡತಕ್ಕ; ಜಗತ್=ಜಗತ್ತಿಗೆ; ಹಿತಾಯಚ=ಹಿತವನ್ನು ಮಾಡತಕ್ಕ; ಕೃಷ್ಣಾಯ= ಸಂಪೂರ್ಣಜ್ಞಾನಾನಂದಾದಿಗಳುಳ್ಳ; ಗೋವಿಂದಾಯ=ವೇದವೇದ್ಯನಾದ ಶ್ರೀಪರಮಾತ್ಮನಿಗೆ; ನಮೋನಮಃ=ಪದೇ ಪದೇ ನಮಸ್ಕಾರಗಳನ್ನು

ಮಾಡುತ್ತೇನೆ.

**ಕ್ಷೀರೇಣಸ್ನಾಪಿತೇ ದೇವೀ ಚಂದನೇನ ವಿಲೇಪಿತೇ । ಬಿಲ್ವಪತ್ರಾರ್ಚಿತೇ ದೇವೀ ದುರ್ಗೇಽಹಂ ಶರಣಾಗತಂ ।**

**ಶ್ರೀದುರ್ಗೇಽಹಂ ಶರಣಾಗಚ್ಛತ್ಯೋಂ ನಮೋ ನಮಃ ॥**

ಅರ್ಥ:- ಕ್ಷೀರೇಣ= ಹಾಲಿನಿಂದ; ಸ್ನಾಪಿತೇ=ಸ್ನಾನಮಾಡಿಸಲ್ಪಟ್ಟಂಥಾ ; ದೇವೀ=ಕ್ರೀಡಾದಿಗುಣಸಂಪನ್ನಳಾದ; ಚಂದನೇನ=ಗಂಧದಿಂದ; ವಿಲೇಪಿತೇ=ಲೇಪನಮಾಡಿಸಲ್ಪಟ್ಟ; ದುರ್ಗೇ=ದುರ್ಗಾದೇವಿಯೇ; ಅಹಂ=ನಾನು(ನಿನ್ನನ್ನು); ಶರಣಾಗತಃ =ಶರಣು ಹೊಂದಿದ್ದೇನೆ; ಶ್ರೀಅಹಂ ದುರ್ಗೇಶರಣಾತ್ಯೋಂ=ನಾನು ಶರಣುಹೊಂದತಕ್ಕ ದುರ್ಗಾದೇವಿಯರಿಗೆ; ನಮಃ= ನಮಸ್ಕಾರಗಳು;

**ಶ್ರೀತಿಮ್ಮಣ್ಣಾರ್ಯರು :-**ಹರೇಃ ಸರ್ವ ಚರಾಚರ ನಮ್ಯತ್ವೋಪಪಾದಕಗುಣಾತ್ ಅಧಿಕೃತತ್ವ ವಿಶಿಷ್ಟತ್ವ ಇಷ್ಟತ್ವಾಖ್ಯಾನ್ ಪ್ರಮಾಣೇನೈವ ದರ್ಶಯತಿ । ''ನಮೋ ಬ್ರಹ್ಮಣ್ಯ ದೇವಾಯ ಗೋ ಬ್ರಾಹ್ಮಣ ಹಿತಾಯ ಚ ।ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋನಮಃ ॥'' ಬ್ರಹ್ಮಣಾ ಪ್ರತಿಪಾದ್ಯೋ ಬ್ರಹ್ಮಣ್ಯಃ। ಬ್ರಹ್ಮಣಾ ವೇದೇನ ಮಂತ್ರೇಣ ವಾ ಪ್ರತಿಪಾದ್ಯೋ ಬ್ರಹ್ಮಣ್ಯ ಇತ್ಯನೇನ ಸಕಲ ಮಂತ್ರಪ್ರತಿಪಾದ್ಯತ್ವೇನ ಅಧಿಕೃತತ್ವಂ। ಗೋಬ್ರಾಹ್ಮಣ ಹಿತಾಯ ಚೇತ್ಯನೇನ ವಿಶಿಷ್ಟತ್ವಂ। ವಿಶಿಷ್ಟೈರೇವ ಗೋಬ್ರಾಹ್ಮಣ ಹಿತತ್ವಾತ್ । ಜಗದ್ಧಿತಾಯೇತ್ಯನೇನ ಇಷ್ಟತ್ವಂ । ಕೃಷ್ಣಾಯೇತಿ ವಿಶೇಷ್ಯೋಕ್ತಿಃ । ಗೋವಿಂದನಾಮಾರ್ಥ ಪರ್ಯಾಲೋಚನಯಾಪ್ಯಯಮರ್ಥೋ ಲಭ್ಯತ ಇತಿ ಸೂಚಯಿತುಂ ಗೋವಿಂದಾಯೇತಿ। ಗೋಭಿರ್ವೇದವಾಕ್ಯೈಃ ವಿಂದತ ಇತಿ ಗೋವಿಂದಃ। ಗೋಪಾಲಕತ್ವೇನ ವಿಂದತ ಇತಿ ವಾ ಗೋಪ್ರತಿಪಾದ್ಯತ್ವಂ ಗೋಹಿತತ್ವಂ। ಗೋಭಿಃ ದಿಗ್ಭಿಃ ತಸ್ಯ ಜನ್ಯೈರ್ವಿಂದತ ಇತಿ ಸರ್ವಹಿತತ್ವಂ ಚೋಕ್ತಂ । ''ಬ್ರಹ್ಮಣ್ಯೋ ದೇವಕೀ ಪುತ್ರೋಬ್ರಹ್ಮಣ್ಯೋ ಮಧುಸೂದನಃ ।ಬ್ರಹ್ಮಣ್ಯ ಪುಂಡರೀಕಾಕ್ಷೋ ಬ್ರಹ್ಮಣ್ಯೋ ವಿಷ್ಣುರಚ್ಯುತಃ ॥'' ''ಕ್ಷೀರೇಣ ಸ್ನಾಪಿತೇ ದೇವಿ ಚಂದನೇನ ವಿಲೇಪಿತೇ । ಬಿಲ್ವಪತ್ರಾರ್ಚಿತೇ ದೇವಿ ಶ್ರೀ ದುರ್ಗೇಽಹಂ ಶರಣಂ ಗತಃ॥ಶ್ರೀ ದುರ್ಗೇಽಹಂ ಶರಣಾಗಚ್ಛತ್ಯೋಂ ನಮೋ ನಮಃ॥'' ಇತಿ ಶ್ಲೋಕದ್ವಯಂ ಚ ಕೇಚನ ಋಗ್ವೇದಿನಃ ಪಠಂತಿ । ಶ್ಲೋಕದ್ವಯೇಪಿ ನಮ್ಯತೋಪಪಾದಕ ಗುಣಪ್ರತಿಪಾದಕಂ ॥ ಬ್ರಹ್ಮಣ್ಯೋ ಮಂತ್ರ ಪ್ರತಿಪಾದ್ಯಃ । ದೇವಕೀಪುತ್ರಃ ಬ್ರಹ್ಮಣ್ಯಃ ಸ್ವಾಧ್ಯಾಯಪ್ರತಿಪಾದ್ಯಃ। ಮಧುಸೂಧನಃ ಬ್ರಹ್ಮಣ್ಯೋ ಯಜ್ಞೇಷು ಪೂಜ್ಯಃ ಪುಂಡರೀಕಾಕ್ಷಃ। ಬ್ರಹ್ಮಣ್ಯಃ ಮೋಕ್ಷದಾತಾ । ಶ್ರೀವಿಷ್ಣುರಚ್ಯುತ ಇತ್ಯನ್ವಯಃ । ಬ್ರಹ್ಮಶಬ್ದಸ್ಯಾನೇಕಾರ್ಥತ್ವ ಪೂರ್ವೋಕ್ತಾಭಿಧಾನಸಿದ್ಧಂ । ಕ್ಷೀರೇಣ ಸ್ನಾಪಿತೇತ್ಯನೇನ ಕ್ಷೀರಾದಿ ಪಂಚಾಮೃತಸ್ನಾನಾದ್ಯರ್ಚತ್ವೋಕ್ತೇ ದುರ್ಗಾನಾಮಕ ಶ್ರೀಹರೇಃ ಶಿಷ್ಟತ್ವಮುಕ್ತಂ।

**ಶ್ರೀಗಾಯತ್ರೀಕ್ಷಮಾಪಣಂ ; ಉದ್ವಾಸನಂ**

ಶ್ರೀ ಉತ್ತಮ ಇತಿ ಗಾಯತ್ರೀ ಉದ್ವಾಸನ ಮಂತ್ರಸ್ಯ ಇತ್ಯಸ್ಯ ವಾಮದೇವ ಋಷಿಃ ಗಾಯತ್ರೀ ದೇವತಾ। ಗಾಯತ್ರೀ ಉದ್ವಾಸನೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್**ಹರಿಃ ಓಂ॥ ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತ ಮೂರ್ಧನಿ ।**

**ಬ್ರಾಹ್ಮಣೇಭ್ಯೋಽಭ್ಯನುಜ್ಞಾತಾ ಗಚ್ಛ ದೇವೀ ಯಥಾ ಸುಖಮ್ ॥**

**ಶ್ರೀ ಗಚ್ಛದೇವೀ ಯಥಾ ಸುಖಮೋಂ ನಮೋ ನಮಃ ।**

**ಸ್ತುತೋ ಮಯಾ ವರದಾ ವೇದಮಾತಾ ಪ್ರಚೋದಯಂತೀ ಪವನೇ ದ್ವಿಜಾತಾ ।**

**ಆಯುಃ ಪೃಥಿವ್ಯಾಂ ಬ್ರಹ್ಮ ವರ್ಚಸಂ ಮಹ್ಯಂ ದತ್ವಾ ಪ್ರಜಾತುಂ ಬ್ರಹ್ಮಲೋಕಂ ॥**

(ಇದಕ್ಕೆ ಅಭಿವಾದನ ಮಂತ್ರವೆಂತಲೂ ಹೆಸರು) ಬ್ರಹ್ಮಲೋಕಂ= ವೈಕುಂಠವನ್ನು; ಪ್ರಜಾತುಂ=ನನಗೆ ಉಂಟುಮಾಡುವುದಕ್ಕೋಸ್ಕರ; ಮಯಾ= ನನ್ನಿಂದ; ಸ್ತುತಃ=ಸ್ತೋತ್ರಮಾಡಲ್ಪಟ್ಟ ; ವರದಾ=ಅಭೀಷ್ಟಗಳನ್ನು ಕೊಡತಕ್ಕ ; ಪವನಾ ಇತ್=ಪರಿಶುದ್ಧವಾದಂಥಾ ; ವಿಜಾತಾ=ಅನೇಕ ರೂಪಗಳುಳ್ಳ ; ಪ್ರಚೋದಯಂತೀ=ನನ್ನನ್ನು ಸತ್ಕರ್ಮಗಳಲ್ಲಿ ಪ್ರೇರಿಸುವ; ವೇದಮಾತಾ=ಗಾಯತ್ರಿಯು; ಪೃಥಿವ್ಯಾ=ಭೂಮಿಯಲ್ಲಿ; ಮಹ್ಯಂ= ನನಗೋಸ್ಕರ; ಆಯುಃ= ಆಯಸ್ಸನ್ನು; ದ್ರವಿಣಂ=ಧನವನ್ನು; ಬ್ರಹ್ಮವರ್ಚಸಂ=ಬ್ರಹ್ಮತೇಜಸ್ಸನ್ನು; ದತ್ವಾ=ಕೊಟ್ಟು( ತನ್ನ ಸ್ವಸ್ಥಾನವನ್ನು ಸೇರಲಿ.) (ಈ ಮಂತ್ರಕ್ಕೆ ಉದ್ವಾಸನಮಂತ್ರವೆಂದು ಹೆಸರು.) ದೇವೀ=ಕ್ರೀಡಾದಿಗುಣವಿಶಿಷ್ಟಳಾದ ಗಾಯತ್ರೀದೇವಿಯೇ ಅಥವಾ ಗಾಯತ್ರೀನಾಮಕ ಪರಮಾತ್ಮನೇ ; ಭೂಮ್ಯಾಂ=ಭೂಮಿಯಲ್ಲಿರತಕ್ಕ ; ಪರ್ವತಮೂರ್ಧನಿ=(ಮೇರುಪರ್ವತ ಅಥವಾ ವೆಂಕಟಗಿರಿ ಚಿತ್ರಕೂಟ, ರೈವತ,

ಗೋವರ್ಧನಾದಿ ಕ್ರೀಡಾಪರ್ವತಗಳ ಶಿಖರದಲ್ಲಿ) ಜಾತೇ=ಉತ್ಪನ್ನಳಾದ ಅಥವಾ ವ್ಯಕ್ತನಾದ(ನೀನು) ಉತ್ತಮೇ=ಶ್ರೇಷ್ಠವಾದ(ಮೇಲಿನ ಭಾಗದಲ್ಲಿರುವ) ; ಶಿಖರೇ=ಶಿಖರದಲ್ಲಿ; (ಶಿರೋಭಾಗದಲ್ಲಿ) (ಸ್ಥಾತುಂ=ಇರಲಿಕ್ಕೆ) ; ಬ್ರಾಹ್ಮಣೇಭ್ಯಃ= ಬ್ರಾಹ್ಮಣರದೆಸೆಯಿಂದ; ಅಭ್ಯನುಜ್ಞಾತಾ= ವಿಶೇಷವಾಗಿ ವಿಜ್ಞಾಪಿತನಾದವನಾಗಿ(ಕೇಳಿಕೊಳ್ಳಲ್ಪಟ್ಟವನಾಗಿ); ಯಥಾಸುಖಂ=(ನನ್ನ ಪ್ರಾರ್ಥನಾದಿಂದ)ಯಥೇಚ್ಛವಾಗಿ ; ಗಚ್ಛ=ಹೋಗು; ಯಥಾಸುಖಂ=ಯಥೇಚ್ಛವಾಗಿ; ಶ್ರಿ=ಸಂಪದ್ಯುಕ್ತವಾಗಿ; ಗಚ್ಛದೇವಿ=ಹೋಗತಕ್ಕಂಥಾ ದೇವತೆಗೆ ಅಥವಾ ದೇವರಿಗೆ; ನಮಃ=ನಮಸ್ಕಾರವು;

**ಶ್ರೀತಿಮ್ಮಣ್ಣಾರ್ಯರು:-ಅಥ ಕ್ಷಮಾಪಣಂ ॥** ಪೂರ್ವಂ ಆಯಾತು ವರದಾದೇವಿತ್ಯಾದಿನಾ ಸ್ವಸ್ಮಿನ್ ಗಾಯತ್ರ್ಯಾದೌ ಸಂಧ್ಯಾಸನ್ನಿಧಾನಾರ್ಥಂ ಆಗಮನಂ ಪ್ರಾರ್ಥಿತಂ । ತೇನ ದೇವ ಹೇಲನಂ ಮನ್ಯಮಾನಃ ಜಾಪಕಃ ಉಪಸಂಹಾರ ವ್ಯಾಜೇನ ಕ್ಷಮಾಪಯತೇ । ಉತ್ತಮೇ ಶಿಖರ ಇತ್ಯಾದಿನಾ । ಭೂಮ್ಯಾಂ ಸ್ಥಿತೇ ಉತ್ತಮೇ ಪುಣ್ಯಕ್ಷೇತ್ರೇ ಕಾಶಿರಾಮೇಶ್ವರಪ್ರಯಾಗಾದೌ ಪರ್ವತಮೂರ್ಧನಿ ವಿದ್ಯಮಾನೇ ಶಿಖರೇ ಶ್ರೀವೆಂಕಟಾಚಲ ಹಸ್ತಿ ಭದ್ರಾಚಲಾದಿ ಗಿರಿಶಿಖರೇ ಜಾತೇ ಭಕ್ತಪೂಜಾಗ್ರಹಣಾಯ ಪ್ರಾದುರ್ಭೂತೇ ಪುಣ್ಯಕ್ಷೇತ್ರಾದಾಗತ್ಯ ಜಾಪಕ ಸನ್ನಿಧಿಂ ಪ್ರಾಪ್ಯಸ್ಥಿತೇ ಪುನಃ ಬ್ರಾಹ್ಮಣೇಭ್ಯೋಽನುಜ್ಞಾತಾ । ಬ್ರಾಹ್ಮಣೈರ್ವಿಜ್ಞಾಪಿತಾ ಯಥಾ ಸುಖಂ ಸುಖಮನತಿಕ್ರಮ್ಯ ಸುಖೇನೇತಿ ಯಾವತ್ । ಹೇ ದೇವಿ ಸಂಧ್ಯೇ ತತ್ಪುಣ್ಯಕ್ಷೇತ್ರಂ ಪ್ರತಿಗಚ್ಛೇತಿ ಪ್ರಾರ್ಥನಂ । ಅಥವಾ ಭೂಮ್ಯಾ ಉಪಲಕ್ಷಣಮೇತತ್ । ಭೂಮ್ಯಾದಿ ಸ್ಥಿತಮೇರ್ವಾದ್ಯ ವಿವಕ್ಷಯಾ ಉತ್ತಮೇ ಶಿಖರೇ ಸರ್ವಲೋಕಶಿಖಾಸು ನಮತ ಇತಿ ಶಿಖರಂ । ಹ್ರಸ್ವಃ ಛಾಂದಸಃ ॥ ಶಿಖರೇ ಧಾಮತ್ರಯೇ ಜಾತೇ ಪ್ರಾದುರ್ಭೂತೇ ತೇ ಪರ್ವತಾಃ ಪರಾವನಾತ್ ಪರ್ವತನಾಮಧೇಯಾಃ ಶಿವಶೇಷಗರುಡಾಃ ತೇಷಾಂ ಮೂರ್ಧನಿ ಶಿಖರಸ್ಥಾನೀಯೇ ಶ್ರೇಷ್ಠ ಇತಿ ಯಾವತ್ । ತದುಕ್ತಂ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ 'ಪರಾವನಾತ್ ಪರ್ವತನಾಮಧೇಯಾನ್ ಶಿವಂ ಶೇಷಂ ಗರುಡಂ ಚಾಪೀ'ತಿ । ಪರ್ವತಮೂರ್ಧ್ನಿ ಶ್ರೀಮುಖ್ಯಪ್ರಾಣಜಾತೇ ಪ್ರಾದುರ್ಭೂತೇ ಶ್ರೀಮುಖ್ಯಪ್ರಾಣಸ್ಥಿತ ಇತಿ ಯಾವತ್ । ಭಗವದಾವಾಸಸ್ಥಾನೇಷು ವಾಯೋರ್ಮುಖ್ಯತ್ವಾತ್ । ತದುಕ್ತಂ ಶ್ರೀವತ್ಸಾಂಕಾಧಿವಾಸೋಚಿತತರ ಸರಲೇತಿ । ವೈಕುಂಠಾದಿಭ್ಯಃ ಶ್ರೀಮುಖ್ಯಪ್ರಾಣಾಂತ-ರ್ಗತಃ ಆಯಾತ್ವಿತಿ ಪ್ರಾರ್ಥಿತಃ ।**ಪುನರುಪಸಂಹ್ರಿಯತೇ** - ಪ್ರತಿಮಾದಿಸ್ಥಿತ ಶ್ರೀಹರ್ಯುಪಸಂಹಾರವತ್ । ಬ್ರಾಹ್ಮಣೇಭ್ಯಃ ಬ್ರಾಹ್ಮಣೈಃ ಬ್ರಾಹ್ಮಣೇಭ್ಯಃ ಅಭಿತದಾಗತಂ । ಅನುಜ್ಞಾತಾ ಸಮ್ಯಕ್‌ಜ್ಞಾತಾ ಪುನಃ ಪುನಃ ವಿಜ್ಞಾಪಿತಾ । ಶಿಷ್ಟಂ ಪೂರ್ವವತ್ । ತಾಮೇವಂ ಸ್ತುವನ್ ಅಭೀಷ್ಟಂ ಪ್ರಾರ್ಥಯತೇ ॥ ಸ್ತುತೇತಿ ॥ ಮದ್ವಾಚಿಸ್ಥಿತಯಾ ಉಮಯಾ ಪಾರ್ವತ್ಯಾ ಸ್ತುತಾ । ಉಮಾವೈ ವಾಕ್‌ಸಮುದ್ದಿಷ್ಟಾ ಮನೋ ರುದ್ರ ಉದಾಹೃತಃ ಇತಿ ಭಾಷ್ಯೋಕ್ತೇಃ । ಬ್ರಹ್ಮಾದಿ ಕರ್ತೃಕ ಸ್ತವನೇ ಮಾ । ರಮಾ । ವರದಾ ಅಭೀಷ್ಟದಾ । ವೇದಮಾತಾ ಆಸತತ್ಯಗಮನ ಇತಿ ಧಾತೋಃ । ವೇದೋತ್ಪನ್ನ ಜ್ಞಾನಗೋಚರಾ ವೇದಾದಿ ವ್ಯಕ್ತಿ ಹೇತುತ್ವೇನ ವೇದಜನನೀ ಪವನೇ ಮುಖ್ಯಪ್ರಾಣಸ್ಥಿತಾ ದ್ವಿಜಾತಾ । ದ್ವಿಜಾ ತಾನ್ ಬ್ರಾಹ್ಮಣಾನ್ ಸ್ವೇಸ್ವೇಕರ್ಮಣಿ ಪ್ರಚೋದಯಂತಿ ಪ್ರೇರಯಂತೀತಿ ವಾ । ''ಯದಿದಂ ಕಿಂಚ ಜಗತ್ಸರ್ವಂ ಪ್ರಾಣ ಏಜತಿ ನಿಃಸೃತಮಿ''ತಿ ಕಾರಕೋಕ್ತೇಃ ಪವನೇ ಪಾವನ ಸಂಧ್ಯಾದಿ ಕರ್ಮಣಿ ದ್ವಿಜಾ ತಾನ್ ದ್ವಿತೀಯಾರ್ಥೇ ತಾಪ್ರತ್ಯಯಃ । ಪ್ರಚೋದಯಂತೀ ಸತೀ ಮಹ್ಯಂ ಮೇ ಪೃಥಿವೀಂ ಆಯುಃ ದ್ರವಿಣಂ ಬ್ರಹ್ಮವರ್ಚಸಂ ತೇಜಃ ಪ್ರಜಾತಂ ಬ್ರಹ್ಮಣಾ । ಲೋಕಂ ಪ್ರಕಾಶಂ ಜ್ಞಾನಮಿತಿ ಯಾವತ್ । ಪ್ರಭೂತ ಬ್ರಹ್ಮಾನಂದತ್ವಾತ್ ತತ್ರ ಬ್ರಹ್ಮಲೋಕಸಾಧನಂ ಆಯುಃ ದ್ರವಿಣಂ ದತ್ವಾ ಗಚ್ಛ ದೇವೀ ಯಥಾಸುಖಮಿತಿ ಪೂರ್ವೇಣಾನ್ವಯಃ।

**ಸರ್ವ ವೇದೇಷು ಯತ್ಪುಣ್ಯಂ ಸರ್ವ ತೀರ್ಥೇಷು ಯತ್ಫಲಂ ।**
**ತತ್ಫಲಂ ಸಮವಾಪ್ನೋತಿ ಸ್ತುತ್ವಾ ದೇವಂ ಜನಾರ್ದನಂ ॥**

ಸರ್ವವೇದೇಷು= ಸಮಸ್ತವೇದಗಳಲ್ಲಿ(ಅನಂತಾ ವೈ ವೇದಾಃ ಎಂದು ಪ್ರಮಾಣವಿದೆ.) (ಸಮಸ್ತವೇದಗಳನ್ನು ಪಠನ ಮಾಡಿದಲ್ಲಿ) ಯತ್ಪುಣ್ಯಂ=ಬರತಕ್ಕಂಥಾ ಯಾವಪುಣ್ಯವು ; ಸರ್ವತೀರ್ಥೇಷು=ಸಮಸ್ತತೀರ್ಥಗಳಲ್ಲಿ(ಸಮಸ್ತತೀರ್ಥಸ್ನಾನಗಳಿಂದ ಬರತಕ್ಕ) ಯತ್ಫಲಂ= ಯಾವ ಫಲವು ; ದೇವಂ=ಕ್ರೀಡಾದಿಗುಣವಿಶಿಷ್ಟನಾದ ; ಜನಾರ್ದನಂ=ದುಷ್ಟಜನಮರ್ದಕನಾದ ಪರಮಾತ್ಮನನ್ನು; ಸ್ತುತ್ವಾ=ಸ್ತೋತ್ರವನ್ನು ಮಾಡಿ, (ಆ ಸ್ತೋತ್ರದಿಂದ ಬರತಕ್ಕ ); ತತ್ಫಲಂ=ಆ ಫಲವನ್ನು; ಪುರುಷಃ=ಮನುಷ್ಯನು; ಆಪ್ನೋತಿ= ಹೊಂದುತ್ತಾನೆ.

**ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತು ಸಾಗರಂ ।**

**ಸರ್ವದೇವ ನಮಸ್ಕಾರಃ ಶ್ರೀ ಕೇಶವಂ ಪ್ರತಿಗಚ್ಛತು॥**

**ಶ್ರೀ ಕೇಶವಂ ಪ್ರತಿಗಚ್ಛತ್ಯೋಂ ನಮೋ ನಮಃ ।**

ಆಕಾಶಾತ್=ಆಕಾಶದಿಂದ; ಪತಿತಂ=ಬಿದ್ದಂಥಾ; ತೋಯಂ= ಉದಕವು; ಸಾಗರಂ=ಸಮುದ್ರವನ್ನು ಕುರಿತು; ಯಥಾ=ಯಾವರೀತಿಯಿಂದ; ಗಚ್ಛತಿ=ಹೋಗಿ ಸೇರುತ್ತದೋ; (ತದ್ವತ್) ಸರ್ವದೇವನಮಸ್ಕಾರಃ= ಸಮಸ್ತದೇವತಾಗಳಿಗೆ ಮಾಡಿದ ನಮಸ್ಕಾರವು; ಕೇಶವಂ ಪ್ರತಿ= ಬ್ರಹ್ಮ ರುದ್ರ ನಿಯಾಮಕನಾದ ಪರಮಾತ್ಮನಿಗೋಸ್ಕರ; ಗಚ್ಛತಿ= ಹೋಗಿ ಸೇರುತ್ತದೆ. ಅಂಥಹಾ ಪರಮಾತ್ಮನಿಗೋಸ್ಕರ ನಮಸ್ಕಾರವು.

**ವಾಸನಾತ್ ವಾಸುದೇವೋಸಿ ವಾಸಿತಂತೇ ಜಗತ್ರಯಂ । ಸರ್ವಭೂತ ನಿವಾಸೋಸಿ ವಾಸುದೇವ ನಮೋಸ್ತುತೇ ॥**

ಜಗತ್ರಯಂ= ಮೂರುಲೋಕವು; ತೇ=ನಿನ್ನಿಂದ; ವಾಸಿತಂ=ವಾಸಸ್ಥಾನವಾಗಿ ಮಾಡಲ್ಪಟ್ಟಿತೋ; (ಮತ್ತು) ನಿನ್ನಲ್ಲಿ ವಾಸಮಾಡಿಸಿಕೊಳ್ಳಲ್ಪಟ್ಟಿತೋ, ವಾಸನಾತ್=(ಜಗತ್ತು ನಿನ್ನಲ್ಲಿ ) ವಾಸಮಾಡಿಕೊಂಡು ಇರೋಣದರಿಂದಲೂ, ನಿನಗೆ ವಾಸಸ್ಥಾನವಾಗಿ ಇರೋಣದರಿಂದಲೂ; ವಾಸುದೇವೋಸಿ=ವಾಸುದೇವಶಬ್ದಿತನಾಗಿದ್ದೀಯೇ। ಸರ್ವಭೂತ ನಿವಾಸೋಸಿ= ಸರ್ವಪ್ರಾಣೀಗಳೇಗೂ ಆಶ್ರಯನಾಗಿಯೂ ಅಂತರ್ಯಾಮಿ ಯಾಗಿಯೂ; ಅಸಿ=ಇದ್ದೀಯೋ (ಆ ಕಾರಣದಿಂದಲೂ)ವಾಸುದೇವ=ವಾಸುದೇವಶಬ್ದವಾಚ್ಯನಾದ ಪರಮಾತ್ಮನೇ; ತೇ=ನಿನಗೋಸ್ಕರ; ನಮಃ=ನಮಸ್ಕಾರವು; ಅಸ್ತು=ಇರಲಿ.

**ನಮೋಸ್ತ್ವನಂತಾಯ ಸಹಸ್ರಮೂರ್ತಯೇ ಸಹಸ್ರ ಪಾದಾಕ್ಷಿಶಿರೋರುಬಾಹವೇ।**

**ಸಹಸ್ರ ನಾಮ್ನೇ ಪುರುಷಾಯ ಶಾಶ್ವತೇ ಸಹಸ್ರಕೋಟಿ ಯುಗಧಾರಿಣೇ ನಮಃ॥**

ಅನಂತಾಯ= ದೇಶತಃ ಕಾಲತಃ ಗುಣತಃ ಅಂತವಿಲ್ಲದವನಾದ; ಸಹಸ್ರ=ಅಸಂಖ್ಯಾಕಗಳಾದ ; ಮೂರ್ತಯೇ=ಅವತಾರ ರೂಪ-ಗಳುಳ್ಳಂಥಾ, ಸಹಸ್ರ=ಅಸಂಖ್ಯಾಕಗಳಾದ; ಪಾದಾ=ಪಾದ, ಅಕ್ಷಿ=ನೇತ್ರಗಳು; ಶಿರಃ=ಶಿರಸ್ಸುಗಳು; ಊರೂ=ತೊಡೆಗಳು; ಬಾಹವೇ=ಭುಜಗಳುಳ್ಳಂಥಾ; ಸಹಸ್ರನಾಮ್ನೇ= ಅಸಂಖ್ಯಾಕಗಳಾದ(ಹೆಸರು) ನಾಮಗಳುಳ್ಳಂಥಾ; ಪುರುಷಾಯ-ಪುರುಷಶಬ್ದವಾಚ್ಯನಾದ ಅಥವಾ ಪುರುಷಸೂಕ್ತ ಪ್ರತಿಪಾದ್ಯನಾದ ;ಶಾಶ್ವತೇ= ಆದಿಮಧ್ಯಾಂತ್ಯಗಳಿಲ್ಲದವನಾದ; ಸಹಸ್ರ=ಅಸಂಖ್ಯಾಕಗಳಾದ; ಕೋಟಿಯುಗ=(ಕಾಲ ಅನಾದಿ ಆದಕಡೆಯಿಂದ) ಸಹಸ್ರಕೋಟಿಯುಗಗಳನ್ನು ಧಾರಣಮಾಡಿದವನಾದ; ಮತ್ತು ಸಹಸ್ರಕೋಟಿ=ಸಹಸ್ರಅರಗಳುಳ್ಳಂಥಾ ಚಕ್ರಗಳ; ಯುಗ=ಎರಡರನ್ನು ಧಾರಣೆ ಮಾಡಿದವನಾದಂಥಾ (ಎರಡುಚಕ್ರಗಳನ್ನು ಧಾರಣೆ ಮಾಡಿದ ದೇವರ ಆಂಧ್ರಪ್ರದೇಶ ಕರ್ನೂಲುಜಿಲ್ಲಾ ಮಾರಿಕಾಪುರ ಶ್ರೀಚನ್ನಕೇಶವಅವತಾರ ದಿಂದ ಇದ್ದಾರೆ. ಅವರು ಸಂಧ್ಯಾವಂದನಪ್ರತಿಪಾದ್ಯರೆಂದು ಅಲ್ಲಿನ ಸ್ಥಳಪುರಾಣ ಹೇಳುತ್ತದೆ.)ಪರಮಾತ್ಮನಿಗೆ ನಮಸ್ಕಾರಗಳು.

**ಶ್ರೀತಿಮ್ಮಣ್ಣಾರ್ಯರು:- ಗಚ್ಛೇತ್ಯುಕ್ತ್ವಾ ಆಯಾತ್ವಿತ್ಯುಕ್ತ್ವಾ** ಚ ಗಮನಾಗಮನತ್ವೇನ ಪ್ರಾಪ್ತಪರಿಚ್ಛಿನ್ನತ್ವಂ ಅಗ್ನಿರ್ಮುಖ ಮಿತ್ಯಾದಿ ನಾನಾವಯವತ್ವೇನ ಪ್ರಾಪ್ತಾ ನಿತ್ಯತ್ವಂ ಷಟ್‌ಕುಕ್ಷಿ ಪಂಚಶೀರ್ಷಾದ್ಯನುಪಪತ್ತಿಂ ಚ ನಿರಾಕುರ್ವನ್ ಅಪರಿಚ್ಛಿನ್ನತ್ವ ಶಶ್ವದೇಕಪ್ರಕಾರತ್ವಾನಂತಾವಯತ್ವ ಪ್ರತಿಪಾದಕ ಪ್ರಮಾಣಮಾಹ ॥ ನಮ ಇತಿ ॥ ನಮೋಸ್ತ್ವನಂತಾಯ ದೇಶತಃ ಕಾಲತಃ ಗುಣತಃ ಅಂತರಹಿತಾಯ ಸಹಸ್ರಮೂರ್ತಯೇ ಅನಂತವಿಗ್ರಹಾಯ । ಸಹಸ್ರಾಣಿ ಪಾದಾಕ್ಷಿಶಿರೋರುಬಾಹೂನಿ ಯಸ್ಯ ತಸ್ಮೈ । ಶಿರಶಬ್ದೋ ಕಾರಾಂತೋಸ್ತಿ। ಗಯಾಶಿರ ಇತಿ ಪ್ರಯೋಗಾತ್ । ಸಹಸ್ರನಾಮ್ನೇ ವಿಶ್ವಾದಿ ನಾಮ್ನೇ ಅನಂತನಾಮ್ನೇ ಇತಿ ವಾ । ಪುರುಷಾಯ ಪೂರ್ಣಷಡ್ಗುಣಾಯ ಸರ್ವ ಪುರಿಶಾಯ ಪುರುಷಸೂಕ್ತಪ್ರತಿಪಾದ್ಯಾಯ । ಆದ್ಯಂ ತು ಮಹತಃ ಸ್ರಷ್ಟೃ ದ್ವಿತೀಯಂತ್ವಂಡಸ್ಥಿತಂ। ತೃತೀಯಂ ಪ್ರಾಣಿನಾಂ ದೇಹ ಏತದ್ ಜ್ಞಾತ್ವಾ ವಿಮುಚ್ಯತ ಇತ್ಯುಕ್ತತ್ವಾತ್। ಪುರುಷಜ್ಞಾನಮಾವಶ್ಯಕಂ। ಶಾಶ್ವತೇ। ತಕಾರಾಂತೋಯಂ। ಶಶ್ವದೇಕಪ್ರಕಾರಾಯ। ಶಾಶ್ವತೇ ಕಾಲೇ ಸ್ಥಿತಾಯೇತಿ ಶೇಷಃ। ಏತತ್ಪಕ್ಷೇ ಅಕಾರಾಂತತ್ವಂ। ತದುಪಪಾದಕಂ ಸಹಸ್ರಕೋಟಿಯುಗಧಾರಿಣ ಇತಿ । ಸಹಸ್ರಕೋಟಿಸಂಖ್ಯಾಕ ಮಹಾಯುಗಧಾರಿಣೇ । ಬ್ರಹ್ಮಾದೀನಸ್ಯ ಅಹೋರಾತ್ರಾವಚ್ಛಿನ್ನಸ್ಯ ದ್ವಿಸಹಸ್ರ ಮಹಾಯುಗಸಂಖ್ಯಾ । ಏವಂ ತದ್ವರ್ಷಸ್ಯ ಸಪ್ತಕೋಟಿ ವಿಂಶತಿಲಕ್ಷಣಾನಿ ಭವಂತಿ । ಏವಮನೇಕ ಬ್ರಹ್ಮಸಂಖ್ಯಾ ಭವತಿ। ತಾವತ್ ಬ್ರಹ್ಮಾಂಡಕಾಲಾವಚ್ಛಿನ್ನ ಬ್ರಹ್ಮಾದಿ ಸರ್ಜಕತ್ವೇನ ವಾ ಸಹಸ್ರಶಬ್ದಸ್ಯ ಅನಂತವಾಚಿತ್ವೇನ ಅನಂತಕೋಟಿಯುಗಧಾರಿತ್ವೇನ ವಾ । ನಿಖಿಲಕಾಲಧಾರಿತ್ವೇನ ಕಾಲಾಖ್ಯಸ್ಯ ಕಾಲೋಸ್ಮಿ ಲೋಕಕ್ಷಯಕೃತ್ಪ್ರವೃತ್ತ ಇತಿ ತಸ್ಯೈವ ವಿಶ್ವರೂಪತ್ವೇನಾರ್ಜುನ ಉಪದೇಶಕ ಶ್ರೀಕೃಷ್ಣತ್ವೇನ ಪ್ರತಿಪಾದನಾತ್ ಸರ್ವಮುಪಪನ್ನಂ। ನಮೋ ನಮ ಇತ್ಯಾದಿನಾ ವಾ ದ್ವಿರುಕ್ತಿಃ। ಅಥವಾ ಕೋಟಿ ಶಬ್ದಃ ಪ್ರಾಂತವಾಚಕೋಽರಪರ್ಯಾಯಃ। ಸಹಸ್ರಕೋಟಿಂ ಸಹಸ್ರಾರಂ ಚಕ್ರಂ ತಸ್ಯ ಯುಗಂ ಚಕ್ರದ್ವಯಂ। ರೇಖಾರೂಪಮಾಯುಧರೂಪಂ ಚ। ಚಕ್ರಾಂಕಿತೇನ ದರದೇನೇತ್ಯಾದೌ ಅಭಿಹಿತತ್ವಾತ್। ಚಕ್ರದ್ವಯಧಾರಿಣೇ।

ಸಹಸ್ರಕೋಟಿಯುಗಂ ಪ್ರಯೋಗತ್ವಂ ಚಕ್ರಂ ಸರ್ವದಾಕರಗಂ ಚೇತಿ ಚಕ್ರದ್ವಯಂ ವಾ। ತದುಕ್ತಂ ಮಾರ್ಕಂಡೇಯ ಪುರಾಣೇ ತಾರಕಾಪುರೀ ಮಾಹಾತ್ಮ್ಯೇ॥ 'ಸದಾ ಕರಗತಂ ಚೈಕಂ ಪ್ರಯೋಗಾರ್ಥಂ ತಥಾಪರಂ। ಚಕ್ರದ್ವಯಂ ತು ಬಿಭ್ರಾಣಂ ಶ್ರೀಪತಿಂ ಕೇಶವಂ ಭಜ' ಇತಿ॥ ಅಥವಾ ಸಹಸ್ರಕೋಟಿ ಯುಕ್ ಸಹಸ್ರಾರ ಯುಕ್ತಂ। ಅಧಂ ಮಂಗಲ ರೂಪಂ ಅರಿಚಕ್ರಂ ಯಸ್ಯ ಸಃ। ತಸ್ಮೈ ಸಹಸ್ರಕೋಟಿಯುಗಧಾರಿಣೇ। ನನು ದಿಗೀಶಾದಿದೇವಋಷ್ಯಾದಿವಂದನಸ್ಯಾಪಿ ಕೃತತ್ವೇನ ಕಥಮೇತತ್ಸಂಧ್ಯಾರೂಪ ಶ್ರೀಹರಿರೇವ ವಂದನಮಿತ್ಯಾಶಂಕ್ಯ ಶ್ರೀಹರಿವಂದನಮೇವೇತಿ ಭಾವೇನ ತತ್ರ ಪ್ರಮಾಣಮಾಹ । **ಆಕಾಶಾದಿತಿ** । ಸ್ಪಷ್ಟಾರ್ಥಂ । ನನು ಸರ್ವವೇದಾಧ್ಯಯನ ತೀರ್ಥಾಪೇಕ್ಷಯಾ ಸಂಧ್ಯಾನಾಮಕ ಶ್ರೀಹರಿವಂದನಸ್ಯಾವಶ್ಯಕತ್ವಮಿತ್ಯತಃ ತತ್ಫಲಸ್ಯ ಅತ್ರಾಂತರ್ಭಾವಾದಿತಿ ಭಾವೇನ ತತ್ರಪ್ರಮಾಣಮಾಹ ॥ **ಸರ್ವವೇದೇಷ್ವಿತಿ** । ಸರ್ವವೇದಪಠನೇನ ಸರ್ವಯಜ್ಞಫಲಂ ಭವತಿ ॥ ''ಯಂ ಯಂ ಕ್ರತು-ಮಧೀತೇ ತೇನ ತೇನಾಸ್ಯೇಷ್ಟಂ ಭವತೀ'ತಿ ಶ್ರುತೇಃ । ಸಂಧ್ಯಾವಂದನ ಜನಾರ್ದನಸ್ತುತ್ಯೋರೇಕಾರ್ಥತ್ವಾತ್ । ಅಸ್ಯಶ್ಲೋಕಸ್ಯ ಪ್ರಕೃತೋಪಯೋಗಃ । ಏತದಪಿ ಸ್ಪಷ್ಟಾರ್ಥಂ । ಸರ್ವವ್ಯಾಪಿತ್ವೇನ ಸಫಲದಾನಸಾಮರ್ಥ್ಯಂ ಜ್ಞಾಪಯಿತುಂ ಫಲಕೀರ್ತ್ಯಾ ಚ ಸಮಾಪನಮಸಹಮಾನಃ ತನ್ನಾಮಾನಿರುಕ್ತ್ಯೈವ ಸರ್ವವ್ಯಾಪಿತ್ವ ಪ್ರತಿಪಾದಕ ಪ್ರಮಾಣಂ ವದನ್ ಪ್ರಣಮತಿ । **ವಾಸನಾದಿತಿ** । ತೇವಾಸುದೇವಸ್ಯ ವಾಸನಾಜ್ಜಗತ್ರಯಂ ವಾಸಿತಂ ನಿವಾಸಸ್ಥಾನಮಾಸೀತ್ । ಹೇ ಶ್ರೀವಾಸುದೇವ ಸರ್ವಭೂತಾನಾಂ ನಿವಾಸಃ ಆಶ್ರಯಃ ಅಸಿ। ಏತಾದೃಶಾಯ ತೇ ನಮಃ ಇತಿ। ವಸತ್ಯಸ್ಮಿನ್ ಜಗದಿತಿ ವಾ। ವಸತಿ ಜಗತಿ ಸ್ವಯಮಿತಿ ವಾ ವಾಸುಃ ವಾಸುಶ್ಚಾಸೌ ದೇವಶ್ಚೇತಿ ವಾಸುದೇವಃ । ಶ್ರಿಯಾಯುಕ್ತೋ ವಾಸುದೇವಃ ಶ್ರೀವಾಸುದೇವಃ । ಸರ್ವಜಗತ್ಪಿತೃ ಸಂಧ್ಯಾನಾಮಕ ಹರಿವಂದನಾನಂತರಂ ಲೋಕಮಾತೃ ಲಕ್ಷ್ಮೀರೂಪ ಭೂವಂದನಮಾವಶ್ಯಕಂ।

**ಅಭಿವಾದನ(ನಮಸ್ಕಾರಮಾಡುವುದು)**

**ಓಂ ಭದ್ರನ್ನೋ ಅಭಿವಾದಯೇ । ಓಂ ಶಾಂತಿಃ ಶಾಂತಿಃ ಶಾಂತಿಃ ॥ ಸರ್ವಾರಿಷ್ಟ ಶಾಂತಿರಸ್ತು।ಚತುಃಸ್ಸಾಗರ ಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು ।**

**((''ಆಂಗೀರಸ-ಬಾರ್ಹಸ್ಪತ್ಯ-ಭಾರದ್ವಾಜತ್ರಯಾರ್ಷೇಯ ಪ್ರವರಾನ್ವಿತ ಭಾರದ್ವಾಜಗೋತ್ರೋದ್ಭವಸ್ಯ ಆಶ್ವಲಾಯನ ಸೂತ್ರಸ್ಯ ಋಕ್ ಶಾಖಾಧ್ಯಾಯೀ ಸುಬ್ಬನರಸಿಂಹ ಶರ್ಮನ್ ಅಹಂಭೋ ಅಭಿವಾದಯೇ''))**

***ಇದು ಮಾದರಿ ಮಾತ್ರ: ಸಂಧ್ಯಾವಂದನೆ ಮಾಡುವವರು ಅವರವರ ಗೋತ್ರಗಳನ್ನು ಹೇಳಿಕೊಂಡು ನಮಸ್ಕಾರ ಮಾಡುವುದು.***

ಸಮಸ್ತಸನ್ಮಂಗಲವಾಪ್ತಿರಸ್ತು ॥

(ಇಲ್ಲಿ ಬಲಗೈಯಿಂದ ಬಲಗಿವಿಯನ್ನು, ಎಡಗೈಯಿಂದ ಎಡಗಿವಿಯನ್ನು ಮುಟ್ಟಿಕೊಂಡು, ಅವರವರ ಗೋತ್ರ ಮತ್ತು ನಾಮೋಚ್ಚಾರಣೆಯನ್ನು ಮಾಡಿ ದೇವರಿಗೆ, ಪ್ರಾಣದೇವರಿಗೆ, ದಿಗ್ದೇವತೆಗಳಿಗೆ, ಅವರ ಭೃತ್ಯರು ನಮಗಿಂತ ಉತ್ತಮರಾದ ವೈಷ್ಣವರಿಗೆ ನಮನವನ್ನು ಸಲ್ಲಿಸಿವುದು)

**ಅರ್ಥ:-** ನಃ=ನಮ್ಮಗಳಿಗೆ; ಭದ್ರಂ=ಕ್ಷೇಮವನ್ನು; ಅಭಿವಾದಯೇ=ಪ್ರಾರ್ಥನೆ ಮಾಡುತ್ತೇನೆ.

ಶಾಂತಿಃ=ಕ್ಷೇಮವು ಆಗಲಿ; ಶಾಂತಿಃ=ಸಂಪತ್ತು ಬರಲಿ; ಸರ್ವಾರಿಷ್ಟಶಾಂತಿಃ= ಸಮಸ್ತವಾದ ಪಾಪಗಳಿಗೆ ಶಾಂತಿಯು(ನಾಶವು) ಆಗಲಿ; ಚತುಸ್ಸಾಗರ ಪರ್ಯಂತಂ= ನಾಲ್ಕುಸಮುದ್ರಗಳ ಅವಧಿಯವರೆಗೆ; ಗೋಬ್ರಾಹ್ಮಣೇಭ್ಯಃ=ಗೋವುಗಳಿಗೆ, ಬ್ರಾಹ್ಮಣರಿಗೆ(ಬ್ರಹ್ಮಜ್ಞಾನಿಗಳಿಗೆ) ಶುಭಂ=ಕ್ಷೇಮವು; ಭವತು=ಆಗಲಿ; ಅಹಂ=ನಾನು; ಭೋ=ನಿಮ್ಮಗಳಿಗೋಸ್ಕರ; ಅಭಿವಾದಯೇ=ನಮಸ್ಕಾರವನ್ನು ಮಾಡುತ್ತೇನೆ.

ಈಪ್ರಕಾರ ಅಭಿವಾದನಮಂತ್ರದಿಂದ ಸ್ವಗೋತ್ರಪ್ರವರ ಸಹಿತ ತನ್ನ ನಾಮಧೇಯ ಉಚ್ಚಾರಮಾಡಿ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಸಮೀಪದಲ್ಲಿ ಬ್ರಾಹ್ಮಣರು ಇದ್ದರೆ , ಅವರುಗಳಿಗೆ ನಮಸ್ಕಾರ ಮಾಡತಕ್ಕದ್ದು. ಇಲ್ಲದಿದ್ದರೆ ಸರ್ವಾಂತರ್ಯಾಮಿನ್ ಸರ್ವನಿಯಾಮಕ ಶ್ರೀಮಧ್ವಾಂತರ್ಯಾಮಿನ್ ಪರಮಾತ್ಮನನ್ನು ಸ್ಮರಿಸಿ ಸೂರ್ಯನ ಎದುರಿಗೆ ನಮಸ್ಕಾರ ಮಾಡತಕ್ಕದ್ದು.

ಆಗ್ನೇಯಪುರಾಣದಲ್ಲಿ 'ಅಭಿವಾದನಮಂತ್ರೇಣ । ಸ್ವಗೋತ್ರಂ ನಾಮಕರ್ಮಚ । ಉಕ್ತ್ವಾಭಿವಾದಯೇತ್ಸೂರ್ಯಮಸ್ಮಿಭೋ ಇತಿ

ಸಂಸ್ಮರೇತ್ ।' ಎಂದು ಪ್ರಮಾಣವಿದೆ.

**ನಮಸ್ಕಾರವನ್ನು ಸಮಸ್ತರಿಗೂ ಮಾಡಬಹುದಾ ಹೇಗೆ?**

'ವಿನಾ ಪುತ್ರಂ ವಿನಾಶಿಷ್ಯಂ । ಬ್ರಾಹ್ಮಣಾನಭಿವಾದಯೇತ್ । ಸನ್ಮಂತ್ರವಿದ್ಯೋಪದೇಷ್ಟಾ।ಜ್ಞಾನವೃದ್ಧೋಗುರುಸ್ಮೃತಃ। ಪಿತಾಮಾತಾಚಾಗ್ರಜೋಪಿ। ಗುರೂನೇತಾನ್ನಮೇತ್ಸದಾ।' ಎಂದು ಪ್ರಮಾಣವಿರುವುದರಿಂದ, ಪುತ್ರನನ್ನು ಮತ್ತು ಶಿಷ್ಯನನ್ನು ಬಿಟ್ಟು ಮಿಕ್ಕ ಬ್ರಾಹ್ಮಣರಿಗೆ ನಮಸ್ಕಾರ ಮಾಡತಕ್ಕದ್ದು. ಸಚ್ಛಾಸ್ತ್ರ ಉಪದೇಶಮಾಡಿದವ, ಜ್ಞಾನಾಧಿಕ್ಯವುಳ್ಳವ, ತಂದೆ-ತಾಯಿ, ಅಣ್ಣ ಇವರೆಲ್ಲರಿಗೂ ಗುರುಗಳೆಂದು ಹೆಸರು. ಅವರಿಗೆ ನಮಸ್ಕಾರಮಾಡತಕ್ಕದ್ದೆಂದು ಅಭಿಪ್ರಾಯ.

'ಸ್ವಾಂತರ್ಗತಂಸ್ಮೃತ್ವಾ ಸ್ವಪಾದೌಭೂಮಿಂ ವಾ ಸ್ಪೃಷ್ಟ್ವಾನತ್ವಾ ಅನ್ಯಾನ್ ಸ್ವೋತ್ತಮಾಂಶ್ಚ' ಎಂದೂ ಪ್ರಮಾಣವಿದೆ.

ಅವೈಷ್ಣವಾತಿರಿಕ್ತದೇವತೆಗಳಿಗೆ ನಮಸ್ಕಾರಮಾಡತಕ್ಕದ್ದು.

'ಪಾದತ್ರಾಣಸಮಾಯುಕ್ತಃ। ಸಂವೇಷ್ಟಿತ ಶಿರಾಸ್ತಥಾ। ಅನಿವೇದಿತ ಯೋನಿಶ್ಚ। ನ ಕಿಂಚಿದಭಿವಾದಯೇತ್।'' ಎಂದು ಪ್ರಮಾಣವಿರುವುದರಿಂದ ಕಾಲಿಗೆ ಪಾದರಕ್ಷೆಧರಿಸಿ, ತಲೆಗೆ ಟೊಪ್ಪಿ ಹಾಕಿಕೊಂಡು; ತನ್ನಕುಲಗೋತ್ರಗಳನ್ನು ಹೇಳದೇ ಯಾರಿಗೂ ನಮಸ್ಕಾರಮಾಡಬಾರದು.

**ಮತ್ತು ಯಾರಿಗೆ ನಮಸ್ಕಾರಮಾಡಕೂಡದು ?**

''ವಿಪ್ರಂ ಸ್ನಾನಂ ಪ್ರಕುರ್ವಂತಂ ಸಮಿತ್ಕುಶಕರಂ ತಥಾ। ಉದಪಾತ್ರಧರಂ ಚೈವ ಭುಂಜಂತಂ ನಾಭಿವಾದಯೇತ್ ॥
ಅಭ್ಯಕ್ತಶಿರಸಂ ದಂಡಂ ಧಾವಂತಮಶುಚಿಂ ತಥಾ। ಶ್ರಾದ್ಧಂ ವ್ರತಂ ತಥಾ ದಾನಂ ದೇವತಾಭ್ಯರ್ಚನಂ ತಥಾ ॥
ಯಜ್ಞಂಚ ತರ್ಪಣಂ ಚೈವ ಕುರ್ವಂತಂ ನಾಭಿವಾದಯೇತ್। ಸಭಾಯಾಂ ಯಜ್ಞಶಾಲಾಯಾಂ ದೇವತಾಯತನೇಷ್ವಪಿ ॥
ಪುಣ್ಯಕ್ಷೇತ್ರೇ ಪುಣ್ಯತೀರ್ಥೇಸ್ವಾಧ್ಯಾಯ ಸಮಯೇತಥಾ। ಸಭಾಯೈ ನಮಃ ಇತ್ಯೇವ ವದೇತ್ಪ್ರತ್ಯೇಕತೋ ನತು ॥
ಅಭಿವಾದೇಕೃತೇ ಯಸ್ತು ನ ಕರೋತ್ಯಭಿವಂದನಂ। ಆಶಿಷಂ ವಾ ನ ಕುರುತೇ ಸ ಯಾತಿ ನರಕಾನ್ಬಹೂನ್ ॥ ಎಂದು ಪ್ರಮಾಣವಿರುವುದರಿಂದ,

ಸ್ನಾನಮಾಡುವ, ಸಮಿತ್ಕುಶಗಳು ಕೈಯಲ್ಲಿ ಧರಿಸಿದ, ಕಮಂಡಲು ಧರಿಸಿದ, ಭೋಜನಮಾಡುವ, ಚಂಡಿಕೆ ಬಿಚ್ಚಿರುವ, ರೌದ್ರದಲ್ಲಿರುವ, ಓಡುವ, ಅಶುಚಿಯಾಗಿರುವ, ಶ್ರಾದ್ಧ, ವ್ರತ, ದಾನ, ದೇವತಾರ್ಚನಮಾಡುವ, ಯಜ್ಞ, ತರ್ಪಣಕಾಲದಲ್ಲಿ ಬ್ರಾಹ್ಮಣನಿಗೆ ನಮಸ್ಕಾರ ಮಾಡ-ಕೂಡದು.

ಸಭಾದಲ್ಲಿ, ಯಜ್ಞಶಾಲಾದಲ್ಲಿ, ದೇವಾಲಯದಲ್ಲಿ, ಪುಣ್ಯಕ್ಷೇತ್ರದಲ್ಲಿ, ಪುಣ್ಯತೀರ್ಥದಲ್ಲಿ, ಸ್ವಾಧ್ಯಾಯಮಾಡುವ ಕಾಲದಲ್ಲಿ ಕೂತಿರುವ ಬ್ರಾಹ್ಮಣನಿಗೆ ಪ್ರತ್ಯೇಕ ನಮಸ್ಕಾರ ಮಾಡಕೂಡದು. 'ಸಭಾಯೈ ನಮಃ' ಎಂದು ಸಮೂಹದಿಂದ ನಮಸ್ಕಾರಮಾಡತಕ್ಕದ್ದು . ನಮಸ್ಕಾರ ಮಾಡಿದರೆ ಬದಲು ನಮಸ್ಕಾರವಾಗಲೀ, ಆಶೀರ್ವಾದವಾಗಲೀ ಮಾಡದೇ ಬಿಟ್ಟವನು ಅನೇಕನರಕಗಳಿಗೆ ಹೋಗುತ್ತಾನೆಂದರ್ಥ .

**(ವಿ.ಸೂ.:- ಶ್ರೀ ವಾದಿರಾಜರು ಭಗವದ್ಭಕ್ತರ ಮಹಿಮೆಯನ್ನು ಅವರ ಹರಿಭಕ್ತಾಷ್ಟಕಮ್ ಎಂಬ ಸ್ತೋತ್ರದಲ್ಲಿ ವಿವರಿಸಿದ್ದಾರೆ. ಶಕ್ಯವಾದರೆ ಅದನ್ನು ಸಂಧ್ಯಾವಂದನೆ, ಪಾರಾಯಣಗಳ ನಂತರ ಪಾರಾಯಣಮಾಡುವುದು.)**

**ಯಸ್ಯ-ಸ್ಮೃತ್ಯಾ-ಚ-ನಾಮೋಕ್ತ್ಯಾ-ತಪೋ-ಸಂಧ್ಯಾಕ್ರಿಯಾದಿಷು । ನ್ಯೂನಂ-ಸಂಪೂರ್ಣತಾಂ-ಯಾತಿ-ಸದ್ಯೋ-ವಂದೇ ತಮಚ್ಯುತಂ। ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ರಮಾಪತೇ । ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುಮೇ ॥ ಅನೇನ ಶ್ರೀಮಧ್ವಾಂತರ್ಯಾಮಿನ್ಶ್ರೀಕೃಷ್ಣಸ್ಯ ವೀರ್ಯೇಣ, ತೇನ ದತ್ತಸ್ವಾತಂತ್ರ್ಯೇ ಮಯಾ ಚರಿತ ಪ್ರಾತಃ (ಸಾಯಂ) ಸಂಧ್ಯಾವಂದನೇನ ಭಗವಾನ್ ಮಧ್ವಾಚಾರ್ಯಾಣಾಂ ಹೃತ್ಕಮಲಮಧ್ಯನಿವಾಸಿ ಅನಂತಕಲ್ಯಾಣ ಗುಣಗಣಪರಿಪೂರ್ಣ ಕ್ಷೀರಾಬ್ಧಿಶಾಯೀ ನಿರ್ದೋಷಜ್ಞಾನಾನಂದಪರಿಪೂರ್ಣ ಶ್ರೀಮದ್ವಾಯುಹನುಮದ್ಭೀಮ-ಮಧ್ವಾಂತರ್ಗತ ಮಾಧವರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾತ್ಮಕ ಶ್ರೀಲಕ್ಷ್ಮೀನೃಸಿಂಹಪ್ರೀಯತಾಂ ಸುಪ್ರೀತೋ ವರದೋ ಭವತು । ಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು ॥**

(ಎಂದು ನೀರನ್ನು ಬಿಡುವುದು, ನಂತರ ಆಚಮನೆ ಮಾಡುವುದು)

ತಪಃ= ಜಪಮೊದಲಾದ ತಪಸ್ಸು; ಸಂಧ್ಯಾಕ್ರಿಯಂ=ಸಂಧ್ಯಾವಂದನಕಾರ್ಯಗಳು; ಆದಿಷು=ಇವುಮೊದಲಾದ ಕಾರ್ಯಗಳಲ್ಲಿ; ಯಸ್ಯ= ಯಾವ ಪರಮಾತ್ಮನ ; ಸ್ಮೃತ್ಯಾ=ಸ್ಮರಣದಿಂದಲೂ; ನಾಮೋಕ್ತ್ಯಾ ಚ=ನಾಮೋಚ್ಚಾರಣದಿಂದಲೂ; ( ಇವುಗಳಿಂದ) ನ್ಯೂನಂ=ಕೊರತೆವುಳ್ಳದ್ದು; (ಲೋಪಗಳುಳ್ಳದ್ದು) ಸಂಪೂರ್ಣತಾಂ=ಸಂಪೂರ್ಣತ್ವವು ; ಯಾತಿ=ಹೊಂದುತ್ತವೆಯೋ; ಅಚ್ಯುತಂ= ನಾಶರಹಿತನಾದ; ತಂ= ಆ ಪರಮಾತ್ಮ-ನನ್ನು; ಸದ್ಯ=ಈಗ; (ಅಹಂ=ನಾನು) ವಂದೇ=ನಮಸ್ಕಾರ ಮಾಡುತ್ತೇನೆ; ರಮಾಪತೇ=ಹೇ ಲಕ್ಷ್ಮೀಪತಿಯಾದ ಪರಮಾತ್ಮನೇ ! ಮಂತ್ರಹೀನಂ= ಮಂತ್ರಹೀನವಾಗಿಯೂ; ಕ್ರಿಯಾಹೀನಂ=ಕ್ರಿಯಾಹೀನವಾಗಿಯೂ, ಭಕ್ತಿಹೀನಂ=ಭಕ್ತಿಹೀನವಾಗಿಯೂ, ಮಯಾ=ನನ್ನಿಂದ; ಯತ್ಕೃತಂ= ಯಾವ ಯಾವುದುಮಾಡಲ್ಪಟ್ಟಿತೋ, ತತ್= ಅವೆಲ್ಲವೂ; ಮೇ=ನನ್ನನ್ನು ಕುರಿತು ; ಪರಿಪೂರ್ಣಂ=ಸಂಪೂರ್ಣ ಫಲಪ್ರಾಪ್ತಿಕಾರಣಭೂತವಾಗಿ; ಅಸ್ತು= ಆಗಲಿ। ('ಮಂತ್ರಮಧ್ಯೇ ಕ್ರಿಯಾಮಧ್ಯೇ ವಿಷ್ಣೋಸ್ಮರಣಪೂರ್ವಕಂ। ಯತ್ಕಿಂಚಿತ್ ಕ್ರಿಯತೇ ಕರ್ಮ ತತ್ಕರ್ಮ ಸಫಲಂ ಭವೇತ್ ॥' ಎಂದು ಪ್ರಮಾಣವಿದೆ.)

ಅನೇನ= ಈ, ಪ್ರಾತಸ್ಸಂಧ್ಯಾವಂದನೇನ =ಪ್ರಾತಸ್ಸಂಧ್ಯಾನಾಮಕ ಕರ್ಮದಿಂದ, ಭಗವಾನ್=ಷಡ್ಗುಣೈಶ್ವರ್ಯಸಂಪನ್ನನಾದ; ಶ್ರೀಮಧ್ವಾಚಾರ್ಯಾಣಾಂ=ಶ್ರೀಮಧ್ವಾಚಾರ್ಯರ; ಹೃತ್ಕಮಲ=ಹೃದಯಸರೋಜದ ; ಮಧ್ಯ=ಮಧ್ಯದಲ್ಲಿ, ನಿವಾಸಿ=ವಾಸಮಾಡಿಕೊಂಡಿರುವ'; ಅನಂತಕಲ್ಯಾಣಗುಣಗಣಪರಿಪೂರ್ಣನಾದ, ಕ್ಷೀರಾಬ್ಧಿಶಾಯಿಯಾದ, ನಿರ್ದೋಷಜ್ಞಾನಾನಂದಾತ್ಮಕನಾದ, ವಾಯುದೇವರ ಮೂರು ಅವತಾರಗಳಾದ ಹನುಮ,ಭೀಮ ಮತ್ತು ಮಧ್ವಾವತಾರರೂಪಗಳಲ್ಲಿ ಅಂತರ್ಯಾಮಿಯಾದ ಶ್ರೀಲಕ್ಷ್ಮೀಹಯಗ್ರೀವರೂಪಿಯಾದ ಶ್ರೀಕೃಷ್ಣನು ಪ್ರೀತನಾಗಲಿ, ಪ್ರೀತನಾಗಿ ವರವನ್ನು ಕೊಡಲಿ ಎಂದು ಸಮರ್ಪಣೆ ಮಾಡಬೇಕು.

**(ಶ್ರೀರಾಘವೇಂದ್ರಸ್ವಾಮಿಗಳ ಸರ್ವಸಮರ್ಪಣಗದ್ಯ ಪ್ರಕಾರ ಸರ್ವಕಾರ್ಯಗಳನ್ನು ಶ್ರೀಮಧ್ವರ ಅಂತರ್ಗತ ಶ್ರೀಹರಿಯಲ್ಲಿಯೇ ಸಮರ್ಪಿಸಬೇಕು.)**

**ಪುನರಾಚಮನೆ ಮಾಡುವುದು.**

**ಶ್ರೀತಿಮ್ಮಣ್ಣಾರ್ಯರು:**-ವಂದನಕಾಲೇ ಆಪಸ್ತಂಬಸೂತ್ರ ಸರ್ವಶುಭಾಶಾಸನ ಸ್ವಸ್ವಗೋತ್ರೋತ್ಕೀರ್ತನಮುಕ್ತಮಿತಿ । ಚತುಃಸಾಗರೇತಿ । ಭುಜಮೋಭಿವಾದನಂ । ತತಃ ಶ್ರೀಹರಿಸಮರ್ಪಣಂ ಚ ತತ್ರ ಪ್ರಮಾಣಾನಿ । ತಪಸ್ವಿನೋ ದಾನ ಪರಾ ಇತಿ ॥ ಮನ್ಮನಾಭವ ಮದ್ಭಕ್ತ ಇತಿ । ಯತ್ಕರೋಷೀತಿ । ಯಸ್ಯಸ್ಮೃತ್ಯಾ ಚ ॥ ಮಂತ್ರತಸ್ತಂತ್ರತ ಇತ್ಯಾದೀನೀತಿ ಸರ್ವಮತಿಮಂಗಲಂ ॥

**ಪ್ರಾತಃ ಸಂಧ್ಯಾಮಂತ್ರ ಟೀಕಾ ತಿಮ್ಮಣ್ಣಾಖ್ಯ ವಿನಿರ್ಮಿತಾ । ಸತ್ಯಾಧಿರಾಜ ಹೃತ್ಪದ್ಮವಾಸಿ ಶ್ರೀಶಮುದೇ ಫಲಂ ॥ ॥**

ಶ್ರೀಮಧ್ವೇಶಾರ್ಪಣಮಸ್ತು॥

ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀಲಕ್ಷ್ಮೀಹಯಗ್ರೀವಾತ್ಮಕ ಶ್ರೀವೇದವ್ಯಾಸಾಯನಮಃ।।

**:ಅಥ ಮಾಧ್ಯಾನ್ಹಿಕಸಂಧ್ಯಾವಂದನೆ ಪ್ರಾರಂಭ :**

(ಮಾಧ್ಯಾನ್ಹಿಕಸಂಧ್ಯಾವಂದನೆಗೆ ಶ್ರೀತಿಮ್ಮಣ್ಣಾರ್ಯರ ಭಾಷ್ಯವು ಸಿಕ್ಕಿಲ್ಲ ) (ಪ್ರಾತಸ್ಸಂಧ್ಯಾವಂದನೆಯಲ್ಲಿ ಬರೆದ ಮಂತ್ರಗಳ ಅರ್ಥಗಳನ್ನು ಇಲ್ಲಿ ಮತ್ತೆ ಬರೆಯಲಾಗಿಲ್ಲ. ಬೇರೆ ಮಂತ್ರಗಳ ಅರ್ಥಗಳನ್ನು ಮಾತ್ರ ಬರೆದಿದೆ.)

ಸಂಧ್ಯಾವಂದನೆಗೆ ಮೊದಲು, ದೇವರಿಗೆ ನಮಸ್ಕಾರ ಮಾಡಿ ಎರಡು ಪಾತ್ರೆಯಲ್ಲಿ ನೀರು ಹಾಕಿಕೊಂಡು, ಒಂದನ್ನು ಆಚಮನಕ್ಕೆಂತಲೂ ಇನ್ನೊಂದನ್ನು ಅರ್ಘ್ಯಕ್ಕೆಂತಲೂ ತೆಗೆದಿಡಬೇಕು.

1. **ಮಾರ್ಜನೆ.(ಉದ್ದರಣೆಯಲ್ಲಿ ನೀರುತೆಗೆದುಕೊಂಡು)**

ಅಪವಿತ್ರಃ-ಪವಿತ್ರೋऽವಾ-ಸರ್ವಾವಸ್ಥಾನ್-ಗತೋऽಪಿ ವಾ।
ಯಃ ಸ್ಮರೇತ್- ಪುಂಡರೀಕಾಕ್ಷಂ- ಸಬಾಹ್ಯಾಭ್ಯಂತರಃ- ಶುಚಿಃ।।

(ಎಂದು ತಲೆಯಮೇಲೆ ಕೈಯಿಂದ ನೀರನ್ನು ಪ್ರೋಕ್ಷಣೆ ಮಾಡಬೇಕು।)

2. **ಆ ಚ ಮ ನ ಮಾಡುವುದು**

3. **ಪ್ರಾಣಾಯಾಮ.**

ಓಂ ಪ್ರಣವಸ್ಯ -ಪರಬ್ರಹ್ಮಋಷಿಃ। ಪರಮಾತ್ಮಾ-ದೇವತಾ।ದೈವೀ ಗಾಯತ್ರೀ-ಛಂದಃ। ಪ್ರಾಣಾಯಾಮೇ ವಿನಿಯೋಗಃ।।

(ಎಂದು ಅನಾಮಿಕ, ಕನಿಷ್ಠ ಮತ್ತು ಅಂಗುಷ್ಠಗಳಿಂದ ಮೂಗಿನ ತುದಿಯನ್ನು ಹಿಡಿದುಕೊಂಡು)

ಶ್ರೀ ಮಧ್ವಾಂತರ್ಯಾಮಿನ್ ಓಂ ಭೂಃ। ಓಂ ಭುವಃ। ಓಂ ಸ್ವಃ। ಓಂ ಮಹಃ। ಓಂ ಜನಃ। ಓಂ ತಪಃ। ಓಂ ಸತ್ಯಂ।

ಓಂ ತತ್ಸವಿತುರ್ವರೇಣ್ಯಂ-ಭರ್ಗೋ ದೇವಸ್ಯಧೀಮಹಿ- ಧಿಯೋ ಯೋ ನಃ ಪ್ರಚೋದಯಾತ್।। ಓಂ ಆಪೋ ಜ್ಯೋತೀರಸೋ ಅಮೃತಂ ಬ್ರಹ್ಮ ಭೂರ್ಭುವಸ್ವಃ ಓಂ।।

(ಎಂದುಮನಸ್ಸಿನಲ್ಲೇ ಹೇಳಿಕೊಂಡು, ಬಲತೊಡೆಯಮೇಲೆ ಎಡಗೈ ಅಂಗೈಯ ಮೇಲೆ ಬಲಗೈ ಅಂಗೈಯನ್ನು ಇಟ್ಟುಕೊಂಡು)

**4..ಸಂಕಲ್ಪ**

ಶುಭೇ-ಶೋಭನೇ ಮುಹೂರ್ತೇ -(ಶ್ರೀಮಧ್ವಾಂತರ್ಯಾಮಿನ್) ಶ್ರೀ ವಿಷ್ಣೋರಾಜ್ಞಯಾ-ಪ್ರವರ್ತಮಾನಸ್ಯ -ಆದ್ಯ ಬ್ರಹ್ಮಣಃ -ದ್ವಿತೀಯ ಪರಾರ್ಧೇ-ಶ್ರೀಶ್ವೇತವರಾಹ ಕಲ್ಪೇ-ವೈವಸ್ವತ ಮನ್ವಂತರೇ- ಅಷ್ಟಾವಿಂಶತಿ ತಮೇ ಕಲಿಯುಗೇ ಪ್ರಥಮಪಾದೇ-ಭರತವರ್ಷೇ-ಭರತಖಂಡೇ-ಜಂಬೂದ್ವೀಪೇ ದಂಡಕಾರಣ್ಯೇ-ಗೋದಾವರ್ಯಾಃ -ದಕ್ಷಿಣೇತೀರೇ- ದೇಶೇ- ಶಾಲೀವಾಹನಶಕೇ- ಬೌದ್ಧಾವತಾರೇ -ರಾಮಕ್ಷೇತ್ರೇ- ಅಸ್ಮಿನ್ ವರ್ತಮಾನೇ- ಚಾಂದ್ರಮಾನೇನ- ಪ್ರಭವಾದಿ ಷಷ್ಠಿಸಂವತ್ಸರಾಣಾಂ ಮಧ್ಯೇ **ಶ್ರೀವೃಷ-**ನಾಮ ಸಂವತ್ಸರೇ-------- ಅಯನೇ----ಋತೌ-----ಮಾಸೇ ----ಪಕ್ಷೇ-----ತಿಥೌ-- ವಾಸರಃ ವಾಸರಸ್ತು ---- ವಾಸರೇ--- ನಕ್ಷತ್ರೇ -ಶುಭಯೋಗ-ಶುಭಕರಣ- ಏವಂಗುಣವಿಶೇಷಣ ವಿಶಿಷ್ಟಾಭ್ಯಾಂ- ಶುಭತಿಥೌಶ್ರೀಮಧ್ವಾಂತರ್ಯಾಮಿನ್ ಶ್ರೀಕೃಷ್ಣೇನ- ದತ್ತಸ್ವಾತಂತ್ರ್ಯೇ-ಹರಿಗುರು ಸನ್ನಿಧೌ ಸಾಲಿಗ್ರಾಮಸನ್ನಿಧೌ- ಶ್ರೀಮಧ್ವಾಂತರ್ಯಾಮಿನ್ ಶ್ರೀಸವಿತೃನಾಮಕ- ಶ್ರೀಲಕ್ಷ್ಮೀನರಸಿಂಹಾಭಿನ್ನ-ಶ್ರೀಲಕ್ಷ್ಮೀನಾರಾಯಣ ಪ್ರೇರಣಯಾ- ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ-ಮಾಧ್ಯಾನ್ಹಿಕ ಸಂಧ್ಯಾವಂದನಂ ಉಪಾಸಿಷ್ಯೇ।।

( ಎಂದು ಉದ್ದರಣೆಯಲ್ಲಿನೀರು ತೆಗೆದುಕೊಂಡು ಬಲಗೈಗೆ ಹಾಕಿಕೊಂಡು ಬಿಡುವುದು)

5. **ಮಾರ್ಜನಮ್**

(ಉದ್ದರಣೆಯಲ್ಲಿನೀರು ಎತ್ತಿಕೊಂಡು ಕೆಳಗಿನ ಮಂತ್ರದಿಂದ ನಿರ್ಮಾಲ್ಯ ತುಳಸಿಯಿಂದ ಪ್ರೋಕ್ಷಸಿಕೊಳ್ಳ ಬೇಕು)

ಓಂ ಆಪೋಹಿಷ್ಠೇತಿ -ತ್ರಿಋಚಸ್ಯ ಸೂಕ್ತಸ್ಯ- ಸಿಂಧುದ್ವೀಪ ಋಷಿಃ।- ಆಪೋದೇವತಾ- ಗಾಯತ್ರೀಛಂದಃ- ಮಾರ್ಜನೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್ **॥ ॥ಹರಿಃ ಓಂ॥ ಆಪೋಹಿಷ್ಠಾಮಯೋ ಭುವಃ । ಓಂ ತಾನ ಊರ್ಜೇ ದಧಾತನ । ಓಂ ಮಹೇರಣಾಯ ಚಕ್ಷಸೇ । ಓಂ ಯೋ ವಃ ಶಿವತಮೋ ರಸಃ । ಓಂ ತಸ್ಯ ಭಾಜಯತೇ ಹನಃ । ಓಂ ಉಶತೀರಿವ ಮಾತರಃ ಓಂ ತಸ್ಮಾ ಅರಂಗ ಮಾಮವಃ। ಓಂ ಯಸ್ಯ ಕ್ಷಯಾಯ ಜಿನ್ವಥ। ಓಂ ಆಪೋ ಜನಯಥಾ ಚ ನಃ॥ ಓಂ॥**

**6. ಜಲಾಭಿಮಂತ್ರಣಮ್।**

(ಉದ್ದರಣೆಯಲ್ಲಿ ನೀರು ಎತ್ತಿಕೊಂಡು ಕೆಳಗಿನ ಮಂತ್ರದಿಂದ ನೀರನ್ನು ಮಂತ್ರಿಸಬೇಕು)

ಆಪಃ ಪುನಂತ್ವಿತಸ್ಯ ಮಂತ್ರಸ್ಯ ಪೂತಋಷಿಃ। ಆಪೋ ದೇವತಾ। ಅಷ್ಟೀ ಛಂದಃ। ಆಪಾಂ ಪ್ರಾಶನೇ ವಿನಿಯೋಗಃ॥

ಶ್ರೀಮಧ್ವಾಂತರ್ಯಾಮಿನ್ ॥ಹರಿಃ ಓಂ॥ **ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಂ। ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮ ಪೂತಾ ಪುನಾತು ಮಾಂ । ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ । ಸರ್ವಂ ಪುನಂತು ಮಾಮಾಪೋಽಸತಾಂ ಚ ಪ್ರತಿಗ್ರಹಂ ಸ್ವಾಹಾ ॥ ಹರಿಃ ಓಂ ॥**

( ಎಂದು ಆ ನೀರನ್ನು ಕುಡಿಯಬೇಕು)

*ಉದಕಪರ:- ಆಪಃ=ನೀರುಗಳು ಅಥವಾ ಉದಕಾಭಿಮಾನಿದೇವತಾಗಳು; ಪೃಥಿವೀಂ=(ನಾನು ಕೂತು ಇರುವ) ಭೂಮಿಯನ್ನು ; ಪುನಂತು= ಪರಿಶುದ್ಧವಾಗಿಮಾಡಲಿ; ಪೃಥಿವೀ= ಆ ಭೂಮಿಯು ಪೂತಾ=ಪರಿಶುದ್ಧವಾಗಿ ; ಮಾಂ= ಈ ಶರೀರ, ಶರೀರಾಭಿಮಾನಿಯಾದ ನನ್ನನ್ನು ; ಪುನಾತು=ಶುದ್ಧಮಾಡಲಿ ; ಬ್ರಹ್ಮಣಸ್ಪತಿಃ=ವೇದಪಾಲಕನಾದ ನನ್ನ ಆಚಾರ್ಯರನ್ನು ; ಪುನಂತು=ಶುದ್ಧಮಾಡಲಿ ; ಬ್ರಹ್ಮ=ವೇದವು; ಪೂತಾ= ಪರಿಶುದ್ಧವಾಗಿ ; ಮಾಂ=ನನ್ನನ್ನು ; ಪುನಾತು=ಶುದ್ಧಮಾಡಲಿ ; ಮಮ=ನನಗೆ; ಯತ್= ಯಾವ , ಉಚ್ಛಿಷ್ಟಂ =(ಜಿಹ್ವಾಚಾಪಲ್ಯದಿಂದ) ಉಚ್ಛಿಷ್ಟವನ್ನು(ಎಂಜಲು) ಭೋಜನಮಾಡಿದ ಪ್ರಯುಕ್ತ ಘಟನವಾದ ಪಾಪ; ಅಭೋಜ್ಯಂ=ಭಕ್ಷಣಕ್ಕೆ ಅನರ್ಹವಾದದ್ದು(ಯಾವುದೋಅದು) ಕೇಶ,ಕೀಟಾದಿಗಳಿಂದ ದುಷ್ಟವಾಗಿ ಭೋಜನಕ್ಕೆ ಅನರ್ಹವಾದದ್ದು ; ಯದ್ವಾ=ಮತ್ತೊಂದು ಯಾವುದಾದರೂ ; ದುಶ್ಚರಿತಂ=(ಅಗಮ್ಯಾ-ಗಮನಾದಿ) ದುಷ್ಕರ್ಮವು ಆದದ್ದೋ; ಸರ್ವಂ=ಸಮಸ್ತವು ; ಅಸತಾಂ ಪರಿಗ್ರಹಂ ಚ= ಅಸತ್ಪುರುಷರ(ಪತಿತ ಚಾಂಡಾಲಾದಿಗಳಿಂದೇನು ಆತತಾಯಿಗಳಿಂದೇನು) ಪ್ರತಿಗ್ರಹಜನ್ಯವಾದ ಪಾಪವನ್ನು (ಕಳೆದು ಶುದ್ಧವನ್ನಾಗಿ ಮಾಡಲಿ) (ಅದಕ್ಕಾಗಿ ಈ ಜಲವು) ಸ್ವಾಹಾ=ನನ್ನ ಬಾಯಿಯೆಂಬ ಅಗ್ನಿಯಲ್ಲಿ ಹೋಮಮಾಡಲ್ಪಟ್ಟದ್ದು ಆಗಲಿ.*

ಪರಮಾತ್ಮನ ಪರ:- ಹೇ ಆಪಃ= ಓ ಉದಕಾಂತರ್ಗತಪರಮಾತ್ಮನೇ ; ಪೃಥಿವೀಂ=ಭೂದೇವತಾವನ್ನು ; ಪುನಂತು=ಪಾಲನಮಾಡಲಿ ಅಥವಾ ಪವಿತ್ರವನ್ನಾಗಿ ಮಾಡಲಿ; ಪೂತಾ=ಪರಿಶುದ್ಧವಾದ; ಪೃಥಿವೀಂ=ಪೃಥುತ್ವಾತ್ಪೃಥಿವೀ ವಿಷ್ಣುರಿತ್ಯಾದಿ ಪ್ರಮಾಣಗಳಿಂದ ಪೃಥಿವೀಶಬ್ದವಾಚ್ಯನಾದ ಸ್ವಯಂ ಪವಿತ್ರನಾದ ಪರಮಾತ್ಮನು, ಪೃಥಿವೀ ಶಬ್ದವಾಚ್ಯಸ್ತ್ರೀರೂಪೋ ವಿಷ್ಣುಃ ಸ್ವತಯೇವ ಪೂತಾ ಎಂದು ಪ್ರಮಾಣವಿದೆ.; ಮಾಂ=ಲಕ್ಷ್ಮೀದೇವೇರನ್ನು ; ಪುನಾತು=ಪಾಲನಮಾಡಲಿ; ಬ್ರಹ್ಮಣಸ್ಪತಿಃ= ವೇದಪಾಲಕನಾದ ಚತುರ್ಮುಖಬ್ರಹ್ಮನೇ; ಪುನಂತು=ಪಾಲನ ಮಾಡಲಿ; ಬ್ರಹ್ಮ=ಬ್ರಾಹ್ಮಣಶ್ರೇಷ್ಠನಾದ ಬ್ರಹ್ಮನು ; ಮಾಂ=ನನ್ನನ್ನು ; ಪುನಾತು=ಪಾಪಗಳದೆಸೆಯಿಂದ ಶುದ್ಧಪಡಿಸಲಿ; (ಯಾವ ಪಾಪಗಳೆಂದರೆ) ಉಚ್ಛಿಷ್ಟಂ=''ಗುರೋಶ್ಚ ಗುರುಭಾರ್ಯಾಯಾ ಗುರುಪುತ್ರಸ್ಯಾ ಚಾನಘ । ಉಚ್ಛಿಷ್ಟಮಪಿಭೋಕ್ತವ್ಯಂ ನಾನ್ಯೋಚ್ಛಿಷ್ಠಂ ಕದಾಚನ ।'' ಎಂದು ವಿಷ್ಣುಧರ್ಮೋತ್ತರದಲ್ಲಿ ಪ್ರಮಾಣವಿದೆ. ತದ್ವ್ಯತಿರೇಕ ಉಚ್ಛಿಷ್ಠ ಭೋಜನದಿಂದ ಘಟನವಾದ ; ಅಭೋಜ್ಯಂ=ನಿಷಿದ್ಧಪದಾರ್ಥಭೋಜನ-ದಿಂದ ಪ್ರಾಪ್ತವಾದ ; ಯದ್ವಾ ದುಶ್ಚರಿತಂ=ಮತ್ತು ಪ್ರತಿಷಿದ್ಧಮೈಥುನಾದಿ ವಾಕ್ಪಾಣಿಪಾದಶಿಶ್ನೋದರ ಚಾಪಲ್ಯದಿಂದ ಮಾಡಿದಂಥಾ ಕೆಟ್ಟನಡತೆ; ಸರ್ವಂ=ಸಮಸ್ತವೂ ; ಅಸತಾಂ ಪ್ರತಿಗ್ರಹಂ ಚ= ಅಸತ್ಪುರುಷರಾದ ಪತಿತಚಾಂಡಾಲಾದಿಗಳಿಂದೇನು; ಆತತಾಯಿಗಳಿಂದೇನು ಮಾಡಿದ ದಾನ ಪ್ರತಿಗ್ರಹಜನ್ಯವಾದ ಈ ಸಮಸ್ತಪಾಪಗಳನ್ನು ಕಳೆದು; ಸ್ವಾಹಾ=ಅಗ್ನ್ಯಂತರ್ಗತ ಪರಶುರಾಮದೇವರು; ಮಾಂ=ನನ್ನನ್ನು ; ಪುನಂತು=ರಕ್ಷಣ ಮಾಡಲಿ.

**ಪ್ರಾತಸ್ಸಂಧ್ಯಾವಂದನದಲ್ಲಿ 'ಸೂರ್ಯಶ್ಚೇತ್ಯಸ್ಯ ಮಂತ್ರಸ್ಯ' ಎಂದು ಹೇಳಿದಿರಿ? ಈಗ 'ಆಪಃ ಪುನಂತು' ಎಂದು**

**ಹೇಳುತ್ತೀರಿ . ಇದಕ್ಕೆ ಕಾರಣವೇನು?**

ಆಗ್ನೇಯಪುರಾಣದಲ್ಲಿ ಈ ಕೆಳಗೆ ಹೇಳುವ ಪ್ರಕಾರ ಪ್ರಮಾಣ ಉಂಟು. 'ಸಾಯಮಗ್ನಿಶ್ಚೇತ್ಯುಕ್ತ್ವಾ । ಪ್ರಾತಸ್ಸೂರ್ಯೇತ್ಯಪಃ ಪಿಬೇತ್ । ಆಪಃ ಪುನಂತು ಮಧ್ಯಾಹ್ನೇ । ತತ ಆಚಮನಂ ಚರೇತ್ ॥' ಎಂದು ಪ್ರಮಾಣವಿದೆಯಾದಕಾರಣ ಈ ಪ್ರಕಾರ ಹೇಳಿದೆ.

**ಸತ್ಪುರುಷರ ಕಡೆಯಿಂದಲೇ ದಾನವನ್ನು ಸ್ವೀಕರಿಸಬೇಕೆಂದು ನಿಯಮವುಂಟೋ ? ಪ್ರತಿಗೃಹೀತೃಯೋಗ್ಯನಾಗಿದ್ದರೆ ಸಾಲದಾ? ದಾತ ಹ್ಯಾಂಗೆ ಇದ್ದರೇನು?**

ಅಸತ್ಪುರುಷರು ಮಾಡುವ ದಾನವನ್ನು ಸ್ವೀಕಾರಮಾಡಬಾರದು.

''ವಿದ್ಯಾತಪೋಭ್ಯಾಂ ಹೀನಾನಾಂ । ನತು ಗ್ರಾಹ್ಯಃ ಪ್ರತಿಗ್ರಹಃ ॥ ಗೃಹ್ಣನ್ಪ್ರದಾತಾರಮಧೋನಯತ್ಯಾತ್ಮಾನಮೇವಚ ॥'' ಎಂದು ಪ್ರಮಾಣವಿದ್ದ ಕಡೆಯಿಂದ ಅಸತ್ಪುರುಷರು ಮಾಡುವ ದಾನವನ್ನು ಯಾರು ಸ್ವೀಕಾರಮಾಡುತ್ತಾರೋ ಅವರುಗಳು ದಾತನನ್ನು ಅಧೋಲೋಕಗಳಿಗೆ ಕಳುಹಿಸಿ, ತಾವೂ ಕೂಡಾ ಆ ಲೋಕಗಳನ್ನು ಹೊಂದುತ್ತಾರೆಂದು ಕಾಣಬರುತ್ತದೆಯಾದ ಕಾರಣ ಅಂಥಾ ದೋಷಮಾಡಿದ್ದು ಇದ್ದರೆ ಪರಿಹಾರಾರ್ಥವಾಗಿ ಉದಕವನ್ನು ಪ್ರಾಶನ ಮಾಡಬೇಕು.

**7.ಮತ್ತೆ ಆಚಮನ ಮಾಡಬೇಕು.**

**8. ಪುನರ್ಮಾರ್ಜನಮ್**

ಆಪೋಹಿಷ್ಠೇತಿ ನವರ್ಚಸ್ಯ ಸೂಕ್ತಸ್ಯ- ಅಂಬರೀಷ ಸಿಂಧುದ್ವೀಪ ಋಷಿಃ-ಆಪೋದೇವತಾ-ಪಂಚ ಗಾಯತ್ರ್ಯಃ-ಪಂಚಮೀ ವರ್ಧಮಾನಾ। ಸಪ್ತಮೀ ಪ್ರತಿಷ್ಠಾ। ಅಂತ್ಯೇ ದ್ವೇ ಅನುಷ್ಟುಭೌ- ಪುನಃ ಮಾರ್ಜನೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್ **॥ ॥ಹರಿಃ ಓಂ॥ ಆಪೋಹಿಷ್ಠಾಮಯೋ ಭುವಃ । ಓಂ ತಾನ ಊರ್ಜೇ ದಧಾತನ । ಓಂ ಮಹೇರಣಾಯ ಚಕ್ಷಸೇ । ಓಂ ಯೋ ವಃ ಶಿವತಮೋ ರಸಃ । ಓಂ ತಸ್ಯ ಭಾಜಯತೇ ಹನಃ । ಓಂ ಉಶತೀರಿವ ಮಾತರಃಓಂ ತಸ್ಮಾ ಅರಂಗ ಮಾಮವಃ। ಓಂ ಯಸ್ಯ ಕ್ಷಯಾಯ ಜಿನ್ವಥ। ಓಂ ಆಪೋ ಜನಯಥಾ ಚ ನಃ॥ ಓಂ॥**

**ಓಂ ಶನ್ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ । ಶಂ ಯೋರಭಿಸ್ರವಂತು ನಃ ॥ ಈಶಾನಾವಾರ್ಯಾಣಾಂ ಕ್ಷಯಂತೀಶ್ಚರ್ಷಣೀನಾಮ್ । ಆಪೋ ಯಾಚಾಮಿ ಭೇಷಜಮ್ ॥ ಅಪ್ಸು ಮೇ ಸೋಮೋ ಅಬ್ರವೀದಂತರ್ವಿಶ್ವಾನಿ ಭೇಷಜಾ । ಅಗ್ನಿಂ ಚ ವಿಶ್ವಶಂಭುವಮ್ ॥ ಆಪಃ ಪೃಣೀತ ಭೇಷಜಂ ವರೂಥಂ ತನ್ವೇ ಮಮ । ಜ್ಯೋಕ್ಚ ಸೂರ್ಯಂ ದೃಶೇ ॥ ಇದಮಾಪಃ ಪ್ರವಹತ ಯತ್ಕಿಂ ಚ ದುರಿತಂ ಮಯಿ । ಯದ್ವಾಹಮಭಿದುದ್ರೋಹ ಯದ್ವಾ ಶೇಪ ಉತಾನೃತಮ್। ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ । ಪಯಸ್ವಾನಗ್ನ ಆಗಹಿ ತಂ ಮಾಂ ಸಂಸೃಜ ವರ್ಚಸಾ ॥ ಸಸ್ರುಷೀಸ್ತದಪಸೋ ದಿವಾನಕ್ತಂ ಚ ಸಸ್ರುಷೀಃ । ವರೇಣ್ಯಕ್ರತೂರಹಮಾ ದೇವೀ ರವಸೇ ಹುವೇ ॥**

(ಎಂದು ನೀರನ್ನು ತಲೆಯಮೇಲೆ ಪ್ರೋಕ್ಷಿಸಿಕೊಳ್ಳಬೇಕು)

**9. ಪಾಪ ಪುರುಷ ವಿಸರ್ಜನಮ್**

ಓಂ ಋತಂಚ ಇತ್ಯಸ್ಯ ಮಂತ್ರಸ್ಯ। ಅಘಮರ್ಷಣ ಋಷಿಃ। ಭಾವವೃತ್ತೋದೇವತಾ। ಅನುಷ್ಟುಪ್ ಛಂದಃ। ಪಾಪ ಪುರುಷ ವಿಸರ್ಜನೇ ವಿನಿಯೋಗಃ॥(ಎಂದು ಅಂಗೈಯಲ್ಲಿನೀರುಹಾಕಿಕೊಂಡು)

ಶ್ರೀಮಧ್ವಾಂತರ್ಯಾಮಿನ್ **ಶ್ರೀ ಹರಿಃ॥ ಓಂ ॥ ಋತಂ ಚ ಸತ್ಯಂಚಾಭೀದ್ಧಾತ್ ತಪಸೋಽಧ್ಯಜಾಯತ । ತತೋರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ ॥ ಸಮುದ್ರಾದರ್ಣವಾದಧಿಸಂವತ್ಸರೋ ಅಜಾಯತ । ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ ॥ ಸೂರ್ಯಾಚಂದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂಚಾಂತರಿಕ್ಷಮಥೋಸ್ವಃ ॥** (ಋ.ಮಂ.10-190-1-3)

(ಎಂದು ನಾಸಿಕಾಗ್ರಕ್ಕೆ ತೋರಿಸಿ ಅನಂತರ ಎಡ ಭಾಗದಲ್ಲಿ ನೀರನ್ನು ಬಿಡಬೇಕು)

**10. ಮತ್ತೆ ಆಚಮನ ಎರಡು ಬಾರಿ ಮಾಡಬೇಕು.**

**11. ಅರ್ಘ್ಯ ಪ್ರದಾನಮ್॥**

ಓಂ ಪ್ರಣವಸ್ಯ ಪರಬ್ರಹ್ಮ ಋಷಿಃ- ಪರಮಾತ್ಮಾದೇವತಾ- ದೈವೀ ಗಾಯತ್ರೀ ಛಂದಃ- ಪ್ರಾಣಾಯಾಮೇ ವಿನಿಯೋಗಃ॥

(ಎಂದು ಅನಾಮಿಕ, ಕನಿಷ್ಠ ಮತ್ತು ಅಂಗುಷ್ಠಗಳಿಂದ ಮೂಗಿನ ತುದಿಯನ್ನು ಹಿಡಿದುಕೊಂಡು)

ಶ್ರೀ ಮಧ್ವಾಂತರ್ಯಾಮಿನ್ **ಓಂ ಭೂಃ । ಓಂ ಭುವಃ । ಓಂ ಸ್ವಃ । ಓಂ ಮಹಃ । ಓಂ ಜನಃ । ಓಂ ತಪಃ । ಓಂ ಸತ್ಯಂ । ಓಂ ತತ್ಸವಿತುರ್ವರೇಣ್ಯಂ-ಭರ್ಗೋ ದೇವಸ್ಯಧೀಮಹಿ- ಧಿಯೋ ಯೋ ನಃ ಪ್ರಚೋದಯಾತ್॥ ಓಂ ಆಪೋ ಜ್ಯೋತೀರಸೋ ಅಮೃತಂ ಬ್ರಹ್ಮ ಭೂರ್ಭುವಸ್ವಃ ಓಂ॥**

(ಎಂದುಮನಸ್ಸಿನಲ್ಲೇ ಹೇಳಿಕೊಂಡು, ಬಲತೊಡೆಯಮೇಲೆ ಎಡಗೈ ಅಂಗೈಯ ಮೇಲೆ ಬಲಗೈ ಅಂಗೈಯನ್ನು ಇಟ್ಟುಕೊಂಡು)

**ಇತಿ ಪೂರ್ವೋಚ್ಚರಿತ -ಏವಂ ಗುಣ ವಿಶೇಷಣ-ವಿಶಿಷ್ಟಾಭ್ಯಾಂ- ಶುಭತಿಥೌ- ಶ್ರೀ ಮಧ್ವಾಂತರ್ಯಾಮಿನ್ ಶ್ರೀ ಸವಿತೃನಾಮಕ ಶ್ರೀ ಲಕ್ಷ್ಮೀನಾರಾಯಣ ಪ್ರೇರಣಯಾ- ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ- ಮಾಧ್ಯಾನ್ಹಿಕ ಸಂಧ್ಯಾವಂದನಾಂಗ ಅರ್ಘ್ಯಪ್ರದಾನಂ ಕರಿಷ್ಯೇ॥** (ಎಂದು ನೀರನ್ನು ತೆಗೆದುಕೊಂಡು ಪಾತ್ರೆಯಲ್ಲಿ ಬಿಡುವುದು)

ಆಸಾವಾದಿತ್ಯೋ ಬ್ರಹ್ಮ ಎಂಬುವ ಋಕ್ ಮಂತ್ರವನ್ನು ಪಠನಮಾಡಕೂಡದು. ಮಧ್ಯಾನ್ಹ ಸಂಧ್ಯಾದಲ್ಲಿ ಕೆಲವರು ಎರಡು ಅರ್ಘ್ಯಗಳನ್ನು ಕೊಡುತ್ತಾರೆ. ಕೆಲವರು ಮೂರು ಅರ್ಘ್ಯಗಳನ್ನು ಕೊಡುತ್ತಾರೆ. ಮತ್ತು ಕೆಲವರು ಮಧ್ಯಾನ್ಹಸಂಧ್ಯಾವಂದನೆಗೆ ಅಧಮಪಕ್ಷದಲ್ಲಿ ಸೂರ್ಯಾಸ್ತ ಮಾನದವರೆಗೂ ಕಾಲವ್ಯಾಪ್ತಿ ಇದ್ದಕಡೆಯಿಂದ ಕಾಲಾತಿಕ್ರಮ ಇಲ್ಲವೆಂದು ಅಭಿಪ್ರಾಯಪಟ್ಟು ಕಾಲಾತೀತಾರ್ಘ್ಯಪ್ರದಾನವನ್ನು ಮಾಡುವುದಿಲ್ಲ. ಋಷಿಮತಗಳು ಅನೇಕವಿಧವಾಗಿವೆ. ಹಿರಿಯರ ಸಂಪ್ರದಾಯದಂತೆ ಮಾಡಬಹುದು. ಎರಡು ಅರ್ಘ್ಯಮಾತ್ರವೇ ಕೊಡತಕ್ಕವರು ಮೊದಲು ಹಂಸಮಂತ್ರದಿಂದ ಒಂದು ಅರ್ಘ್ಯನಂತರ, ಮುಂದೆ ಬರುವ 'ಆಕೃಷ್ಣೇನ' ಎಂಬುವ ಋಕ್ ನಿಂದ ಎರಡನೇ ಅರ್ಘ್ಯಕೊಡುತ್ತಾರೆ. ಮೂರು ಅರ್ಘ್ಯ ಕೊಡತಕ್ಕವರು ಮೊದಲು ಹಂಸಮಂತ್ರದಿಂದ ಒಂದು ಅರ್ಘ್ಯ, ಎರಡನೆಯದು 'ಆಕೃಷ್ಣೇನ' ಎಂಬುವ ಋಕ್ ನಿಂದ, ಮೂರನೆಯದು ಅರ್ಘ್ಯ ಗಾಯತ್ರಿಯಿಂದ ಕೊಡುತ್ತಾರೆ. ಕಾಲಾತಿಕ್ರಮ ಪ್ರಾಯಶ್ಚಿತ್ತಾರ್ಘ್ಯ ಕೊಡುವವರು ಈ ಕೆಳಗೆ ಹೇಳುವ ಮಂತ್ರದಿಂದ ಅರ್ಘ್ಯವನ್ನು ಕೊಡುತ್ತಾರೆ.

ಅರ್ಘ್ಯಕ್ಕಾಗಿ ಮೀಸಲಿಟ್ಟ ನೀರಿನಲ್ಲಿ ಪ್ರಾತಸ್ಸಂಧ್ಯಾವಂದನೆಯಲ್ಲಿ ಹೇಳಿದಂತೆ 'ಯಂತ್ರರಾಜವನ್ನು ಬರೆದು.)

ಓಂ ಪ್ರತಿಚಕ್ಷ್ವೇತಿ ಮಂತ್ರಸ್ಯ । ಬ್ರಹ್ಮಾಋಷಿಃ । ಗಾಯತ್ರೀಛಂದಃ । ಸವಿತಾ ದೇವತಾ । ಅರ್ಘ್ಯಾಧಿಕಾರ ಸಿದ್ಧ್ಯರ್ಥೇ ಆತ್ಮಸಂರಕ್ಷಣಾರ್ಥೇ ಜಪೇ ವಿನಿಯೋಗಃ ।

**ಶ್ರೀಮಧ್ವಾಂತರ್ಯಾಮಿನ್ ಹರಿಃ ಓಂ ॥ ಪ್ರತಿಚಕ್ಷ್ವ ವಿಚಕ್ಷ್ವೇಂದ್ರಶ್ಚ ಸೋಮಜಾಗೃತಂ । ರಕ್ಷೋಭ್ಯೋ ವದಮಸ್ಯತಮಶನಿಂ ಯಾತುಮದ್ಭ್ಯಃ ॥ ಹರಿಃ ಓಂ ॥**(ಋ. 5 ಅ॥ 7ಅ ॥ 9ನೇ ವರ್ಗ) (ಈ ಮಂತ್ರವನ್ನು ಹೇಳಿ)

(1) ಓಂ ಹಂಸಶ್ಶುಚಿಷದಿತ್ಯಸ್ಯ ಮಂತ್ರಸ್ಯ ಗೌತಮ ಪುತ್ರೋ ವಾಮದೇವ ಋಷಿಃ । ಸೂರ್ಯೋ ದೇವತಾ । ಜಗತೀ ಛಂದಃ । ಮಾಧ್ಯಾನ್ಹಿಕ ಅರ್ಘ್ಯ ಪ್ರದಾನೇ ವಿನಿಯೋಗಃ ॥

ಶ್ರೀ ಮಧ್ವಾಂತರ್ಯಾಮಿನ್ ॥ಹರಿಃ॥ಓಂ॥ **ಹಂಸಶ್ಶುಚಿಷದ್ವಸುರಂತರಿಕ್ಷಸದ್ಧೋತಾ ವೇದಿಷದತಿಥಿರ್ದುರೋಣಸತ್ । ನೃಷದ್ವರಸದೃತಸದ್ವ್ಯೋಮ ಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಮ್ ॥ ಹರಿಃ ಓಂ ॥** (ಋ. 3 ಅ॥ 7 ಅ ॥ 14 ವ॥)

(ಎಂದು ಮೊದಲನೇ ಅರ್ಘ್ಯ ಕೊಡುವುದು)

***ಮಂತ್ರಾರ್ಥ:-*** ಈ ಮಂತ್ರಕ್ಕೆ ಹಂಸಮಂತ್ರವೆಂದು ಹೆಸರು. ಹಂಸ ಮತ್ತು ಸೂರ್ಯಶಬ್ದಗಳಿಗೆ ಪರಮಾತ್ಮನೆಂದೇ ಅರ್ಥ.

*ಹಂಸಃ(1)= ಹನಹಿಂಸಾಗತ್ಯೋಃಇತಿ ಧಾತುವಿನಿಂದ ಸಕಲಜಗತ್ಸಂಹಾರಕರ್ತ ಪರಮಾತ್ಮನೆಂದರ್ಥ ; ಋತಂ=ಸತ್ಯವಾದ ; ಹಂಸಃ=*

*ಸೂರ್ಯಾಂತರ್ಗತ ಸೂರ್ಯನಿಯಾಮಕನಾಗಿರುವ ದೋಷರಹಿತ ಸತ್ಯರೂಪನಾದ ಪರಮಾತ್ಮನು ; ಶುಚಿಷತ್(2)= ಪರಿಶುದ್ಧವಾದ ಸೂರ್ಯಮಂಡಲದಲ್ಲಿರತಕ್ಕವನು;( ಈಶಾವಾಸ್ಯೋಪನಿಷತ್ತಿನಲ್ಲಿ 'ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ' ಎಂದು ಪ್ರಮಾಣವಿದೆ. ವಸುಃ(3)= ಸರ್ವ ವ್ಯಾಪ್ತನಾಗಿರುವ ವಾಯುವಿಗೆ ನಿಯಾಮಕನಾಗಿರುವ; ಅಂತರಿಕ್ಷಸತ್(4)=ಆಕಾಶದಲ್ಲಿ ತನ್ನಿಯಾಮಕನಾಗಿರುವ; ಹೋತಾ(5)= ಹೋತಾ ಎಂಬ ಋತ್ವಿಕ್ ನಿಯಾಮಕನಾಗಿರುವ ; (ಅಥವಾ ಸರ್ವೇಂದ್ರಿಯಗಳಿಗೆ ವಿಷಯಗಳನ್ನು ಕೊಟ್ಟು ತತ್ಸಾರವನ್ನು ಅನುಭವಮಾಡತಕ್ಕವ) ; ಯಜಮಾನ ರೂಪದಿಂದ ಹವಿಸ್ಸನ್ನು ಕೊಟ್ಟು ಅಗ್ನಿರೂಪದಿಂದ ಸ್ವೀಕರಿಸುತ್ತಾನಾದ ಕಡೆಯಿಂದಲೂ ಹೋತಾ ಎಂದು ಕರೆಸಿಕೊಳ್ಳುವ. ಇದಕ್ಕೆ ಪ್ರಮಾಣವೇನೆಂದರೆ,*

*''ಬ್ರಹ್ಮಾರ್ಪಣಂ ಬ್ರಹ್ಮಹವಿಃ। ಬ್ರಹ್ಮಾಗ್ನೌ ಬ್ರಹ್ಮಣಾಹುತಂ। ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ। ಅಹಂ ಕ್ರತುರಹಂ ಯಜ್ಞಃ। ಸ್ವಧಾಹಮಹಮೌಷಧಂ। ಮಂತ್ರೋಹಮಹಮೇವಾಜ್ಯಂ। ಅಹಮಗ್ನಿರಹಂ ಹುತಂ। ಅಹಂಸಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವಚ। ನತು ಮಾಮಭಿಜಾನಂತಿ। ತತ್ವೇನಾತಶ್ಚವಂತಿ ತೇ।'' ಇತ್ಯಾದಿ ಗೀತಾವಚನವುಂಟು.*

*ವೇದಿಷತ್(6)=ವೇದಿಯಲ್ಲಿ(ಭೂಲೋಕದಲ್ಲಿ) ಇರತಕ್ಕವ; ಅತಿಥಿಃ(7)= ಅಭ್ಯಾಗತ ಪುರುಷನಾಗಿ; ದುರೋಣಸತ್(8)=ಗೃಹಗಳಲ್ಲಿರತಕ್ಕವ ನೃಷತ್=(9)(ವೈಶ್ವಾನರಾಗ್ನಿರೂಪದಿಂದ) ಮನುಷ್ಯರಲ್ಲಿರತಕ್ಕವ; ವರಸತ್(10)=ಶ್ರೇಷ್ಠಸ್ಥಾನಗಳಲ್ಲಿರತಕ್ಕವ(ಬ್ರಹ್ಮಾದಿಗಳಲ್ಲಿ) ಇರತಕ್ಕವ ; ಋತಸತ್(11)=ಸತ್ಯದಲ್ಲಿರತಕ್ಕವ ;ವ್ಯೋಮಸತ್(12)=ಅವ್ಯಾಕೃತಾಕಾಶದಲ್ಲಿ(ತದಭಿಮಾನಿ ರಮಾ) ಅಥವಾ ಸರ್ವಪ್ರಾಣಿಹೃದಯಾಕಾಶದಲ್ಲಿ ಇರತಕ್ಕವ ; ಅಬ್ಜಾಃ(13)= ಉದಕಗಳದೆಸೆಯಿಂದ ಉತ್ಪನ್ನವಾದ ಪದಾರ್ಥಗಳಲ್ಲಿರತಕ್ಕವ ; ಅಥವಾ ಗೋಜಾಃ(14)=ಗೋವುಗಳಿಂದ ಉತ್ಪತನ್ನನಾದವ; ಅಬ್ಜಾಃ=ಹಾಲುಮೊಸರು ಮೊದಲಾದ ಉತ್ತಮಪದಾರ್ಥಗಳಲ್ಲಿರತಕ್ಕವ; ಗೋಜಾಃ=ವೇದದಿಂದ ವ್ಯಕ್ತನಾದವ(ಗೋವುಗಳ ಅಂತರ್ಯಾಮಿ ಪ್ರಾದುರ್ಭೂತನಾದವ) ಋತಜಾಃ(15)=ಸತ್ಯದಿಂದ ಉತ್ಪನ್ನನ್ನಾಗತಕ್ಕವ ಅಥವಾ ಋತ ಎಂಬ ಯಜ್ಞದಲ್ಲಿ ಭೋಕ್ತೃತ್ವೇನ ಉತ್ಪನ್ನನಾದವ; ಅಥವಾ ಋತರು ಎಂಬುವ ಮುಕ್ತರುಗಳಲ್ಲಿರುವ ಜ್ಞಾನಾನಂದ ರೂಪನಾದವ ; ಅದ್ರಿಜಾಃ(16)=ಪರ್ವತಗಳ ದೆಸೆಯಿಂದ ಉತ್ಪನ್ನಗಳಾದ ಪದಾರ್ಥಗಳಲ್ಲಿ ವಾಸಮಾಡುವವ ಅನಲಾಗಿ ವೃಕ್ಷಾದಿಗಳಿಗೆ ನಿಯಾಮಕನಾದವ; ಬೃಹತ್(17)=ಪೂರ್ಣಗುಣವುಳ್ಳವ.*

### ಮೇಲೆಕಂಡ ಮಂತ್ರಗಳಲ್ಲಿ ಪ್ರತ್ಯಕ್ಷವಾಗಿ ಸೂರ್ಯನಿಗೆ ಅರ್ಘ್ಯಕೊಡತಕ್ಕದ್ದೆಂದು ಇರಲಾಗಿ ಪರಮಾತ್ಮನಿಗೆ ಅರ್ಘ್ಯ ಕೊಡಲಿಕ್ಕೆ ಪ್ರಮಾಣವೇನು?

ಆಗ್ನೇಯಪುರಾಣದಲ್ಲಿ ಮಧ್ಯಾಹ್ನ ಸಂಧ್ಯಾವಂದನೆಯನ್ನು ಈ ಕೆಳಗೆ ಕಂಡ ಪ್ರಕಾರದಿಂದ ಮಾಡಬೇಕೆಂದು ಹೇಳುತ್ತದೆ.

''ಆಪಃಪುನಂತು ಮಂತ್ರೇಣ। ಆಪೋಹಿಷ್ಠೇತಿ ಮಂತ್ರತಃ। ಪ್ರಕ್ಷಿಪ್ಯಾಂಜಲಿಂ ಸಮ್ಯಗುದುತ್ಯಂ ಚಿತ್ರಮಿತ್ರಪಿ॥
ಚಕ್ಷುರ್ದೇವಹಿತಂ ಸಮ್ಯಗ್ಧಂ ಸಶ್ಚುಚಿಷದಿತ್ಯಪಿ। ಏತೇಜ್ಜಪೇಮೂರ್ಧ್ವಬಾಹುಃ ಸೂರ್ಯಂಪಶ್ಯಸ್ಸಮಾಹಿತಃ॥
ಗಾಯತ್ರ್ಯಾತು ಯಥಾಶಕ್ತಿರುಪಸ್ಥಾಯದಿವಾಕರಂ। ಸೂರ್ಯದಿವಾಕರಶಬ್ದಾಭ್ಯಾಂ ಹರಿರೇವೋಚ್ಯತೇಬುಧೈಃ॥''
ಎಂದು ಪ್ರಮಾಣವಿದ್ದದ್ದರಿಂದ ಈ ಮೇಲೆ ಹೇಳಿದ ಅರ್ಘ್ಯಗಳು ಪರಮಾತ್ಮನಿಗೇ ಪ್ರತ್ಯಕ್ಷ ಸೂರ್ಯನಿಗಲ್ಲ. ''ಸರ್ವಚ್ಛಂದೋಭಿದೋಹ್ಯೇಷಃ। ಸರ್ವದೇವಾಭಿದೋಹ್ಯಸೌ। ಸರ್ವಲೋಕಾಭಿದೋಹ್ಯೇಷಸ್ತೇಷಾಂ ತದುಪಚಾರತಃ।'' ಎಂದು ವಾಮನಪುರಾಣವಾಕ್ಯವೂ ಉಂಟು.

### ಮಧ್ಯಾಹ್ನ ಸಂಧ್ಯಾವಂದನ ಅರ್ಘ್ಯವನ್ನು ಯಾವ ದಿಕ್ಕಿಗೆ ಅಭಿಮುಖನಾಗಿ ಕೊಡತಕ್ಕದ್ದು ?

''ಅಪ್ಸುಕ್ಷಿಪೇದರ್ಕಮುಖೋ ಮಧ್ಯಾಹ್ನೇ ಚೋತ್ತರಾಮುಖಃ।'' ಎಂದು ಶಂಖಸ್ಮೃತಿಯಲ್ಲಿ ಪ್ರಮಾಣವಿರುವುದರಿಂದ ಮಧ್ಯಾಹ್ನ ಸಂಧ್ಯಾವಂದನಾಂಗ ಅರ್ಘ್ಯವನ್ನು ಉತ್ತರಾಭಿಮುಖವಾಗಿ ಕೊಡತಕ್ಕದ್ದು.

### ಮಧ್ಯಾಹ್ನ ಸಂಧ್ಯಾವಂದನಾಂಗ ಪ್ರಯುಕ್ತ ಅರ್ಘ್ಯವನ್ನು ನಿಂತುಕೊಡಬೇಕಾ ಕೂತುಕೊಡಬೇಕಾ ?

ನಿಂತು ಕೊಡತಕ್ಕದ್ದು. (ಮಧ್ಯಾಹ್ನಯೋಸ್ತಿಷ್ಠನ್) ಎಂದು ಪ್ರಮಾಣವಿದೆ.

(2) ಆ ಕೃಷ್ಣೇನ ಇತ್ಯಸ್ಯ ಮಂತ್ರಸ್ಯ ಹಿರಣ್ಯಸ್ತೂಪ ಋಷಿಃ ಸವಿತಾ ದೇವತಾ - ತ್ರಿಷ್ಟುಪ್ ಛಂದಃ। ಮಾಧ್ಯಾಹ್ನಿಕ ಅರ್ಘ್ಯ ಪ್ರದಾನೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್ **॥ಹರಿಃ ॥ಓಂ ॥ ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ। ಹಿರಣ್ಯಯೇನ ಸವಿತಾ ರಥೇನಾ ದೇವೋ ಯಾತಿ ಭುವನಾನಿ ಪಶ್ಯನ್ ॥ ಹರಿಃ ॥ ಓಂ ॥**

(ಎಂದು ಎರಡನೇ ಅರ್ಘ್ಯವನ್ನು ಕೊಡಬೇಕು)

**ಸೂರ್ಯನ ಪರ:- ಸವಿತಾ=** ಸೂರ್ಯನು ; ಕೃಷ್ಣೇನ=ಕಪ್ಪಗಿನ ಅಂಧಕಾರಾವರ್ತವಾದ ಅಂತರಿಕ್ಷ; ಆರಜಸಾ=ಲೋಕದಿಂದ ; (ಸೂರ್ಯಾಗಮನಾತ್ ಪೂರ್ವದಲ್ಲಿ ಅಂತರಿಕ್ಷಲೋಕವು ಕೃಷ್ಣವರ್ಣವಾಗಿರುವುದು ಪ್ರಸಿದ್ಧಿಯಿದೆ.) (ಅಂತರಿಕ್ಷಮಾರ್ಗದಲ್ಲಿ) ಆವರ್ತಮಾನಃ= ಸುತ್ತುಸುತ್ತುತ್ತ ; ಅಮೃತಂ=ದೇವತೆಗಳನ್ನು ; ಮರ್ತ್ಯಃ=ಮನುಷ್ಯರುಗಳನ್ನು ;ನಿವೇಶಯನ್=ತಮ್ಮತಮ್ಮ ಸ್ವಕೀಯವಾದಂಥಾ ಸ್ಥಾನಗಳಲ್ಲಿ ಅಥವಾ ಕಾರ್ಯಗಳಲ್ಲಿ ಇರಿಸತಕ್ಕವನಾಗಿ; ಭುವನಾನಿ= ಭೂಲೋಕವನ್ನು ; ಪಶ್ಯನ್=ನೋಡುತ್ತಾ ; ಹಿರಣ್ಯಯೇನ=ಭಂಗಾರಮಯವಾದ; ರಥೇನ= ರಥದಲ್ಲಿ ಕೂತು ; ಆಯಾತಿ = ಬರುತ್ತಾ ಇದ್ದಾನೆ.

***ಪರಮಾತ್ಮ ಪರ:-*** *ಸವಿತಾ=ಸೃಷ್ಟಿಕರ್ತನಾದ ಕಡೆಯಿಂದ ಸವಿತೃಶಬ್ದವಾಚ್ಯನಾದ ನಾರಾಯಣರೂಪಿ ಪರಮಾತ್ಮನು ; ಕೃಷ್ಣೇನ=ಪಾಪದಿಂದ; ರಜಸಾ=ಅನುರಂಜನದಿಂದೇ ಎನಲಾಗಿ ಅಂತಃಕರಣದಿಂದ; ಆವರ್ತಮಾನಃ=ವಿದ್ಯಮಾನರಾಗಿ ; ಮರ್ತ್ಯಂ=ಮರಣಶೀಲರಾದಂಥಾ ಜನರನ್ನು ಅಮೃತಂ= ಮೋಕ್ಷವನ್ನು ; ಆ=ಸಮೀಚೀನವಾಗಿ; ನಿವೇಶಯನ್=ಹೊಂದುವುದಕ್ಕೋಸ್ಕರ(ಪ್ರಾಪ್ತರನ್ನಾಗಿ ಮಾಡುವುದಕ್ಕೋಸ್ಕರ) ಭುವನಾನಿ= ಸ್ವರ್ಗಲೋಕಗಳನ್ನು ; ಪಶ್ಯನ್=ನೋಡತಕ್ಕವನಾಗಿ; ಹಿರಣ್ಯಯೇನ=ಸುವರ್ಣಾತ್ಮಕವಾದ; ರಥೇನ= ರಥಾರೂಢನಾಗಿ; ಆಯಾತಿ=ಬರುತ್ತಾನೆ.*

(3) ಶ್ರೀ ಮಧ್ವಾಂತರ್ಯಾಮಿನ್ ಓಂ॥ಪ್ರಣವಸ್ಯ- ಪರಬ್ರಹ್ಮಋಷಿಃ- ಪರಮಾತ್ಮಾದೇವತಾ-ದೇವೀ ಗಾಯತ್ರೀ ಛಂದಃ -ವ್ಯಾಹೃತೀನಾಂ ಪ್ರಜಾಪತಿ ಋಷಿಃ- ಅಗ್ನಿವಾಯುಸೂರ್ಯಾ ದೇವತಾಃ। ಗಾಯತ್ರಿ- ಉಷ್ಣಿಗನುಷ್ಟುಭಃ ಛಂದಾಂಸಿ। ಗಾಯತ್ರ್ಯಾಃ ವಿಶ್ವಾಮಿತ್ರಋಷಿಃ। ಸವಿತಾ ದೇವತಾ। ಗಾಯತ್ರೀ ಛಂದಃ। ಮಾಧ್ಯಾನ್ಹಿಕ ಅರ್ಘ್ಯಪ್ರದಾನೇ-ವಿನಿಯೋಗಃ॥

(ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್) **ಓಂ ಭೂರ್ಭುವಃ ಸ್ವಃ । ತತ್ಸವಿತುರ್ವರೇಣ್ಯಂ । ಭರ್ಗೋದೇವಸ್ಯ ಧೀಮಹಿ । ಧಿಯೋಯೋ ನಃ ಪ್ರಚೋದಯಾತ್ ॥** ( ಎಂದು ಹೇಳಿ ಅರ್ಘ್ಯವನ್ನು ಕೊಟ್ಟು)

ಓಂ ಆಪೋ ಜ್ಯೋತೀರಸೋ ಅಮೃತಂ ಬ್ರಹ್ಮ ಭೂರ್ಭುವಸ್ವಃ ಓಂ॥ ಎಂದು ಗಾಯತ್ರ್ಯಾಕರ್ಷಣ ಮಂತ್ರವನ್ನು ಜಪಿಸುವುದು.

**ಪ್ರಾಯಶ್ಚಿತ್ತಾರ್ಘ್ಯಮಂತ್ರ**:- ಉತಾಯಾತೇತ್ಯಸ್ಯ ಮಂತ್ರಸ್ಯ ಭೌಮೋಽತ್ರಿಋಷಿಃ । ಅಶ್ವಿನೌ ದೇವತಾ । ತ್ರಿಷ್ಟುಪ್ ಛಂದಃ । ಮಾಧ್ಯಾನ್ಹಿಕ ಕಾಲಾತೀತಾರ್ಘ್ಯಪ್ರದಾನೇ ವಿನಿಯೋಗಃ॥

(ಶ್ರೀಮಧ್ವಾಂತರ್ಯಾಮಿನ್) ಹರಿಃ ಓಂ ॥ **ಉತಾ ಯಾತಂ ಸಂಗವೇ ಪ್ರಾತರಹ್ನೋ ಮಧ್ಯಂದಿನ । ಉದಿತಾ ಸೂರ್ಯಸ್ಯ ದಿವಾ ನಕ್ತಮವಸಾ ಶಂತಮೇನ ನೇದಾನೀಂ ಪ್ರೀತಿರಶ್ವಿನಾ ತತಾನ ॥** (ಋ. ಮಂ. 5-76-3)

**ಮಂತ್ರಾರ್ಥ:-** *( ಉತಾಯಾತಾ ಎಂಬ ಮಂತ್ರಕ್ಕೆ ಭೌಮೋತ್ರಿಋಷಿಯು. ಅಶ್ವಿನೀದೇವತೆಗಳು; ತ್ರಿಷ್ಟುಪ್ ಛಂದಸ್ಸು , ಕಾಲಮೀರಿದ್ದಕ್ಕಾಗಿ ಪ್ರಾಯಶ್ಚಿತ್ತಾರ್ಘ್ಯಕೊಡುತ್ತಿದ್ದೇನೆ.)*

*ಪದವಿಭಾಗ:[11] ಉತ, ಆ , ಯಾತಂ, ಸಂಗವೇ, ಪ್ರಾತಃ, ಅಹ್ನಃ, ಮಧ್ಯಂದಿನೇ । ಉತ್ , ಇತಾ, ಸೂರ್ಯಸ್ಯ, ದಿವಾ, ನಕ್ತಂ, ಅವಸಾ, ಶಂತಮೇನ । ನ , ಇದಾನೀಂ, ಪೀತಿಃ, ಅಶ್ವಿನಾ, ಆ, ತತಾನ ॥*

*ಎಲೈ ಅಶ್ವಿನೀದೇವತೆಗಳಿರಾ ; ಉತ=ಮತ್ತು ; ಆಯಾತಂ=ಬರತಕ್ಕವರಾಗಿರಿ; ಗೋವುಗಳು ರಾತ್ರಿಕಾಲದಲ್ಲಿ ಹಿಮತೃಣಗಳನ್ನು ಭಕ್ಷಣಮಾಡಿ ಸಂಗವಕಾಲದಲ್ಲಿ ಕ್ಷೀರವನ್ನು ದೋಹನಮಾಡಲು ಹಾಲುಕರೆವ ಸ್ಥಳಕ್ಕೆ ಹೇಗೆ ಬರುತ್ತವೆಯೋ ಹಾಗೆ ನೀವುಗಳೂ, ಪ್ರಾತಃ=ಪ್ರಾತಃ ಕಾಲದಲ್ಲೂ; ಸಂಗವೇ=ಸಂಗವಕಾಲದಲ್ಲೂ; ಅಹ್ನಃ ಮಧ್ಯಂದಿನೇ=ಮಧ್ಯಾನ್ಹಕಾಲದಲ್ಲೂ; ಸೂರ್ಯಸ್ಯ=ಸೂರ್ಯನ; ಉದಿತಾ=ಸಮೃದ್ಧಿಕಾಲದಲ್ಲಿ; ತಥಾ= ಹಾಗೆಯೇ; ದಿವಾನಕ್ತಂ=ಹಗಲು ರಾತ್ರಿಗಳಲ್ಲಿಯೂ; ಸಾಯಂಕಾಲದಲ್ಲಿಯೂ, ಉಪಲಕ್ಷಣಯಾ ಸದಾಕಾಲದಲ್ಲೂ ; ಶಂತಮೇನ=ಅತ್ಯಂತ ಸುಖಕರವಾದ; ಅವಸಾ=ರಕ್ಷಣೆ ಮಾಡತಕ್ಕ ಹವಿಸ್ಸಿನ ನಿಮಿತ್ತದಿಂದ; ಆಯಾತಂ=ಬರುವವರಾಗಿರಿ.*

---

(11) ಈ ಅರ್ಥವನ್ನು ಶ್ರೀಕಡ್ಡೀಶ್ರೀನಿವಾಸಾಚಾರ್ಯರ ಪುಸ್ತಕದಿಂದ ಬರೆದಿದೆ.)